ಸಂಪುಟ: 05 ಸಂಚಿಕೆ: 297 ಪುಟಗಳು: 08 ಶನಿವಾರ 10 ಜನವರಿ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

**ಮುಂಜಾನೆ ಮಾತು**
ಬದುಕುವ ಆಸೆ ಇದ್ದರೆ ನಿನ್ನ ಶತ್ರುಗಳ ಕಣ್ಣೆದುರಲ್ಲೇ ಬದುಕು ಅವರು ನಿನ್ನ ಎದುರು ಸುಳಿದಾಗೆಲ್ಲಾ ನಿನ್ನಲ್ಲಿ ಬದುಕುವ ಛಲ ಹೆಚ್ಚುತ್ತದೆ

**ಉದಯ ವಾಹಿನಿ**
UV
ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

# 2023ರ ಚುನಾವಣೆಯಲ್ಲಿನ ಡಿಕೆಶಿ ಭವಿಷ್ಯ: 2028ರ ಎನ್‌ಡಿಎ ಮ್ಯಾಜಿಕ್ ನಂಬರ್ ರಹಸ್ಯ ಬಹಿರಂಗ

• ಉದಯವಾಹಿನಿ, ಬೆಂಗಳೂರು

2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಇಂತಿಷ್ಟೇ ಸೀಟ್‌ಅನ್ನು ಗೆಲ್ಲುತ್ತೆ ಎಂದು ಡಿಕೆ ಶಿವಕುಮಾರ್ ಕರಾರುವಾಕ್ಕಾಗಿ ಹೇಳಿದ್ದರು. ಅದರಂತೆಯೇ, ಕಾಂಗ್ರೆಸ್ 135 ಸ್ಥಾನವನ್ನು ಗೆದ್ದಿತ್ತು. ಈಗ ಅದೇ ರೀತಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಎನ್‌ಡಿಎ ಮೈತ್ರಿಕೂಟ ಗೆಲ್ಲುವ ನಂಬರ್ ರಹಸ್ಯ ಬಹಿರಂಗ ಪಡಿಸಿದ್ದಾರೆ.

ಮುಂದಿನ ರಾಜ್ಯದ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳ ಎನ್ಡಿಎ ಮೈತ್ರಿಕೂಟವು 150 ಕ್ಷೇತ್ರಗಳಲ್ಲಿ ಜಯ ಸಾಧಿಸಲಿದೆ. ಆ ನಿಟ್ಟಿನಲ್ಲಿ ಎರಡೂ ಪಕ್ಷಗಳು ಸೇರಿ ಕೆಲಸ ಮಾಡುತ್ತಿದ್ದೇವೆ ಎಂದು ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು. ನಿಖಿಲ್ ಹೇಳಿಕೆ ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಬಿಜೆಪಿಯಲ್ಲಿ ಜೆಡಿಎಸ್ ವಿಲೀನ ಆದರೆ ಒಳ್ಳೆಯದು ಎನ್ನುವ ಡಿಸಿಎಂ ಡಿಕೆ ಶಿವಕುಮಾರ್ ಹೇಳಿಕೆಗೆ ನಿಖಿಲ್ ಕುಮಾರಸ್ವಾಮಿ ತಿರುಗೇಟು ನೀಡಿದರು. ನಮ್ಮ ಪಕ್ಷದ ಕಥೆ ಇರಲಿ. ಬಿಹಾರದಲ್ಲಿ ಕಾಂಗ್ರೆಸ್ ಪಕ್ಷ ಎಲ್ಲಿ ಬಂದು ನಿಂತಿದೆ ಎಷ್ಟು ಡಿಜಿಟ್‌ಗೆ ಬಂದು ನಿಂತಿದೆ. ಬಿಹಾರ ಅಷ್ಟೇ ಅಲ್ಲ, ಇನ್ನೂ ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್ ಎಷ್ಟೆಷ್ಟು ಸ್ಥಾನ ಕಳಿಸಿದೆ ಎಂದು ವ್ಯಂಗ್ಯವಾಡಿದ್ದಾರೆ.

ಕಳೆದ ಹಲವು ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ ಗಳಿಕೆಯಷ್ಟು ಅಲ್ಲಿ ಡಿಕೆಶಿ ಅವರು ತಮ್ಮ ಪಕ್ಷವನ್ನು ಯಾವ ಪಕ್ಷದಲ್ಲಿ ವಿಲೀನ ಮಾಡಿದ್ದಾರೆ ಎನ್ನುವುದನ್ನು ಮೊದಲು ಹೇಳಲಿ.



ಜೆಡಿಎಸ್ ಕಳೆದ ವಿಧಾನಸಭೆ ಚುನಾವಣೆಯಲ್ಲಿ 19 ಕ್ಷೇತ್ರಗಳಲ್ಲಿ ಗೆದ್ದಿದೆ. ಅದೇ ಬಿಹಾರ, ಮಹಾರಾಷ್ಟ್ರ, ದೆಹಲಿ ಮುಂತಾದ ರಾಜ್ಯಗಲ್ಲಿ ಎಷ್ಟು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದಿದೆ ಮೊದಲು ರಾಷ್ಟ್ರೀಯ ಪಕ್ಷ ಎನ್ನುವ ಬೋರ್ಡ್ ತೆಗೆದುಹಾಕಿ ಬೇರೆ ಹಾಕಿಕೊಳ್ಳಿ ಎಂದು ಡಿಕೆಶಿ ವಿರುದ್ಧ ನಿಖಿಲ್ ಕುಮಾರಸ್ವಾಮಿ ಹರಿಹಾಯ್ದರು.

**ಬಿಜೆಪಿ ಜೊತೆ ವಿಲೀನ ಆಗಿ ಎಂದಿದ್ದ ಡಿಕೆಶಿಗೆ ತಿರುಗೇಟು**

ನಾನು ರಾಜಕಾರಣ ಮಾಡೋದಕ್ಕೆ ಬಂದಿರೋದು. ವಿಧಾನಸೌಧಕ್ಕೆ ಹೋಗೋದಕ್ಕೆ ನಾನು ರಾಜಕಾರಣಕ್ಕೆ ಬಂದಿದ್ದೇನೆ ಎಂಬುದನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ ಎಂದು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ನಿಖಿಲ್ ಕುಮಾರಸ್ವಾಮಿ ಸ್ಪಷ್ಟವಾಗಿ ಹೇಳಿದರು.

ಹಳೆಯ ಮೈಸೂರು ಭಾಗದಲ್ಲಿ ಜೆಡಿಎಸ್ 37% ಮತ ಪಾಲು (ವೋಟ್ ಶೇರ್) ಹೊಂದಿದೆ. ಅದೇ ರೀತಿ ಕಲ್ಯಾಣ ಕರ್ನಾಟಕ ಭಾಗದಲ್ಲಿಯೂ ನಮ್ಮ ಬಲಿಷ್ಟವಾಗಿದೆ. ಎಷ್ಟು ಪರ್ಸೆಂಟ್ ವೋಟು ಪಡೆದಿದ್ದೇವೆ ಎನ್ನುವುದನ್ನು ಅಂಕಿಅಂಶಗಳು ಹೇಳುತ್ತವೆ. ಇನ್ನು ಕಿತ್ತೂರು ಕರ್ನಾಟಕ, ಕರಾವಳಿ ಭಾಗದಲ್ಲಿಯೂ ನಮ್ಮ ಪಕ್ಷವಿದೆ. ಜೆಡಿಎಸ್ ರಾಜ್ಯದ ಉದ್ದಗಲಕ್ಕೂ ಇರುವ ಪ್ರಾದೇಶಿಕ ಪಕ್ಷ ಎಂದು ನಿಖಿಲ್ ಕುಮಾರಸ್ವಾಮಿ, ಡಿಕೆಶಿಗೆ ತಿರುಗೇಟು ಕೊಟ್ಟರು.

ಸವದತ್ತಿಯಲ್ಲಿ 30,000 ವೋಟ್ ಪಡೆದು ಪಕ್ಷ ಗಟ್ಟಿಯಾಗಿದೆ. ಅದೇ ರೀತಿ ಸೇಡಂ, ರಾಯಭಾಗ, ಶೃಂಗೇರಿ ಸೇರಿ ಅನೇಕ ಕ್ಷೇತ್ರದಲ್ಲಿ ಹೆಚ್ಚು ಮತಗಳನ್ನು ಪಡೆದಿದ್ದೇವೆ. ಕಾಂಗ್ರೆಸ್ ಪಕ್ಷದಲ್ಲಿರುವ ಕೆಲ ವ್ಯಕ್ತಿಗಳು ಜೆಡಿಎಸ್ ಶಕ್ತಿಯನ್ನು ಪ್ರಶ್ನೆ ಮಾಡಬಹುದು. ನಮ್ಮ ಪಕ್ಷದ ಶಕ್ತಿ ಏನು ಎಂಬುದನ್ನು ಕಳೆದ ನಾಲ್ಕು ವಿಧಾನಸಭೆ ಚುನಾವಣೆಗಳಲ್ಲಿ ರಾಜ್ಯದ ಜನ ತೋರಿಸಿದ್ದಾರೆ. 55 ಲಕ್ಷ ಜನರು ಜೆಡಿಎಸ್ ಪಕ್ಷಕ್ಕೆ ಬೆಂಬಲ ನೀಡಿದ್ದಾರೆ ಎಂದು ವಿಲೀನ ಮಾಡಿ ಎಂದ ಡಿಕೆ ಶಿವಕುಮಾರ್‌ಗೆ ನಿಖಿಲ್ ಟಾಂಗ್ ಕೊಟ್ಟರು.

ರಾಜ್ಯದಲ್ಲಿ ಜೆಡಿಎಸ್ ಮತ್ತು ಬಿಜೆಪಿ ನಡುವೆ ಸಹಜ ಮೈತ್ರಿ ಏರ್ಪಟ್ಟಿದೆ. ಲೋಕಸಭೆ ಚುನಾವಣೆಯಲ್ಲಿ ನಮ್ಮ ಒಗ್ಗಟ್ಟಿನ ಶಕ್ತಿ ಕಾಂಗ್ರೆಸ್ ಪಕ್ಷಕ್ಕೆ ಗೊತ್ತಾಗಿದೆ.

ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಮೈತ್ರಿಯ ಬಲ ತಿಳಿಯಲಿದೆ ನಮ್ಮ ಹಾಗೂ ಬಿಜೆಪಿಯ ಮೈತ್ರಿ ಸ್ವಾಭಾವಿಕ, ಹಾಗೂ ಕಾರ್ಯಕರ್ತರ ಪ್ರೀತಿ ವಿಶ್ವಾಸದಿಂದ ಆಗಿರುವ ಮೈತ್ರಿ ಇದು ಎಂದು ನಿಖಿಲ್ ಕುಮಾರಸ್ವಾಮಿ ಒತ್ತಿ ಹೇಳಿದರು.

## ಡ್ರಗ್ಸ್ ಜಾಗೃತಿ ಪ್ರಚಾರಕ್ಕೆ ರಾಜೀವ್ ವಿ.ವಿ ಪತ್ರ

• ಉದಯವಾಹಿನಿ, ಬೆಂಗಳೂರು

ಚಿತ್ರಮಂದಿರ, ಮಲ್ಟಿಪ್ಲೆಕ್ಸ್ ಗಳಲ್ಲಿ ಚಲನಚಿತ್ರ ಪ್ರದರ್ಶನದ ವೇಳೆ ಮಾದಕ ದ್ರವ್ಯಗಳ ಅಪಾಯ ಕುರಿತು ಜಾಗೃತಿ ಮೂಡಿಸುವ ಜಾಹೀರಾತುಗಳ ಪ್ರಸಾರ ಕಡ್ಡಾಯಗೊಳಿಸುವಂತೆ ಕೋರಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯಕ್ಕೆ ಪತ್ರ ಬರೆಯಲು ನಿರ್ಧರಿಸಿದೆ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಸಿ.ಭಗವಾನ್, 'ಕರ್ನಾಟಕವನ್ನು ಮಾದಕ ದ್ರವ್ಯ ಮುಕ್ತ ರಾಜ್ಯವನ್ನಾಗಿ ಮಾಡಲು ವಿಶ್ವವಿದ್ಯಾಲಯ ಯೋಜನೆ ರೂಪಿಸಿದೆ. ಮಾದಕ ದ್ರವ್ಯಗಳ ದುಷ್ಪರಿಣಾಮಗಳ ಬಗ್ಗೆ ಯುವಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಪ್ರಸ್ತುತ ಚಿತ್ರ ಪ್ರದರ್ಶನದ ವೇಳೆ ತಂಬಾಕು ಬಳಕೆಯ ಅಪಾಯ ಕುರಿತು ಜಾಹೀರಾತುಗಳು ಪ್ರಸಾರವಾಗುತ್ತಿವೆ. ಅದೇ ರೀತಿ ಮಾದಕ ದ್ರವ್ಯಗಳ ವಿರುದ್ಧ ಜಾಗೃತಿ ಮೂಡಿಸುವ ಜಾಹೀರಾತು. ವಿಡಿಯೊ ಪ್ರಸಾರವಾಗಬೇಕಿದೆ ಎಂದರು. 'ಸಾರಿಗೆ ಬಸ್‌ಗಳು, ಮೆಟ್ರೊ ರೈಲುಗಳು, ಪ್ರಮುಖ ನಿಲ್ದಾಣಗಳಲ್ಲಿ ಜಾಗೃತಿ ಸಂದೇಶಗಳನ್ನು ಹಾಕಲು ಅವಕಾಶ ನೀಡುವಂತೆ ಸರ್ಕಾರಕ್ಕೂ ಮನವಿ ಮಾಡಲಾಗಿದೆ.

## ಮಲೆಯಾಳ ಕಡ್ಡಾಯ: ಪಿಣರಾಯಿಗೆ ಸಿಎಂ ಸಿದ್ದರಾಮಯ್ಯ ಪತ್ರ

• ಉದಯವಾಹಿನಿ, ಬೆಂಗಳೂರು

ಕೇರಳ ಸರ್ಕಾರ ರೂಪಿಸಿರುವ ಮಲಯಾಳ ಭಾಷಾ ಮಸೂದೆ ಕುರಿತು ಆತಂಕ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು. ಈ ಕುರಿತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಪತ್ರ ಬರೆದಿದ್ದಾರೆ.

'ಸಂವಿಧಾನವು ಭಾಷಾ ಅಲ್ಪಸಂಖ್ಯಾತರಿಗೆ ದೃಢವಾದ ರಕ್ಷಣೆ ಒದಗಿಸಿದೆ. ಕನ್ನಡ ಭಾಷೆಯ ಮೇಲೆ ಕರ್ನಾಟಕಕ್ಕೆ ಅಪಾರ ಹೆಮ್ಮೆ ಇದೆ. ನಮ್ಮ ಭಾಷೆಯ ಪ್ರೋತ್ಸಾಹ ಮತ್ತೊಂದು ಭಾಷೆಯ ಮೇಲೆ ಹೇರಿಕೆಯಾಗಬಾರದು ಎಂಬ ತತ್ವವನ್ನು ಪಾಲಿಸಿಕೊಂಡು ಬಂದಿದ್ದೇವೆ. ಈ ನಂಬಿಕೆಯೇ ನಮ್ಮ ನೀತಿ, ಸೌಹಾರ್ದಕ್ಕೂ ಮೂಲವಾಗಿದೆ. ಮಸೂದೆ ಜಾರಿಯಾದರೆ ಅದನ್ನು ವಿರೋಧಿಸುತ್ತೇವೆ. ಗಡಿನಾಡ ಕನ್ನಡಿಗರ ರಕ್ಷಣೆಗೆ ನಿಲ್ಲಲಿದ್ದೇವೆ. ಹಾಗಾಗಿ, ಮಸೂದೆ ಹಿಂಪಡೆಯಬೇಕು' ಎಂದು ಒತ್ತಾಯಿಸಿದ್ದಾರೆ.

## ಭೈರತಿ ನಿರೀಕ್ಷಣಾ ಜಾಮೀನು ರದ್ದು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ

• ಉದಯವಾಹಿನಿ, ನವದೆಹಲಿ

ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದ ಐದನೇ ಆರೋಪಿಯಾಗಿರುವ ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಭೈರತಿ ಬಸವರಾಜ ಅವರಿಗೆ ಹೈಕೋರ್ಟ್ ನೀಡಿರುವ ಮಧ್ಯಂತರ ನಿರೀಕ್ಷಣಾ ಜಾಮೀನು ರದ್ದುಪಡಿಸಬೇಕು ಎಂದು ಕೋರಿ ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದೆ. ಈ ಅರ್ಜಿಯು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠದಲ್ಲಿ ಸೋಮವಾರ ವಿಚಾರಣೆಗೆ ಬರಲಿದೆ. ಮಿನಿ ಅವೆನ್ಯೂ ರಸ್ತೆಯಲ್ಲಿರುವ ಸೇಫ್ ಮೆಡಿಕಲ್ ಸ್ಟೋರ್ ಮುಂಭಾಗ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವುನನ್ನು 2025ರ ಜುಲೈ 15ರಂದು 8 ರಿಂದ 9 ಜನರಿದ್ದ ಗುಂಪು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿತ್ತು. ಈ ಸಂಬಂಧ ಭಾರತಿನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪ್ರಕರಣದಲ್ಲಿ ಭೈರತಿ ಬಸವರಾಜ ಐದನೇ ಆರೋಪಿಯಾಗಿದ್ದಾರೆ.

## ಕುಮಾರಸ್ವಾಮಿ ಹೇಳಿದ್ದು ಸರಿ

## ಗೃಹ ಇಲಾಖೆಯಲ್ಲಿ ಡಿಕೆಶಿ ಹಸ್ತಕ್ಷೇಪ



# ಡಿಕೆ ಎಚ್ ಡಿಕೆ ಡಿಶುಂ ಡಿಶುಂ

**ಎಚ್‌ಡಿಕೆ ಹೇಳಿಕೆಯಿಂದ ಅಲ್ಲೋಲ ಕಲ್ಲೋಲ**

**ಎಚ್‌ಡಿಕೆ ಡಿಕೆಶಿ ನಡುವೆ ಗೃಹಖಾತೆ ಒತ್ತುವರಿ**

• ಉದಯವಾಹಿನಿ, ಬೆಂಗಳೂರು

ಗೃಹ ಇಲಾಖೆಯಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಅವರು ನೀಡಿರುವ ಹೇಳಿಕೆ ಕಾಂಗ್ರೆಸ್ ಪಾಳಯದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದೆ. ಬಳ್ಳಾರಿಯಲ್ಲಿ ನಡೆದ ಗಲಾಟೆ ಪ್ರಕರಣದ ಹಿನ್ನೆಲೆ ಪ್ರತಿಕ್ರಿಯೆ ನೀಡಿದ್ದ ಅವರು, ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಸಭೆ ನಡೆಸಲು ಡಿಕೆ ಶಿವಕುಮಾರ್ ಅವರಿಗೆ ಅಧಿಕಾರ ಕೊಟ್ಟವರು ಯಾರು ರಾಜ್ಯದಲ್ಲಿ ಇರುವುದು ರಬ್ಬರ್ ಸ್ಟ್ಯಾಂಪ್ ಗೃಹ ಸಚಿವರೇ ಎಂದು ಪ್ರಶ್ನಿಸಿದ್ದರು.

ಎಚ್‌ಡಿ ಕುಮಾರಸ್ವಾಮಿ ಅವರು ನೀಡಿರುವ ಈ ಹೇಳಿಕೆ ಕಾಂಗ್ರೆಸ್ ಪಾಳಯದಲ್ಲಿ ಭಾರೀ ಚರ್ಚೆಗೆ ಎಡೆಮಾಡಿಕೊಟ್ಟಿದೆ. ಈ ಕುರಿತಾಗಿ ಸಚಿವರು ಶಾಸಕರು ಪ್ರತಿಕ್ರಿಯೆ ನೀಡಿದ್ದಾರೆ. ಈ ಕುರಿತಾಗಿ ಮಾಜಿ ಸಚಿವ ಕೆ ಎನ್ ರಾಜಣ್ಣ ಮಾತನಾಡಿ, ''ಕುಮಾರಸ್ವಾಮಿ ಮುಖ್ಯಮಂತ್ರಿ ಇದ್ದಾಗ ಮಂತ್ರಿಗಳ ಖಾತೆಯಲ್ಲಿ ಎಷ್ಟು ಹಸ್ತಕ್ಷೇಪ ಮಾಡಿದ್ದಾರೆ ಎನ್ನುವ ದೊಡ್ಡ ಲಿಸ್ಟೇ ಕೊಡ್ತೇನೆ. ಒಬ್ಬ ಹಿರಿಯ ಸಚಿವರಾಗಿ ಜನರ ಹಿತದೃಷ್ಟಿಯಿಂದ ಉತ್ತಮ ಸಲಹೆಗಳನ್ನು ಕೊಡಲಿಕ್ಕೆ ಅಧಿಕಾರ ಇದೆ'' ಎಂದರು.

ಸಾಮಾನ್ಯ ಜನರಿಂದ ಮಂತ್ರಿ ಅವರಿಗೂ ಕೂಡ ಅಧಿಕಾರ ಇದೆ. ಬಳ್ಳಾರಿ ಪರಿಸ್ಥಿತಿ ತಿಳಿ ಮಾಡೋದಕ್ಕೆ ಏನು ಮಾಡ್ಬೇಕಾಗಿತ್ತು, ಆ ಮಾಹಿತಿ ಆಧರಿಸಿ ಕೆಲ ಸಲಹೆಗಳನ್ನು ನೀಡಿರುತ್ತಾರೆ. ಸಲಹೆಗಳನ್ನು ನೀಡುವುದು ಆದೇಶ ಎಂದು ಆಗೋದಿಲ್ಲ ಎಂದು ಡಿಕೆ ಶಿವಕುಮಾರ್ ನಡೆಯನ್ನು ಸಮರ್ಥಿಸಿಕೊಂಡರು. ಇದೇ ವಿಚಾರವಾಗಿ ಸಚಿವ ಸತೀಶ್ ಜಾರಕಿಹೊಳಿ ಪ್ರತಿಕ್ರಿಯೆ ನೀಡಿ, ಜಿಲ್ಲೆಗಳಿಗೆ ಹೋದಾಗ ಅಲ್ಲಿ ಹೋದಾಗ ಸಭೆ ಮಾಡಿರುತ್ತಾರೆ. ಸಚಿವರಾಗಿ ಸಂಬಂಧ ಇಲ್ಲದಿದ್ದರೂ ಸಭೆ ಮಾಡಿರಬಹುದು. ಅದನ್ನು ತಪ್ಪು ಎಂದು ಹೇಗೆ ಹೇಳುತ್ತೀರಿ ಅವರ ಜಾಗದಲ್ಲಿ ಬೇರೆಯವರಿದ್ರೂ ಮಾಡ್ತಿದ್ರು. ಅದನ್ನು ತಪ್ಪು ಅಂತ ಹೇಳುವುದಕ್ಕೆ ಬರುವುದಿಲ್ಲ ಎಂದರು.

## ಹೆಚ್‌ಡಿಕೆ ಜಟಾಪಟಿ ನಡುವೆ ಪರಮೇಶ್ವರ್ ಎಂಟ್ರಿ



ಬಳ್ಳಾರಿ ಗಲಾಟೆ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡಿದ್ದ ಎಚ್ ಡಿ ಕುಮಾರಸ್ವಾಮಿ, ಡಿಕೆ ಶಿವಕುಮಾರ್ ಅವರು ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಸಭೆಯನ್ನು ಯಾವ ಅಧಿಕಾರದ ಮೇಲೆ ನಡೆಸಿದ್ದಾರೆ ಗೃಹ ಇಲಾಖೆಯಲ್ಲಿ ಇವರ ಹಸ್ತಕ್ಷೇಪ ಯಾಕೆ ಡಿಸಿಎಂ ಎಂದರೆ ಕೇವಲ ಮಂತ್ರಿ ಅಷ್ಟೇ ಎಂದು ಹೇಳಿಕೆ ನೀಡಿದ್ದರು.ಬಳ್ಳಾರಿಯಲ್ಲಿ ನಡೆದ ಇಡೀ ಪ್ರಕರಣವನ್ನು ಮುಚ್ಚಿಹಾಕಲು ರಾಜ್ಯ ಸರ್ಕಾರ ತರಾತುರಿಯಲ್ಲಿ ಕೆಲಸ ಮಾಡುತ್ತಿದೆ. ಕೊಲೆಯಾದ ಕಾರ್ಯಕರ್ತನ ಮೃತದೇಹವನ್ನು ತರಾತುರಿಯಲ್ಲಿ ಸುಟ್ಟುಹಾಕಿದ್ದು ಏಕೆ ಎಂದು ಪ್ರಶ್ನಿಸಿದ್ದರು.

**ಮೀಡಿಯಾ ಹುಲಿ ಎಂದು ತಿರುಗೇಟು:** ಇದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್, ''ಅವರ ಅನುಭವದ ಕಾಲುವೆಯಲ್ಲಿ ಹರಿಯುತ್ತಿರುವುದು ಬರೀ ಸುಳ್ಳು, ಹಿಟ್ ಅಂಡ್ ರನ್, ಅವಕಾಶವಾದ, ಆತ್ಮರತಿ ಎಂಬ ಕೊಚ್ಚೆ. ಬಳ್ಳಾರಿ ಗಲಭೆಯಲ್ಲಿ ಮೃತಪಟ್ಟ ರಾಜಶೇಖರ ರೆಡ್ಡಿ ಶವದ ಡಬಲ್ ಪೋಸ್ಟ್ ಮಾರ್ಟಮ್ ಮಾಡಿದ್ದಾರೆ ಅಂತ ಪುಂಗಿದ್ದು, ಅರ್ಜಿ ಹಾಕದಿದ್ದರೂ ಮಂಡ್ಯದಲ್ಲಿ ಕೈಗಾರಿಕೆಗೆ ಜಮೀನು ಕೊಡುತ್ತಿಲ್ಲ ಎಂದು ಆರೋಪ ಮಾಡಿದ್ದು ಕುಮಾರಸ್ವಾಮಿ ಸುಳ್ಳುಗಳಿಗೆ ಸಣ್ಣ ಸ್ಯಾಂಪಲ್'' ಎಂದರು.

'ಪೇಪರ್ ಟೈಗರ್' ಕುಮಾರಣ್ಣ ಮೀಡಿಯಾ ಮುಂದೆ ರಾಜಕಾರಣ ಮಾಡೋ ಬದಲು ನಿನ್ನ ಪಟಾಲಾಂ ಕರ್ಕೊಂಡು ಬಳ್ಳಾರಿಗೆ ಹೋಗಿ ಎರಡು ಬಾರಿ ಪೋಸ್ಟ್ ಮಾರ್ಟಮ್ ಆಗಿದೆಯೋ ಇಲ್ವೋ ಅಂತ ಸ್ವಲ್ಪ ತಿಳ್ಕೋಳಿ.

ಬೆಂಗಳೂರು ದಕ್ಷಿಣ ಜಿಲ್ಲೆ ಬಿಡದಿಯ ಕೇತಗಾನಹಳ್ಳಿಯಲ್ಲಿ ದಲಿತರ ಜಮೀನಿಗೆ ಬೇಲಿ ಹಾಕಿರೋರು ಯಾರು ಕುಮಾರಣ್ಣ ಕೋತಿ ತಿಂದು ಮೇಕೆ ಬಾಯಿಗೆ ಒರೆಸಿದಂತೆ ಆಡ್ಬೇಡಿ ಎಂದಿದೆ.

**ರೈತರಿಗೆ ಎಕರೆಗೆ ಪರಿಹಾರ**

ಕೃಷ್ಣಾ ಮೇಲ್ದಂಡೆ ಯೋಜನೆ ಯೋಜನೆ ಮುಳುಗಡೆ ಸಂತ್ರಸ್ತರಿಗೆ ಬೊಮ್ಮಾಯಿ ಸರ್ಕಾರ 20, 25 ಲಕ್ಷ ಪ್ರತಿ ಎಕರೆಗೆ ಪರಿಹಾರ ನೀಡಲು ನಿರ್ಧರಿಸಿತ್ತು. 1,33,867 ಎಕರೆ ಮುಳುಗಡೆಯಾಗಲಿದ್ದು, ನಮ್ಮ ಸರ್ಕಾರ ಪ್ರತಿ ಎಕರೆಗೆ 30 - 40 ಲಕ್ಷ ಪರಿಹಾರ ನೀಡಲು ತೀರ್ಮಾನಿಸಲಾಗಿದೆ. ಇದಕ್ಕಾಗಿ 70 ಸಾವಿರ ಕೋಟಿ ವಿತರಣೆ ಮಾಡಲಾಗುವುದು. ಇನ್ನು ಕಾಲುವೆ ಭೂ ಸಂತ್ರಸ್ಥರಿಗೆ 25, 30 ಲಕ್ಷ ಪರಿಹಾರ ನೀಡಲು ನಿರ್ಧರಿಸಿದ್ದೇವೆ ಎಂದರು. ಯುಕೆಪಿ ಭಾಗದ ಅನೇಕ ರೈತರು ಕೋರ್ಟ್ ಮೆಟ್ಟಿಲೇರಿದ್ದು, 29 ಸಾವಿರ ಪ್ರಕರಣಗಳು ಇವೆ. ಒಪ್ಪಿತ ಭೂಸ್ವಾಧೀನ ಪ್ರಕ್ರಿಯೆ ಮಾಡಬೇಕು ಎಂದು ನಿಮ್ಮ ನಾಯಕರ ಒತ್ತಡದ ಮೇರೆಗೆ ಸರ್ಕಾರದ ಮೇಲೆ ಆರ್ಥಿಕ ಹೊರೆ ಬಿದ್ದರೂ ನಾವು ಈ ತೀರ್ಮಾನ ಮಾಡಿದ್ದೇವೆ. ನೀವೆಲ್ಲರೂ ಸರ್ಕಾರದ ಪರಿಹಾರ ಪಡೆದು ಭೂಮಿಯನ್ನು ನೀಡಬೇಕು' ಎಂದು ಮನವಿ ಮಾಡಿದರು.

ನಿಮಗೆ ಭೂ ಕಬ್ಜ, ಒತ್ತುವರಿ ಕರತಲಾಮಲಕ. ಅದೇ ರೀತಿ ಮತ್ತೊಬ್ಬ ಸಚಿವರ ಖಾತೆಯನ್ನು ಒತ್ತುವರಿ ಮಾಡುವುದರಲ್ಲಿಯೂ ನೀವು ನಿಸ್ಸೀಮರು. ಅದನ್ನಷ್ಟೇ ನಾನು ಹೇಳಿದ್ದು.. ತಾವು ಡಿಸಿಎಂ ಆಗಿ ರಬಹುದು. ಆದರೆ ಮಂತ್ರಿ ಪದವಿಗೆ ಇರುವಷ್ಟೇ ಶಿಷ್ಟಾಚಾರ, ಅಧಿಕಾರ ವ್ಯಾಪ್ತಿ ಆ ಹುದ್ದೆಗಿದೆ ಎನ್ನುವುದು ಗೊತ್ತಿಲ್ಲವೇ ಅದಕ್ಕೇನು ಎಕ್ಸ್'ಟ್ರಾ ಕೊಂಬು, ಕೋಡು ಇರಲ್ಲ. ಇರಲಿ ಎಂದು ತಾವು ಸಿಕ್ಕಿಸಿಕೊಳ್ಳೋದಕ್ಕೂ ಬರಲ್ಲ. ನಿಮ್ಮ ಎಕ್ಸ್'ಪೀರಿಯನ್ಸ್ ಗೆ ಈ ಸಣ್ಣ ವಿಷಯವೂ ತಟ್ಟಲಿಲ್ಲವೇ ಮಿಸ್ಟರ್ ಡಿಕೆಶಿ ಅವರೇ ಎಂದು ಬರೆಯುವ ಮೂಲಕ ಡಿಕೆಶಿಗೆ ಟಾಂಗ್ ಕೊಟ್ಟಿದ್ದಾರೆ.

**ಒತ್ತುವರಿಯಲ್ಲೇ ನಿಸ್ಸೀಮರು**

**ಡಿಕೆಶಿ ಪರ ಬ್ಯಾಟಿಂಗ್**

ಡಿಕೆಶಿ ಅವರು ಜವಾಬ್ದಾರಿ ಸಚಿವರು, ಡಿಸಿಎಂ ಹಾಗೂ ಕ್ಯಾಬಿನೆಟ್ ಸಚಿವರು. ನಾನು ಹೋಗಲು ಆಗಲಿಲ್ಲ ಅಂತ ಡಿಕೆ ಶಿವಕುಮಾರ್ ಹೋಗಿದ್ದಾರೆ. ಡಿಕೆಶಿ ಸರ್ಕಾರದ ಪ್ರತಿನಿಧಿಯಾಗಿ, ಮಾನವೀಯತೆ ದೃಷ್ಟಿಯಿಂದ ಹೋಗಿದ್ದಾರೆ. ಅದು ತಪ್ಪು ಅನ್ನೋದು ಸರಿಯಲ್ಲ. ಅದಕ್ಕೆಲ್ಲ ಅನುಮತಿ ಪಡೆಯುವ ಅಗತ್ಯ ಇಲ್ಲ ಎಂದು ಡಿಕೆ ಶಿವಕುಮಾರ್ ಪರವಾಗಿ ಪರಮೇಶ್ವರ್ ಬ್ಯಾಟಿಂಗ್ ಮಾಡಿದ್ದಾರೆ. ನಾನು ಸಂಬಂಧ ಪಟ್ಟ ಇಲಾಖೆ ಸಚಿವ, ನಾನು ಹೋಗಿದ್ರೆ ಅವರ ಪರ ಇವರ ಪರ ಮಾತಾಡಿದ್ರು ಅಂತ ಆರೋಪ ಬರುತ್ತೆ. ನಮ್ಮ ಹಸ್ತಕ್ಷೇಪ ಆಗದಿರಲಿ, ತನಿಖೆ ನಡೆಯಲಿ ಅಂತ ನಾನು ತಕ್ಷಣ ಘಟನೆ ಸ್ಥಳಕ್ಕೆ ಹೋಗಲ್ಲ . ನಾನು ಯಾವುದೇ ಘಟನೆ ಆದಾಗ ತಕ್ಷಣ ಹೋಗಲ್ಲ, ತೀರಾ ತುರ್ತು ಸಂದರ್ಭ ಇದ್ರೆ ಮಾತ್ರ ಹೋಗೋದು. ಬಳ್ಳಾರಿಗೂ ನಾನು ಇದೇ ಕಾರಣಕ್ಕೆ ಇನ್ನೂ ಹೋಗಿಲ್ಲ ಎಂದು ಪರಮೇಶ್ವರ್ ಸ್ಪಷ್ಟನೆ ನೀಡಿದ್ದಾರೆ.

# ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಕರಡು ಮೀಸಲಾತಿ ಸರ್ಕಾರ ಸಮ್ಮತಿ

## ■ 5 ಪಾಲಿಕೆಗಳ 369 ವಾರ್ಡ್‌ಗಳಿಗೆ ಮೀಸಲಾತಿ ಪ್ರಕಟಿಸಿದ ರಾಜ್ಯ ಸರ್ಕಾರ

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ 369 ವಾರ್ಡ್‌ಗಳಿಗೆ ಮೀಸಲಾತಿಯನ್ನು ರಾಜ್ಯ ಸರ್ಕಾರ ನಿಗದಿಪಡಿಸಿ ಕರಡು ಅಧಿಸೂಚನೆ ಪ್ರಕಟಿಸಿದೆ. ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಿದ್ಧತೆ ನಡೆಯುತ್ತಿರುವ ಹಿನ್ನಲೆಯಲ್ಲಿ, ವಾರ್ಡ್ ವಾರು ಮೀಸಲಾತಿ ಜನಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸಲಾಗಿದೆ.

**ಏಕರೂಪದ ತೆರಿಗೆ ಹಾಗೂ ಶುಲ್ಕಗಳ ನಿಗದಿ**

ಕಳೆದ ಡಿ.19ರಂದು ರಾಜ್ಯ ಸರ್ಕಾರ, ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ ವಾರ್ಡ್‌ಗಳಿಗೆ ಮೀಸಲಾತಿ ನಿಗದಿಪಡಿಸುವ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಿ, ಅದರಂತೆ ಮೀಸಲಾತಿ ಪಟ್ಟಿ ಸಿದ್ಧಪಡಿಸುವಂತೆ ನಗರಾಭಿವೃದ್ಧಿ ಇಲಾಖೆಗೆ ಸೂಚನೆ ನೀಡಿತ್ತು. ಸರ್ಕಾರದ ಸೂಚನೆಯಂತೆ ಈಗಾಗಲೇ ಪ್ರತಿ ವಾರ್ಡ್‌ನ ಜನಸಂಖ್ಯೆ ಆಧಾರದಲ್ಲಿ ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗಗಳು ಹಾಗೂ ಮಹಿಳಾ ಮೀಸಲಾತಿಯನ್ನು ಒಳಗೊಂಡ ಕರಡು ಪಟ್ಟಿ ಸಿದ್ಧಪಡಿಸಲಾಗಿದೆ.

**ಸುಪ್ರೀಂ ಕೋರ್ಟ್ ವಿಚಾರಣೆ ಹಿನ್ನೆಲೆ:** ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಜ.12ರ ಸೋಮವಾರ ವಿಚಾರಣೆ ನಡೆಯಲಿದೆ. ಈ ಹಿನ್ನೆಲೆ, ವಾರ್ಡ್‌ಗಳಿಗೆ ನಿಗದಿಪಡಿಸಿರುವ ಮೀಸಲಾತಿ ಕುರಿತು ಸುಪ್ರೀಂ ಕೋರ್ಟ್‌ಗೆ ಮಾಹಿತಿ ಸಲ್ಲಿಸುವ ಅಗತ್ಯವಿರುವುದರಿಂದ, ರಾಜ್ಯ ಸರ್ಕಾರವು ಕರಡು ಅಧಿಸೂಚನೆಯನ್ನು ಪ್ರಕಟಿಸಿದೆ. ನಗರಾಭಿವೃದ್ಧಿ ಇಲಾಖೆ ವಾರ್ಡ್ ವಾರು ಕರಡು ಮೀಸಲಾತಿ ಪಟ್ಟಿಯನ್ನು ಅಧಿಕೃತವಾಗಿ



ಪ್ರಕಟಿಸಿದೆ.

ಪ್ರಕಟಿಸಿರುವ ಕರಡು ಪಟ್ಟಿಯಲ್ಲಿ ಒಟ್ಟು ವಾರ್ಡ್‌ಗಳ ಶೇ.50 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನೀಡಲಾಗಿದೆ.

ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗಗಳು ಹಾಗೂ ಸಾಮಾನ್ಯ ವರ್ಗಗಳಲ್ಲಿಯೂ ಮಹಿಳೆಯರಿಗೆ ಪ್ರತ್ಯೇಕ ಮೀಸಲಾತಿ ಕಲ್ಪಿಸಲಾಗಿದೆ.

ಆಕ್ಷೇಪಣೆ ಸಲ್ಲಿಸುವ ಅವಧಿಯಲ್ಲಿ ಮೀಸಲಾತಿಯ ಮಾನದಂಡ, ವರ್ಗೀಕರಣ ಅಥವಾ ಜನಸಂಖ್ಯಾ ಅಂಶಗಳ ಕುರಿತು ಪ್ರಶ್ನೆಗಳಿದ್ದರೆ ದಾಖಲಿಸಲು ಅವಕಾಶ ನೀಡಲಾಗಿದೆ.

ಈ ಪ್ರಕ್ರಿಯೆ ಪಾರದರ್ಶಕವಾಗಿರಲಿ ಎಂಬ ಉದ್ದೇಶದಿಂದ ಸಾರ್ವಜನಿಕ ಭಾಗವಹಿಸುವಿಕೆಗೆ ಒತ್ತು ನೀಡಲಾಗಿದೆ ಎಂದು ಜಿಬಿಎ ಅಧಿಕಾರಿಗಳು ಮೂಲಗಳು ತಿಳಿಸಿವೆ.

**ಇದ್ದ ಅಡೆತಡೆ ನಿವಾರಣೆ ಬಹುತೇಕ ನಿವಾರಣೆ!:** ಈಗಾಗಲೇ ಜಿಬಿಎ ವ್ಯಾಪ್ತಿಯಲ್ಲಿ ವಾರ್ಡ್ ವಿಂಗಡಣೆ, ಗಡಿ ಗುರುತಿಸುವಿಕೆ ಹಾಗೂ ಭೌಗೋಳಿಕ ಪುನರ್ ರಚನೆ ಕಾರ್ಯಗಳು ಪೂರ್ಣಗೊಂಡಿದ್ದವು.

ಮೀಸಲಾತಿ ಪಟ್ಟಿ ಪ್ರಕಟಗೊಳ್ಳುವುದು ಮಾತ್ರ ಬಾಕಿ ಇತ್ತು. ಇದೀಗ ಆ ಹಂತವೂ ಮುಗಿದಿರುವುದರಿಂದ ಚುನಾವಣೆ ಘೋಷಣೆಗೆ ಅಗತ್ಯವಿರುವ ಪ್ರಮುಖ ಅಡೆತಡೆ ನಿವಾರಣೆಯಾದಂತಾಗಿದೆ.

ಜಿಬಿಎ ವ್ಯಾಪ್ತಿಗೆ ಒಳಪಡುವ ಐದು ನಗರ ಪಾಲಿಕೆಗಳಿಗೂ ಪ್ರತ್ಯೇಕವಾಗಿ ಮೀಸಲಾತಿ ಪಟ್ಟಿಯನ್ನು ಪ್ರಕಟಿಸಲಾಗಿದೆ. ಇದರಿಂದಾಗಿ ನಗರ ರಾಜಕಾರಣದಲ್ಲಿ ಚಟುವಟಿಕೆ ಹೆಚ್ಚಾಗಿದ್ದು, ರಾಜಕೀಯ ಪಕ್ಷಗಳು ಹಾಗೂ ಆಕಾಂಕ್ಷಿಗಳು ಈಗಿನಿಂದಲೇ ತಮ್ಮ ತಂತ್ರಗಳನ್ನು ರೂಪಿಸಿಕೊಳ್ಳಲು ಈಗ ಆರಂಭಿಸಿದ್ದಾರೆ. ಹಲವು ವಾರ್ಡ್‌ಗಳಲ್ಲಿ ಮೀಸಲಾತಿ ಬದಲಾಗಿರುವುದರಿಂದ, ಈಗಿನ ಸದಸ್ಯರು ಮತ್ತು ಹೊಸ ಮುಖಗಳ ನಡುವೆ ಸ್ಪರ್ಧೆ ತೀವ್ರವಾಗುವ ಸಾಧ್ಯತೆ ಇದೆ.

**ಗರಿಗೆದರಿದ ರಾಜಕೀಯ ಚಟುವಟಿಕೆ**

**ಬೆಂಗಳೂರು ನಗರ ಪಾಲಿಕೆಯ 369 ವಾರ್ಡ್ ಗಳ ಚುನಾವಣೆಗೆ ಕರಡು ಮೀಸಲಾತಿ ಅಧಿಸೂಚನೆ ಹೊರಬೀಳುತ್ತಿದ್ದಂತೆಯೇ ಆಡಳಿತರೂಢ ಕಾಂಗ್ರೆಸ್ ಮತ್ತು ಪ್ರತಿಪಕ್ಷ ಬಿಜೆಪಿ ನಡುವೆ ರಾಜಕೀಯ ಚಟುವಟಿಕೆಗಳು ಗರಿಗೆದರಿವೆ. ಬೆಂಗಳೂರು ನಗರ ಪಾಲಿಕೆಯಲ್ಲಿ ಅಧಿಕಾರದ ಚುಕ್ಕಾಣಿ ಇಡಿಯಲು ಉಭಯ ಪಕ್ಷಗಳು ಈಗಾಗಲೇ ಸಕ್ರಿಯಗೊಂಡಿವೆ. ನಗರ ಪಾಲಿಕೆಯಲ್ಲಿ ಅಧಿಕಾರದಲ್ಲಿದ್ದರೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮೇಲುಗೈ ಸಾಧಿಸಬಹುದೆಂಬ ಲೆಕ್ಕಾಚಾರದಲ್ಲಿರುವ ಪಕ್ಷಗಳು, ಸ್ಥಳೀಯ ಕಾರ್ಯಕರ್ತರು ಎಚ್ಚೆತ್ತುಕೊಳ್ಳುವಂತೆ ಕರೆ ನೀಡಿವೆ.**

**ಸಂಪೂರ್ಣ ಚಿತ್ರಣದ ಕುರಿತು ಪ್ರಶ್ನೆ!:** ರಾಜಕೀಯ ವಲಯದಲ್ಲಿ ಈ ಬೆಳವಣಿಗೆಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಕೆಲವರು ಚುನಾವಣೆ ಶೀಘ್ರ ನಡೆಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರೆ, ಇನ್ನೂ ಕೆಲವರು ಅಂತಿಮ ಪಟ್ಟಿ ಪ್ರಕಟವಾದ ಬಳಿಕವೇ ಸ್ಪಷ್ಟ ಚಿತ್ರಣ ಸಿಗಲಿದೆ ಎನ್ನುತ್ತಿದ್ದಾರೆ.

ಆದರೂ, ಮೀಸಲಾತಿ ಕರಡು ಪಟ್ಟಿ ಪ್ರಕಟವಾಗಿರುವುದು ಜಿಬಿಎ ಚುನಾವಣೆಯತ್ತ ದೊಡ್ಡ ಹೆಜ್ಜೆ ಎಂಬುದರಲ್ಲಿ ಅನುಮಾನವೇ ಇಲ್ಲ. ಇನ್ನು ಮುಂದಿನ ದಿನಗಳಲ್ಲಿ ಆಕ್ಷೇಪಣೆಗಳ ಪರಿಶೀಲನೆ, ಅಂತಿಮ ಪಟ್ಟಿ ಪ್ರಕಟಣೆ ಮತ್ತು ಚುನಾವಣಾ ವೇಳಾಪಟ್ಟಿ ಘೋಷಣೆ ಇವೆಲ್ಲವೂ ನಡೆಯಬೇಕಿದ್ದು, ಜನವರಿ ಅಂತ್ಯಕ್ಕೆ ಜಿಬಿಎ ಚುನಾವಣೆಯ ಗಡಿ ಸ್ಪಷ್ಟವಾಗುವ ನಿರೀಕ್ಷೆ ಇದೆ.

**ಆಕ್ಷೇಪಣೆ ಸಲ್ಲಿಸಲು ಕೊಟ್ಟಿರುವ ಕಾಲಾವಕಾಶ!:** ಈ ಕರಡು ಮೀಸಲಾತಿ ಪಟ್ಟಿಗೆ ಸಾರ್ವಜನಿಕ ಆಕ್ಷೇಪಣೆ ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ಜಿಬಿಎ ನೀಡಿದೆ.

ಆಸಕ್ತ ನಾಗರಿಕರು, ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ತಮ್ಮ ಆಕ್ಷೇಪಣೆಗಳನ್ನು ಜನವರಿ 21ರ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬಹುದಾಗಿದೆ. ಆಕ್ಷೇಪಣೆಗಳ ಪರಿಶೀಲನೆಯ ಬಳಿಕ ಜನವರಿ ಕೊನೆಯ ವೇಳೆಗೆ ಅಂತಿಮ ಮೀಸಲಾತಿ ಪಟ್ಟಿ ಪ್ರಕಟವಾಗುವ ಸಾಧ್ಯತೆ ಇದೆ ಎಂದು ಅಧಿಕಾರಿ ಮೂಲಗಳು ತಿಳಿಸಿವೆ.

**ಈ ದಿನದ ದರ** | ಪೆಟ್ರೋಲ್: 103.81 ₹/L | ಡೀಸೆಲ್ : 90.99 ₹/L | ಬಂಗಾರ: ₹13,931/Gram24ct ₹12,770/Gram22ct | ಬೆಳ್ಳಿ: ₹249.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ**
**ರಾಮೋಹಳ್ಳಿ**

### ಹಿಂದುಧರ್ಮ ದೋಷ – 1

ಇಂದು ಜಗದ ಧರ್ಮಗಳಲ್ಲಿ ಹಿಂದುಧರ್ಮ ಅತಿ ಪ್ರಾಚೀನ. ಅದೆಷ್ಟೋ ಧರ್ಮ ಸಂಸ್ಕೃತಿಗಳು ನಶಿಸಿವೆ. ಹಿಂದುಧರ್ಮ ಇಂದಿಗೂ ಉಳಿದಿರುವುದೇ ಅದರ ಅಂತಶ್ಶಕ್ತಿಗೆ ಹಿಡಿದ ಕನ್ನಡಿ. ಇಂದು ಹೆಚ್ಚು ವ್ಯಾಪ್ತಿಯಲ್ಲಿರುವ ಇಸ್ಲಾಂ ಕ್ರೈಸ್ತ ಧರ್ಮಗಳು ಅತಿ ಈಚಿನವು. ಈ ಅಜ–ಗಜಾಂತರ ಕಾಲವ್ಯತ್ಯಾಸದ ಆಧುನಿಕ ಧರ್ಮದೃಷ್ಟಿಯಲ್ಲಿ ಹಿಂದುಧರ್ಮದಲ್ಲಿ ಹಲವು ದೋಷ ತೋರುವವು. ಆಧುನಿಕ ಧರ್ಮಗಳಿಗೆ ಒಬ್ಬ ಸ್ಥಾಪಕ ಒಂದು ಗ್ರಂಥ ಏಕ ದೇವರು. ಹಿಂದು ಧರ್ಮಕ್ಕೆ ಹೀಗಿಲ್ಲ. ಆದರೆ ಧರ್ಮಕ್ಕೆ ಇದೇ ಚೌಕಟ್ಟು ಇರಬೇಕೆಂಬುದಿಲ್ಲ ಎಂಬುದು ಬಹುಜನರ ತಲೆಗೆ ಹೋಗುತ್ತಿಲ್ಲ. ಒಂದು ಕೋಣೆಯ ಮನೆ ಕಂಡ ವಿಭಕ್ತ ಕುಟುಂಬದವರಿಗೆ ಹಲವು ಕೋಣೆ ಇರುವ ಅವಿಭಕ್ತ ಕುಟುಂಬದವರ ಮಹಾಮನೆ ಮನೆ ಎನಿಸದಿದ್ದರೆ ಏನು ಮಾಡುವುದು? ಜ್ವರಕ್ಕೆ ಒಂದೇ ಔಷಧಿ ಇಲ್ಲ. ಹಲವು ಗುರುಗಳು ಹಲವು ಗ್ರಂಥಗಳು ಹಲವು ಸಂಸ್ಕಾರಗಳು ಹಲವು ದೇವರು ಇದು ಸಮೃದ್ಧಿಯ ಸಂಕೇತ. ಬಗೆ ಬಗೆಯ ಸಂಸ್ಕಾರದ ಬಗೆ ಬಗೆಯ ಜನರಿಗೆ ಬಗೆ ಬಗೆಯ ಆಯ್ಕೆಯ ಸದವಕಾಶ ಗುಣವಲ್ಲವೇ! ಬಗೆ ಬಗೆಯ ಕಂಠಧ್ವನಿ ಬಗೆ ಬಗೆಯ ಮೈ ಮಾಟ ಬಗೆ ಬಗೆಯ ವಾದ್ಯನಿನಾದ ಬಗೆ ಬಗೆಯ ವಸ್ತ್ರ ಬಗೆ ಬಗೆಯ ನೃತ್ಯ ಬಗೆ ಬಗೆಯ ಆಭರಣ ಬಗೆ ಬಗೆಯ ಬಣ್ಣ ಬಗೆ ಬಗೆಯ ಗಿಡ ಮರ ಲತೆ ಬಗೆ ಬಗೆಯ ಹೂ ಹಣ್ಣು ಕಾಯಿ ಬಗೆ ಬಗೆಯ ಪರಿಮಳ ಬಗೆ ಬಗೆಯ ಖಾದ್ಯ ರುಚಿ ಬಗೆ ಬಗೆಯ ಚಿಟ್ಟೆ ಪಕ್ಷಿ ಪ್ರಾಣಿ ಹುಳು ಜೀವಿ ಅದೆಷ್ಟು ಸೊಗಸು! ವಿವಿಧತೆಯಲ್ಲಿ ಏಕತೆ ವಿವಿಧತೆಯಲ್ಲಿ ರಮಣೀಯತೆ! ಇದು ಹಿಂದುಧರ್ಮದ ಸೊಗಸು!

## ಹೆಬ್ಬಾಳದ ಕೇಂದ್ರೀಯ ವಿದ್ಯಾಲಯಕ್ಕೆ ಹುಸಿ ಬಾಂಬ್ ಬೆದರಿಕೆ

• **ಉದಯವಾಹಿನಿ, ಬೆಂಗಳೂರು**

ಹೆಬ್ಬಾಳದ ಕೇಂದ್ರೀಯ ವಿದ್ಯಾಲಯಕ್ಕೆ ಬಂದಿದ್ದ ಬಾಂಬ್ ಬೆದರಿಕೆಯ ಇ ಮೇಲ್‌ನಿಂದ ವಿದ್ಯಾಲಯದ ಆವರಣ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ವಿದ್ಯಾಲಯದ ಆವರಣದಲ್ಲಿ ಮೂರು ಆರ್‌ಡಿಎಕ್ಸ್ ಇಡಲಾಗಿದ್ದು ಅವುಗಳು ಸ್ಫೋಟಗೊಳ್ಳಲಿವೆ ಎಂದು ಇ–ಮೇಲ್ ಸಂದೇಶದಲ್ಲಿ ಉಲ್ಲೇಖಿಸಲಾಗಿತ್ತು. ಇ ಮೇಲ್ ಪರಿಶೀಲಿಸಿದ ಶಾಲಾ ಸಿಬ್ಬಂದಿ, ಪ್ರಾಂಶುಪಾಲರ ಗಮನಕ್ಕೆ ತಂದಿದ್ದರು. ಪ್ರಾಂಶುಪಾಲರು ಪೊಲೀಸರ ಗಮನಕ್ಕೆ ತಂದಿದ್ದರು. ತಕ್ಷಣವೇ ಸ್ಥಳಕ್ಕೆ ತೆರಳಿದ ಸದಾಶಿವನಗರ ಠಾಣೆಯ ಪೊಲೀಸರು ಪರಿಶೀಲನೆ ನಡೆಸಿದರು. 'ಬಾಂಬ್ ಪತ್ತೆ ದಳ, ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳದ ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಿ ಪರಿಶೀಲನೆ ನಡೆಸಲಾಯಿತು. ಯಾವುದೇ ಆರ್‌ಡಿಎಕ್ಸ್ ಬಾಂಬ್ ಪತ್ತೆಯಾಗಿಲ್ಲ.

## ನರೇಗಾ: ಶೀಘ್ರವೇ ವಿಶೇಷ ಅಧಿವೇಶನ

• **ಉದಯವಾಹಿನಿ, ಬೆಂಗಳೂರು**

ನರೇಗಾ ಯೋಜನೆ ಮತ್ತೆ ಜಾರಿಗೆ ತರುವಂತೆ ಒತ್ತಾಯಿಸಿ ನಿರ್ಣಯ ಅಂಗೀಕರಿಸಲು ಶೀಘ್ರವೇ ವಿಧಾನ ಮಂಡಲದ ವಿಶೇಷ ಅಧಿವೇಶನ ಕರೆಯಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು. ಗ್ರಾಮೀಣ ಕಾರ್ಮಿಕ ಉದ್ಯೋಗದ ಹಕ್ಕನ್ನು ರಕ್ಷಿಸಲು ರಾಷ್ಟ್ರವ್ಯಾಪಿ ನರೇಗಾ ಬಚಾವೋ ಸಂಗ್ರಾಮ ಕಾರ್ಯಕ್ರಮ ಆಯೋಜಿಸಲು ಹಮ್ಮಿಕೊಂಡಿದ್ದ ಸಚಿವರ, ಶಾಸಕರ ಸಭೆಯಲ್ಲಿ ಅವರು ಮಾತನಾಡಿದರು. ನರೇಗಾ ಕಾಯ್ದೆ ಮತ್ತೆ ಜಾರಿಯಾಗವಂತೆ ಜನಾಂದೋಲನ ನಡೆಯಬೇಕು. ಪ್ರತಿ ಗ್ರಾಮ ಪಂಚಾಯಿತಿ ಸದಸ್ಯರನ್ನು, ನರೇಗಾದಲ್ಲಿ ಕೆಲಸ ಮಾಡುತ್ತಿರುವವರನ್ನು ತಲುಪಬೇಕು. ಜನರನ್ನು ಜಾಗೃತಗೊಳಿಸುವ ಕೆಲಸವನ್ನು ಶಾಸಕರು ಮಾಡಬೇಕು. ನಮ್ಮ ಹೋರಾಟ ಜನಾಂದೋಲನವಾಗಿ ರೂಪುಗೊಳ್ಳುವಂತಹ ವಾತಾವರಣ ನಿರ್ಮಾಣ ಆಗಬೇಕು ಎಂದು ಸಲಹೆ ನೀಡಿದರು. ಕಾಂಗ್ರೆಸ್ ಜಾರಿಗೆ ತಂದ ಕಾರ್ಯಕ್ರಮವನ್ನು ರದ್ದು ಮಾಡಿ ಉದ್ಯೋಗದ ಹಕ್ಕು ಕಸಿಯುವ ಕೆಲಸಕ್ಕೆ ಕೇಂದ್ರ ಸರ್ಕಾರ ಕೈ ಹಾಕಿದೆ. ಸಂವಿಧಾನ ಬಾಹಿರ ಕೆಲಸ ಎಂದು ಟೀಕಿಸಿದರು. ಮನಮೋಹನ ಸಿಂಗ್ ಅವರು ಪ್ರಧಾನಿ ಆಗಿದ್ದಾಗ ಮಹಾತ್ಮಗಾಂಧಿ ನರೇಗಾ ಯೋಜನೆ ಜಾರಿಗೆ ಬಂತು. ದಲಿತರು, ಮಹಿಳೆಯರು, ರೈತರಿಗೆ ಉದ್ಯೋಗ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿತ್ತು. ವರ್ಷದಲ್ಲಿ ನೂರು ದಿನ ಉದ್ಯೋಗ ಅವಕಾಶ ನರೇಗಾದಲ್ಲಿ ಸಿಗುತ್ತಿತ್ತು ಎಂದು ವಿವರಿಸಿದರು.

## ಯುವ ನಿಧಿ ಯೋಜನೆ: ಉಚಿತ ಕೌಶಲ್ಯ ತರಬೇತಿಗೆ ಯುವಜನರ ನಿರಾಸಕ್ತಿ; ಸಚಿವರು ಏನಂತಾರೆ?

• **ಉದಯವಾಹಿನಿ, ಬೆಂಗಳೂರು**

ನಿರುದ್ಯೋಗಿ ಪದವೀಧರರು ಡಿಪ್ಲೊಮಾ ಪಡೆದವರಿಗೆ ಆರ್ಥಿಕ ನೆರವು ನೀಡುವ ರಾಜ್ಯ ಸರ್ಕಾರದ 5 ಖಾತರಿ ಯೋಜನೆಗಳಲ್ಲಿ ಒಂದಾದ ಯುವ ನಿಧಿ ಯೋಜನೆಯಡಿಯಲ್ಲಿ ಸುಮಾರು 3 ಲಕ್ಷ ಫಲಾನುಭವಿಗಳಿದ್ದರೂ, ಉದ್ಯೋಗ ಪಡೆಯಲು ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಫಲಾನುಭವಿಗಳು ಆಸಕ್ತಿ ಹೊಂದಿಲ್ಲ ಎಂದು ತೋರಿಸುತ್ತದೆ. ಶೇಕಡಾ 90 ರಷ್ಟು ಜನರು ಯುವ ನಿಧಿ ಪ್ಲಸ್ ಯೋಜನೆಗೆ ನೋಂದಾಯಿಸಿಕೊಂಡಿಲ್ಲ. ಫೆ. 2024ರಲ್ಲಿ ಪ್ರಾರಂಭಿಸಲಾದ ಈ ಯೋಜನೆಯು ಪದವೀಧರರು ವಿವಿಧ ಸಂಸ್ಥೆಗಳಲ್ಲಿ ತರಬೇತಿ ಕಾರ್ಯಕ್ರಮಗಳ ಮೂಲಕ ಉಚಿತವಾಗಿ ಉದ್ಯೋಗಗಳಿಗೆ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಸರ್ಕಾರವು ಫಲಾನುಭವಿಗಳನ್ನು ಅವರ ಮೊಬೈಲ್ ಸಂಖ್ಯೆಗಳಿಗೆ ಕರೆಗಳು ಎಸ್‌ಎಂಎಸ್ ಮೂಲಕ ತಲುಪಿ, ಯುವ ನಿಧಿ ಪ್ಲಸ್‌ಗೆ ದಾಖಲಾಗಲು ಪ್ರೋತ್ಸಾಹಿಸುತ್ತಿದ್ದರೂ ಸಹ ಪ್ರವೇಶಾತಿ ಕಡಿಮೆಯಾಗಿದೆ. ಯುವ ನಿಧಿ ಯೋಜನೆಯಡಿ ಸರ್ಕಾರವು ಹಣ ನೀಡುವುದನ್ನು ನಿಲ್ಲಿಸಬಹುದು ಎಂಬ ಭಯ, ಆತಂಕ ಅವರದ್ದು. ಆದರೆ ಸರ್ಕಾರ ಅವರಿಗೆ ತರಬೇತಿ ನೀಡುತ್ತಿರುವಾಗ, ಉದ್ಯೋಗ ಸಿಗುವವರೆಗೆ ಖಾತರಿ ಯೋಜನೆಯಡಿಯಲ್ಲಿ ಹಣವನ್ನು ನೀಡುತ್ತದೆ ಎಂದು ಸಚಿವರು ಹೇಳುತ್ತಾರೆ

# ಕೇರಳ ಸರ್ಕಾರದಿಂದ ಭಾಷಾ ಸ್ವಾತಂತ್ರ್ಯದ ಉಲ್ಲಂಘನೆ: ಶಿವರಾಜ್ ತಂಗಡಗಿ

### ಇದರ ವಿರುದ್ಧ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ತೀವ್ರ ವಿರೋಧ

• **ಉದಯವಾಹಿನಿ, ಬೆಂಗಳೂರು**

ಕೇರಳ ಸರ್ಕಾರ ಅಂಗೀಕರಿಸಿರುವ ಮಲೆಯಾಳಿ ಭಾಷಾ ಮಸೂದೆ– 2025ರ ನಡೆಯ ವಿರುದ್ಧ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅವರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಕೇರಳದ ಗಡಿ ಜಿಲ್ಲೆಯಲ್ಲಿ ವಾಸ ಮಾಡುತ್ತಿರುವ ಜನರ ಮನಸ್ಸು ಸಂಪೂರ್ಣ ಕನ್ನಡ ಭಾಷೆಯೊಂದಿಗೆ ಬೆರೆತು ಹೋಗಿದೆ. ಕೇರಳದಲ್ಲಿ ಸುಮಾರು 202 ಕನ್ನಡ ಮಾಧ್ಯಮ ಶಾಲೆಗಳಿವೆ. ನಾನೇ ಖುದ್ದಾಗಿ ಕಳೆದ ಒಂದೂವರೆ ವರ್ಷದ ಹಿಂದೆ ಎಡನೀರು ಮಠಕ್ಕೆ ಭೇಟಿ ನೀಡಿ, ಮಠ ನಿರ್ವಹಣೆ ಮಾಡುತ್ತಿರುವ ಕನ್ನಡ ಶಾಲಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ.

**ಮಲೆಯಾಳಿ ಭಾಷಾ ಮಸೂದೆ – 2025**

ಕಾಸರಗೋಡಿನ ಜನರ ಮನಸ್ಸು ಹಾಗೂ ಜೀವನ ಸಂಪೂರ್ಣ ಕನ್ನಡ ಭಾಷಾಮಯವಾಗಿದೆ. ಅಲ್ಲಿನ ಕನ್ನಡ


☛ ಉದಯವಾಹಿನಿ ಚಿತ್ರ

**ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಸಲ್ಲಿಕೆ**

ಭಾಷಾ ಬಳಕೆ ನೋಡಿದ ನನಗೆ ಕೇರಳಕ್ಕೆ ಭೇಟಿ ನೀಡಿದ್ದೆ ಎಂದು ಅನಿಸಲಿಲ್ಲ. ಹೀಗಿದ್ದು, ಕೇರಳ ಸರ್ಕಾರ ಇಂತಹ ಮಸೂದೆ ಜಾರಿಗೆ ತಂದಿರುವುದು ಸರಿಯಲ್ಲ. ಕೇರಳ ವಿಧಾನಸಭೆ ಅಂಗೀಕರಿಸಿರುವ ಮಲೆಯಾಳಿ ಭಾಷಾ ಮಸೂದೆ – 2025ನ್ನು ಕೂಡಲೇ ಹಿಂಪಡೆಯಬೇಕು. ಯಾವುದೇ ಸಂದರ್ಭದಲ್ಲಿ ನಮ್ಮ ಸರ್ಕಾರ ಕನ್ನಡದ ಮನಸ್ಸು ಹಾಗೂ ಭಾವನೆಗಳಿಗೆ ಧಕ್ಕೆಯಾಗಲು ಬಿಡುವುದಿಲ್ಲ ಎಂದಿದ್ದಾರೆ.

ಈಗಾಗಲೇ ಕೇರಳ ಸರ್ಕಾರ ಮಸೂದೆಯನ್ನು ಅಂಗೀಕರಿಸುವ ಮೂಲಕ ಮಕ್ಕಳ ಹಕ್ಕಿನ ಉಲ್ಲಂಘನೆ ಮಾಡಿದ್ದು, ಭಾಷಾ ಸ್ವಾತಂತ್ರ್ಯದ ಉಲ್ಲಂಘನೆ ಕೂಡ ಮಾಡಿದೆ.

ಇನ್ನು ರಾಜ್ಯದಿಂದ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿದ್ದ ರಾಜೀವ್ ಚಂದ್ರಶೇಖರ್ ಅವರು ಕೂಡ ಕೇರಳದ ಈ ನಡೆ ಬಗ್ಗೆ ಧ್ವನಿ ಎತ್ತಬೇಕು ಎಂದು ಶಿವರಾಜ್ ತಂಗಡಗಿ ಅವರು ಆಗ್ರಹಿಸಿದ್ದಾರೆ.

**ರಾಜ್ಯಪಾಲರ ಬಳಿ ಕೊಂಡಯ್ಯಲಾಗುವುದು**

**ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ನಿಯೋಗ ಕೇರಳ ರಾಜ್ಯಪಾಲರನ್ನು ಭೇಟಿಯಾಗಿ ಮಸೂದೆ ಬಗ್ಗೆ ಮನವರಿಕೆ ಮಾಡಿಕೊಟ್ಟಿದೆ. ಅಂಗೀಕಾರಗೊಂಡಿರುವ ಮಸೂದೆಯ ಮುಂದಿನ ಹಂತಕ್ಕೆ ಹೋಗದಂತೆ ತಡೆಯಬೇಕು ಎಂದು ಆಗ್ರಹಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿ ಚರ್ಚೆ ನಡೆಸಿ, ನಿಯೋಗವೊಂದನ್ನು ಅಲ್ಲಿನ ರಾಜ್ಯಪಾಲರ ಬಳಿ ಕೊಂಡಯ್ಯಲಾಗುವುದು ಎಂದು ತಿಳಿಸಿದ್ದಾರೆ. ಕೂಡಲೇ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ, ಸಂವಿಧಾನದ 205ಬಿಯಲ್ಲಿ ಕಲ್ಪಿಸಿರುವ ಅವಕಾಶದಂತೆ ಭಾಷಾ ನಿರ್ದೇಶಕರನ್ನು ಕೇರಳ ರಾಜ್ಯಕ್ಕೆ ಕಳುಹಿಸಿ ಕೊಡಬೇಕು ಎಂದು ಒತ್ತಾಯಿಸಿರುವ ಅವರು, ಈ ಕುರಿತಂತೆ ರಾಷ್ಟ್ರಪತಿಗಳಿಗೆ ಪತ್ರ ಬರೆಯಲಾಗುವುದು ಎಂದು ಹೇಳಿದ್ದಾರೆ.**

## ಪೊಲೀಸರಿಗೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸಲಹೆ

• **ಉದಯವಾಹಿನಿ, ಬೆಂಗಳೂರು**

ಸಾಮಾಜಿಕ ಮಾಧ್ಯಮಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಮಕ್ಕಳನ್ನು ಶೋಷಣೆಯಿಂದ ರಕ್ಷಿಸಲು ಪೊಲೀಸರು ವಾರದಲ್ಲಿ ನಾಲ್ಕು ದಿನ ಶಾಲಾ–ಕಾಲೇಜುಗಳಿಗೆ ಭೇಟಿ ನೀಡಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸಲಹೆ ನೀಡಿದ್ದಾರೆ.



**ಒಂದು ವರದಿಯ ಪ್ರಕಾರ, ಗ್ರಾಮೀಣ ಪ್ರದೇಶದ ಶೇ. 78 ರಷ್ಟು ಮಕ್ಕಳು ನಗರ ಪ್ರದೇಶದ ಮಕ್ಕಳಿಗಿಂತ ಮೊಬೈಲ್ ಫೋನ್, ಲ್ಯಾಪ್‌ಟಾಪ್, ಟ್ಯಾಬ್ ಮತ್ತು ಕಂಪ್ಯೂಟರ್‌ಗಳನ್ನು ಬಳಸುವ ವ್ಯಸನಿಗಳಾಗಿದ್ದಾರೆ. ಇದು ಮಹಿಳೆಯರು ಮತ್ತು ಹುಡುಗಿಯರ ಮೇಲಿನ ಅತ್ಯಾಚಾರ ಪ್ರಕರಣ ಹೆಚ್ಚಳಕ್ಕೆ ಕಾರಣವಾಗಿದೆ. ಇದನ್ನು ತಡೆಗಟ್ಟಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.**

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ವಿಕಾಸ ಸೌಧದಲ್ಲಿ ಮಕ್ಕಳ ನಿಧಿ ಭಾರತದ ಸಹಯೋಗದೊಂದಿಗೆ ಆಯೋಜಿಸಿದ್ದ ಮಕ್ಕಳ ಆನ್‌ಲೈನ್ ಸುರಕ್ಷತೆ ಕುರಿತು ಜಿಲ್ಲಾ ಮಟ್ಟದ ಪೊಲೀಸ್ ಅಧಿಕಾರಿಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಾಮಾಜಿಕ ಮಾಧ್ಯಮಗಳಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಪೊಲೀಸ್ ಅಧಿಕಾರಿಗಳು ಜಾಗೃತಿ ಮೂಡಿಸಬೇಕು ಎಂದು ಹೇಳಿದರು. ಪೊಲೀಸ್ ಮತ್ತು ಶಿಕ್ಷಣ ಇಲಾಖೆಗಳು ಸೇರಿದಂತೆ ವಿವಿಧ ಇಲಾಖೆಗಳು ಮಕ್ಕಳ ಸರ್ವತೋಮುಖ ಅಭಿವೃದ್ಧಿ ಮತ್ತು ರಕ್ಷಣೆಯಲ್ಲಿ ಹೂಡಿಕೆ ಮಾಡಬೇಕು ಎಂದು ಅವರು ಸೂಚಿಸಿದರು. 14 ರಿಂದ 18 ವರ್ಷ ವಯಸ್ಸಿನ ಮಕ್ಕಳು ಸಾಮಾಜಿಕ ಮಾಧ್ಯಮಕ್ಕೆ ಹೆಚ್ಚು ವ್ಯಸನಿಗಳಾಗಿದ್ದಾರೆ. ಇದು ನಿಜಕ್ಕೂ ಕಳವಳಕಾರಿ. ಕಾನೂನು, ಶಿಕ್ಷಣ, ಆರೋಗ್ಯ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳನ್ನು ಒಳಗೊಂಡ ಸಮಿತಿ ರಚನೆಯಾಗಿದ್ದರೂ, ಸಾಮಾಜಿಕ ಮಾಧ್ಯಮ ಮತ್ತು ಆನ್‌ಲೈನ್ ಕಿರುಕುಳದ ಪಿಡುಗು ನಿಂತಿಲ್ಲ ಅಥವಾ ಕಡಿಮೆಯಾಗಿಲ್ಲ ಎಂದರು. ಕೆಎಸ್‌ಸಿಪಿಸಿಆರ್ ಅಧ್ಯಕ್ಷ ಶಶಿಧರ್ ಕೊಸಂಬೆ, ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ ಪದ್ಮಾವತಿ, ಡಿಡಿಪಿಐಗಳು, ಡಯಟ್ ಪ್ರಾಂಶುಪಾಲರು ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಕೆಎಂಎಫ್‌ನಲ್ಲಿ ಉದ್ಯೋಗದ ಆಮಿಷ: 50 ಲಕ್ಷ ವಂಚನೆ

• **ಉದಯವಾಹಿನಿ, ಬೆಂಗಳೂರು**



**ಇಬ್ಬರ ವಿರುದ್ಧ ಪ್ರಕರಣ ದಾಖಲು**

ಕರ್ನಾಟಕ ಹಾಲು ಮಹಾ ಮಂಡಳದ (ಕೆಎಂಎಫ್) ಉದ್ಯೋಗ ಕೊಡಿಸುವುದಾಗಿ ನಂಬಿಸಿ ಸುಮಾರು 10 ಜನರಿಗೆ ಒಟ್ಟು ರೂ.50 ಲಕ್ಷ ಹಣ ವಂಚಿಸಿರುವ ಘಟನೆಯೊಂದು ಬೆಳಕಿಗೆ ಬಂದಿದೆ.

ವಂಚನೆ ಸಂಬಂಧ ಆರ್‌ಟಿ ನಗರ ನಿವಾಸಿ ಕರಿಗೌಡ ಎಸ್. ಪಾಟೀಲ್ (60) ಎಂಬುವವರು ಮಲ್ಲೇಶ್ವರಂ ಪೊಲೀಸ್ ಠಾಣೆಯಲ್ಲಿ ಎನ್. ಕೃಷ್ಣನ್ ಹಾಗೂ ನಾಗರಾಜ್ ಎಂಬವರ ವಿರುದ್ಧ ದೂರು ದಾಖಲಿಸಿದ್ದಾರೆ. 2022ರಲ್ಲಿ ಮಲ್ಲೇಶ್ವರ ಪಾಕಶಾಲಾ ಹೋಟೆಲ್‌ನಲ್ಲಿ ಗೋಪಿ ಎಂಬುವವರು ಎನ್.ಕೃಷ್ಣನ್ ಅವರನ್ನು ಪರಿಚಯಿಸಿದ್ದರು. ಕೃಷ್ಣನ್ ಅವರು ತಾನು ಕೆಎಎಸ್ ಅಧಿಕಾರಿಯಾಗಿದ್ದು, ಹಾಗೂ ಕೆಎಂಎಫ್‌ನಲ್ಲಿ ನಿರ್ದೇಶಕನಾಗಿ ಕೆಲಸ ಮಾಡುತ್ತಿರುವುದಾಗಿ ಹೇಳಿಕೊಂಡಿದ್ದರು.

ಅದೇ ಸಂದರ್ಭದಲ್ಲಿ ಆರೋಪಿ ನಾಗರಾಜ್ ಕೂಡ ತಾನು ಉನ್ನತ ಹುದ್ದೆಯಲ್ಲಿ ಇರುವುದಾಗಿ ಹೇಳಿ ನಕಲಿ ಗುರುತಿನ ಚೀಟಿ ತೋರಿಸಿದ್ದರು. ಕೆಎಂಎಫ್‌ನಲ್ಲಿ 25 ಸರ್ಕಾರಿ ಹುದ್ದೆಗಳಿದ್ದು, ಉದ್ಯೋಗಿಗಳ ಆಯ್ಕೆ ಅಧಿಕಾರ ನಮಗಿದೆ. ಆಯ್ಕೆ ಮಾಡಲು ಪರೀಕ್ಷೆ ಅಥವಾ ಸಂದರ್ಶನದ ಅಗತ್ಯ ಇಲ್ಲ. ಪ್ರತಿ ಅಭ್ಯರ್ಥಿ ರೂ.10 ಲಕ್ಷ ಸರ್ಕಾರಿ ಶುಲ್ಕ ಪಾವತಿಸಿದರೆ ಮೂರು ತಿಂಗಳಲ್ಲಿ ನೇಮಕಾತಿ ಪತ್ರ ನೀಡಲಾಗುವುದು ಎಂಬುದಾಗಿ ನಂಬಿಸಿದ್ದರು ಎಂದು ದೂರಿನಲ್ಲಿ ಹೇಳಿಕೊಂಡಿದ್ದಾರೆ.

ಅಭ್ಯರ್ಥಿಗಳಾದ ವಿಜಯೇಂದ್ರ ಎಸ್. ಪಾಟೀಲ, ಜಿ.ಡಿ.ಮಧು, ಎಸ್.ಅನಿತಾ, ಪಿ.ಸೂರಜ್, ಎಂ.ಅಕ್ಷಯ್ ನಾಯಕ್ ಸೇರಿದಂತೆ 10 ಅಭ್ಯರ್ಥಿಗಳ ಜೊತೆಗೆ ಆರೋಪಿಗಳು ಮಾತುಕತೆ ನಡೆಸಿದ್ದರು. 2022ರ ಡಿಸೆಂಬರ್‌ನಿಂದ 2023ರ ಡಿಸೆಂಬರ್ ವರೆಗೆ ಬ್ಯಾಂಕ್ ವರ್ಗಾವಣೆಯ ಮೂಲಕ ರೂ.36 ಲಕ್ಷ ಹಾಗೂ ನಗದು ರೂಪದಲ್ಲಿ ರೂ.14 ಲಕ್ಷವನ್ನು ಆರೋಪಿಗಳಿಗೆ ನೀಡಲಾಗಿತ್ತು.

2024ರ ಮಾರ್ಚ್‌ನಲ್ಲಿ ಅಭ್ಯರ್ಥಿಗಳು ಆರೋಪಿಗಳು ಒಪ್ಪಂದದ ಪತ್ರ ಮಾಡಿಕೊಂಡಿದ್ದರು. ಹಣ ಪಾವತಿಸಿದ ವಿವರ, ಕೆಲಸ ಸಿಗದಿದ್ದರೆ ಹಣವನ್ನು ವಾಪಸ್ ಕೊಡುವುದಾಗಿ ಪತ್ರದಲ್ಲಿ ಉಲ್ಲೇಖಿಸಲಾಗಿತ್ತು.

ಅಲ್ಲದೆ, ಆರೋಪಿಗಳು, ಅಭ್ಯರ್ಥಿಗಳಿಗೆ ಚೆಕ್ ಸಹ ನೀಡಿದ್ದರು. ಕೆಲವು ದಿನಗಳು ಕಳೆದ ಮೇಲೆ ಮೈಸೂರಿನಲ್ಲಿ ಸಂದರ್ಶನ ನಡೆಯಲಿದೆ ಎಂದು ಅಭ್ಯರ್ಥಿಗಳಿಗೆ ಇ ಮೇಲ್ ಮೂಲಕ ಸಂದೇಶ ಕಳಿಸಲಾಗಿತ್ತು. ಬಳಿಕ ಸರಕಾರ ಬದಲಾಗಿದ್ದು, ಮತ್ತಷ್ಟು ಹಣ ನೀಡುವಂತೆ ಬೇಡಿಕೆಯಿಡ ತೊಡಗಿದ್ದರು. 2024ರಲ್ಲಿಯೇ ಮೋಸ ಹೋಗಿರುವ ಅನುಮಾನ ಬಂದಿತ್ತು ಆದರೆ, ಆರೋಪಿಗಳು ಹತ್ತಾರು ಸಬೂಬು ಹೇಳಿ ದಿನಗಳನ್ನು ಮುಂದೂಡಿದ್ದಾರೆ. ಹಣ ವಾಪಸ್ ಕೊಡುವುದಾಗಿಯೂ ತಿಳಿಸಿದ್ದರು.

ಅಂತಿಮವಾಗಿ ಇತ್ತೀಚೆಗೆ ಆರೋಪಿಗಳ ಮೊಬೈಲ್ ಸ್ವಿಚ್ ಆಫ್ ಆಗಿದ್ದರಿಂದ ದೂರು ನೀಡಿರುವುದಾಗಿ ದೂರಿನಲ್ಲಿ ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ಕೈಗೊಂಡಿದ್ದಾರೆ.

## ಕೋಗಿಲು ಅಕ್ರಮ ತೆರವು ವಿವಾದ: ಪರಿಶೀಲನೆಯ ನಂತರ ಅರ್ಹರಿಗೆ ಪರ್ಯಾಯ ವಸತಿ: ಕೃಷ್ಣ ಬೈರೇಗೌಡ

• **ಉದಯವಾಹಿನಿ, ಬೆಂಗಳೂರು**

ಕೋಗಿಲು ಬಡಾಣೆಯಲ್ಲಿ ಅಕ್ರಮವಾಗಿ ನಿರ್ಮಿಸಲಾಗಿದ್ದ ಮನೆಗಳನ್ನು ಕೆಡವಿದ ಬಳಿಕ ಇದೀಗ ಅರ್ಹ ವ್ಯಕ್ತಿಗಳಿಗೆ, ಬಹು ಇಲಾಖೆಗಳ ಪರಿಶೀಲನೆಯ ನಂತರ, ಅರ್ಹತಾ ಮಾನದಂಡಗಳು ಮತ್ತು ಮಾನದಂಡಗಳಿಗೆ ಅನುಗುಣವಾಗಿ ಪರ್ಯಾಯ ವಸತಿ ಒದಗಿಸಲಾಗುವುದು ಎಂದು ಕರ್ನಾಟಕದ ಸಚಿವ ಕೃಷ್ಣ ಬೈರೇಗೌಡ ಗುರುವಾರ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ಅರ್ಹ ಫಲಾನುಭವಿಗಳ ಮೊದಲ ಪಟ್ಟಿಯಲ್ಲಿ ಸೇರಿಸಲಾದವರಿಗೆ ಆದಷ್ಟು ಬೇಗ ಪರ್ಯಾಯ ವಸತಿ ಒದಗಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಅವರು ಹೇಳಿದರು.

ಕೋಗಿಲು ಬಳಿ ಅಕ್ರಮವಾಗಿ ನಿರ್ಮಿಸಲಾದ ಮನೆಗಳನ್ನು ಕೆಡವಲಾದವರಿಗೆ ಪರ್ಯಾಯ ವಸತಿ ಒದಗಿಸುವ ಬಗ್ಗೆ,


☛ ಉದಯವಾಹಿನಿ ಚಿತ್ರ

ವಸತಿ ಇಲಾಖೆ, ಕಂದಾಯ ಇಲಾಖೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ಪೊಲೀಸರು ನಿಗದಿತ ಮಾನದಂಡಗಳ ಪ್ರಕಾರ ಅರ್ಹತೆಯನ್ನು ಪರಿಶೀಲಿಸುತ್ತಿದ್ದಾರೆ. ಪ್ರಕ್ರಿಯೆ ಇನ್ನೂ ನಡೆಯುತ್ತಿದೆ ಎಂದು ಹೇಳಿದರು.

ಕರ್ನಾಟಕ ಸರ್ಕಾರವು ಡಿಸೆಂಬರ್ 29 ರಂದು ಕೋಗಿಲುನಲ್ಲಿ ಅಕ್ರಮವಾಗಿ ನಿರ್ಮಿಸಲಾದ ಮನೆಗಳು ಅಥವಾ ಶೆಡ್‌ಗಳನ್ನು ಕೆಡವಲಾದ ನಿಜವಾದ ನಿರಾಶ್ರಿತ ವ್ಯಕ್ತಿಗಳಿಗೆ ಮಾನವೀಯ ಆಧಾರದ ಮೇಲೆ ಪರ್ಯಾಯ ವಸತಿ ಒದಗಿಸಲು ನಿರ್ಧರಿಸಿತ್ತು. ವಸತಿ ಸಚಿವ ಬಿ ಝಡ್ ಜಮೀರ್ ಅಹ್ಮದ್ ಖಾನ್ ಅವರೊಂದಿಗೆ ಮಾತನಾಡಿದ್ದೇನೆ ಎಂದು ಹೇಳಿದ ಕಂದಾಯ ಸಚಿವರು, ಅರ್ಹತಾ ಮಾನದಂಡಗಳು ಮತ್ತು ನಿಯಮಗಳಿಗೆ ಅನುಸಾರವಾಗಿ ಸಂಪೂರ್ಣ ಪರಿಶೀಲನೆಯ ನಂತರವೇ ಮುಂದುವರಿಯುವ ಬಗ್ಗೆ ಸರ್ವಾನುಮತವಿದೆ. ಯಾವುದೇ ನಿಯಮಗಳನ್ನು ಆತುರದಿಂದ ದಾಟುವುದನ್ನು ನಾವು ಬಯಸುವುದಿಲ್ಲ. ಇದು ನಾವಿಬ್ಬರೂ ಜಂಟಿಯಾಗಿ ತೆಗೆದುಕೊಂಡ ನಿರ್ಧಾರ. ಪರಿಶೀಲನೆ ಈಗ ಪೂರ್ಣಗೊಳ್ಳುತ್ತದೆ ಎಂದು ನಾವು ನಿರೀಕ್ಷಿಸಿದ್ದೆವು, ಆದರೆ ಅದು ಇನ್ನೂ ನಡೆಯುತ್ತಿದೆ. ಒತ್ತಡ ಹೇರುವ ಅಥವಾ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ಉದ್ದೇಶವಿಲ್ಲ ಪರಿಶೀಲಿಸಿದ ಪಟ್ಟಿಯನ್ನು ಸಲ್ಲಿಸಿದ ನಂತರ, ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

**ಸಂಪೂರ್ಣ ಪರಿಶೀಲನಾ ಪ್ರಕ್ರಿಯೆಯು ಸಮಯ ತೆಗೆದುಕೊಳ್ಳುವುದರಿಂದ, ಅರ್ಹ ಫಲಾನುಭವಿಗಳ ಮೊದಲ ಪಟ್ಟಿಗೆ ಸಾಧ್ಯವಾದಷ್ಟು ಬೇಗ ಪರ್ಯಾಯ ವಸತಿ ಸೌಕರ್ಯವನ್ನು ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಪರಿಶೀಲನೆ ಇನ್ನೂ ಮುಂದುವರೆದಿದೆ. ಒಂದು ಹಂತದ ಪರಿಶೀಲನೆಯ ನಂತರ, ಪೊಲೀಸರು ಮತ್ತು ಕಂದಾಯ ಇಲಾಖೆ ಈಗ ಹೆಚ್ಚಿನ ಪರಿಶೀಲನೆಗಳನ್ನು ನಡೆಸುತ್ತಿದೆ. ಪರಿಶೀಲನಾ ಪ್ರಕ್ರಿಯೆ ನಡೆಯುತ್ತಿರುವಾಗ ಪ್ರತಿಕ್ರಿಯಿಸುವುದು ಸೂಕ್ತವಲ್ಲ.**
**–ಕೃಷ್ಣ ಬೈರೇಗೌಡ**

## ವೆನೆಜುವೆಲಾ ಮೇಲೆ ಅಮೆರಿಕ ದಾಳಿ: ಪ್ರತಿಭಟನೆ

• **ಉದಯವಾಹಿನಿ, ಬೆಂಗಳೂರು**

ವೆನೆಜುವೆಲಾ ಮೇಲಿನ ಅಮೆರಿಕದ ಸಾಮ್ರಾಜ್ಯಶಾಹಿ ಮಿಲಿಟರಿ ದಾಳಿ ಖಂಡಿಸಿ ಎಡಪಕ್ಷಗಳ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ ಭಾಷಣದಲ್ಲಿ ವೆನೆಜುವೆಲಾದಲ್ಲಿರುವ ತೈಲ ನಿಕ್ಷೇಪಗಳನ್ನು ವಶಪಡಿಸಿಕೊಳ್ಳುವುದಾಗಿ ಹೇಳಿದ್ದಾರೆ. ಮಾದಕ ದ್ರವ್ಯ–ಭಯೋತ್ಪಾದನೆ ಪಿತೂರಿ ಹೆಸರಿನಲ್ಲಿ ವೆನೆಜುವೆಲಾದ ಅಧ್ಯಕ್ಷ ನಿಕೋಲಸ್ ಮಡೂರೊ ಹಾಗೂ ಅವರ ಪತ್ನಿ ಸಿಲಿಯಾ ಫ್ಲೋರ್ಸ್ ಅವರನ್ನು ಅಪಹರಣ ಮಾಡಿರುವುದು ಖಂಡನೀಯ' ಎಂದು ಪ್ರತಿಭಟನಕಾರರು ಹೇಳಿದರು.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕ್ ರುಬಿಯೊ ಅವರು ಕ್ಯೂಬಾ ಹಾಗೂ ಮೆಕ್ಸಿಕೊ ಮುಂದಿನ ಗುರಿಯಾಗಿವೆ ಎಂದು ಎಚ್ಚರಿಕೆ ನೀಡಿರುವುದು ಸರಿಯಲ್ಲ. ಅಮೆರಿಕದ ರಾಷ್ಟ್ರೀಯ


☛ ಉದಯವಾಹಿನಿ ಚಿತ್ರ

ಭದ್ರತಾ ರಣನೀತಿ 2025 ಬಿಡುಗಡೆ ಆದ ಕೆಲ ದಿನಗಳ ನಂತರ ಅಲ್ಲಿನ ನಾಯಕರು ಈ ರೀತಿಯ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅಮೆರಿಕದ ಸಾಮ್ರಾಜ್ಯಶಾಹಿ ಇಡೀ ಪ್ರಪಂಚದ ಮೇಲೆ ತನ್ನ ಪ್ರಾಬಲ್ಯವನ್ನು ಹೇರುವ ಪ್ರಯತ್ನದಲ್ಲಿ ಮಿಲಿಟರಿ ದಾಳಿಗಳನ್ನು ನಡೆಸಲು ಸಜ್ಜಾಗುತ್ತಿದೆ ಎಂದರು. ವೆನೆಜುವೆಲಾದ ಮೇಲೆ ಯುದ್ಧ ಬೇಡ ಮತ್ತು ಅಲ್ಲಿನ ಅಧ್ಯಕ್ಷ ಮಡೂರೊ ಅವರನ್ನು ಕೂಡಲೇ ಬಿಡುಗಡೆಗೊಳಿಸಬೇಕು. ಕೇಂದ್ರ ಸರ್ಕಾರವು ಅಮೆರಿಕದ ಆಕ್ರಮಣವನ್ನು ಖಂಡಿಸುವ ಮೂಲಕ ವೆನೆಜುವೆಲಾದ ಪರವಾಗಿ ದೃಢವಾಗಿ ನಿಲ್ಲಬೇಕು ಎಂದು ಆಗ್ರಹಿಸಿದರು.

## ಉದ್ಯೋಗ ಹುಡುಕಬೇಡಿ ಸೃಷ್ಟಿಸಿ: ಸ್ವದೇಶಿ ಜಾಗರಣ ಮಂಚ್‌ನ ಜಗದೀಶ್

• **ಉದಯವಾಹಿನಿ, ಬೆಂಗಳೂರು**

ಕೃಷಿ, ಸಣ್ಣ ಕೈಗಾರಿಕೆ, ಸಣ್ಣ ವ್ಯಾಪಾರ, ಸ್ವಯಂ ಉದ್ಯೋಗಗಳಿಂದ ಶೇಕಡ 96ರಷ್ಟು ಉದ್ಯೋಗ ಸೃಷ್ಟಿಯಾಗುತ್ತಿದೆ ಎಂದು ಸ್ವದೇಶಿ ಜಾಗರಣ ಮಂಚ್ ಕ್ಷೇತ್ರ ಸಂಘಟನಾ ಕಾರ್ಯದರ್ಶಿ ಜಗದೀಶ್ ಮಾಹಿತಿ ನೀಡಿದರು. ಸದೇಶಿ ಜಾಗರಣ ಮಂಚ್ – ಕರ್ನಾಟಕ ವತಿಯಿಂದ ಆಯೋಜಿಸಲಾದ ಸ್ವದೇಶಿ 2ನೇ ದಿನದ ಮೇಳದಲ್ಲಿ ನಿರುದ್ಯೋಗ ಸಮಸ್ಯೆ ಮತ್ತು ಪರಿಹಾರ ಮಾರ್ಗಗಳು ಎಂಬ ವಿಷಯ ಕುರಿತು ಯುವ ಸಮಾವೇಶದಲ್ಲಿ ಮಾತನಾಡಿದರು.

ಉದ್ಯೋಗ ಹುಡುಕಬೇಡಿ– ಸೃಷ್ಟಿಸಿ



ಎಂಬುದು ನಮ್ಮ ಸಿದ್ಧಾಂತವಾಗಿದೆ.

ದೇಶದ ಉತ್ಪಾದಕರಿಗೆ ಸೂಕ್ತ ತಂತ್ರಜ್ಞಾನದ ಸಂಶೋಧನೆ, ಉತ್ಪನ್ನಗಳಿಗೆ ದೇಶಿಯ ಮಾರುಕಟ್ಟೆ, ರಫ್ತು ಮಾಡುವ ವ್ಯವಸ್ಥೆ ಆಗಬೇಕು.

ಯುವ ಜನತೆಯಲ್ಲಿ ಉದ್ಯಮಶೀಲತೆಯ ಮಾನಸಿಕತೆಯನ್ನು ಬೆಳೆಸುವಂತಹ ಶಿಕ್ಷಣ, ಕಾಲೇಜುಗಳಲ್ಲಿ ಉದ್ಯೋಗ ಸೃಷ್ಟಿಸುವ ಕೌಶಲ್ಯ ತರಬೇತಿ ಸಿಗಬೇಕು ಎಂದರು. ಶಾಸಕ ಎಸ್. ಮುನಿರಾಜು ಮಾತನಾಡಿ, ಸ್ವದೇಶಿ ವಸ್ತುಗಳನ್ನು ಹೆಚ್ಚು ಬಳಸುವ ಮೂಲಕ ಇಲ್ಲಿನ ಉದ್ಯೋಗದ ಸಮಸ್ಯೆಯನ್ನು ನಿವಾರಿಸಬಹುದು. ಗಡಿಯಾರ, ತಂಪು ಪಾನೀಯ, ಲೇಖನಿ ಸಾಮಗ್ರಿ, ಪಾದರಕ್ಷೆ, ಅಡಿಗೆ ಎಣ್ಣೆ, ಮಸಾಲೆ ಪುಡಿ, ಹಾಲಿನ ಪುಡಿ, ಉಪ್ಪು, ಸಾಬೂನುಗಳು ಹಾಗೂ ಪೌಡರ್, ತುಪ್ಪ, ಸಿದ್ದ ಉಡುಪುಗಳು ಮುಂತಾದ ದೇಶಿ ಉತ್ಪನ್ನಗಳ ಬೇಡಿಕೆಯನ್ನು ಹೆಚ್ಚಿಸಬೇಕು ಎಂದು ತಿಳಿಸಿದರು.

# ಥಣಿಸಂದ್ರದಲ್ಲಿ ಬುಲ್ಡೋಜರ್ ಸದ್ದು

### 2 ಎಕರೆ ಜಾಗದಲ್ಲಿ ಅಕ್ರಮವಾಗಿ ನಿರ್ಮಿಸಲಾಗಿದ್ದ 22 ಕಟ್ಟಡಗಳನ್ನು ತೆರವುಗೊಳಿಸಿದ ಬಿಡಿಎ

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರಿನಲ್ಲಿ ಕೋಗಿಲು ಲೇಔಟ್ ನಲ್ಲಿ ಅಕ್ರಮವಾಗಿ ಒತ್ತುವರಿಯಾಗಿದ್ದ ಭೂಮಿಯನ್ನು ತೆರವು ಮಾಡಿದ ಬಳಿಕ ಈಗ ಮತ್ತೆ ರಾಜಧಾನಿಯಲ್ಲಿ ಬುಲ್ಡೋಜರ್ ಸದ್ದು ಮಾಡಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಥಣಿಸಂದ್ರ ಪ್ರದೇಶದಲ್ಲಿ ಅಕ್ರಮವಾಗಿ ನಿರ್ಮಿಸಲಾಗಿದ್ದ ಸುಮಾರು 22 ಕಟ್ಟಡಗಳನ್ನು ತೆರವುಗೊಳಿಸಿದೆ.

**2ಎಕರೆ ಸರ್ಕಾರಿ ಜಾಗ ವಶಕ್ಕೆ ಪಡೆದ ಅಧಿಕಾರಿಗಳು:** ಸುಮಾರು 2 ಎಕರೆ ಪ್ರದೇಶದಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದ ಮನೆಗಳು, ಗ್ಯಾರೇಜುಗಳು ಮತ್ತು ಗೋದಾಮುಗಳನ್ನು ನೆಲಸಮಗೊಳಿಸಿ, ಸುಮಾರು 80 ಕೋಟಿ ರೂ. ಮೌಲ್ಯದ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇನ್ನು, ನ್ಯಾಯಾಲಯದ ಆದೇಶ ಮತ್ತು ಯೋಜಿತ ಕ್ರಮದ ಬಗ್ಗೆ ನಿವಾಸಿಗಳಿಗೆ ತಿಳಿಸಿದ ನಂತರ ನೆಲಸಮ ಕಾರ್ಯಾಚರಣೆಯನ್ನು ನಡೆಸಲಾಗಿದೆ. ಪಕ್ಕದ ಅರ್ಧ ಎಕರೆ ಜಾಗದಲ್ಲಿ ಇನ್ನೂ ಆರು ಮನೆಗಳಿದ್ದು, ಅವುಗಳನ್ನು ಶೀಘ್ರದಲ್ಲೇ ಕೆಡವಲಾಗುವುದು ಎಂದು ತಿಳಿಸಿದ್ದಾರೆ.

**ಎಲ್ಲಾ ದಾಖಲೆಗಳಿವೆ ಎಂದ ನಿವಾಸಿಗಳು:** ಆದರೆ, ಸ್ಥಳೀಯ ನಿವಾಸಿಗಳು ಮಾತ್ರ ಈ ಜಾಗದಲ್ಲಿ ಸುಮಾರು 2ದಶಕಗಳಿಂದ ವಾಸಿಸುತ್ತಿದ್ದು, ತಮ್ಮ ಬಳಿ ಮಾನ್ಯ ದಾಖಲೆಗಳಿವೆ. ಆದಾಗ್ಯೂ, ಅಧಿಕಾರಿಗಳು ತೆರವು ಮಾಡುವ ಬಗ್ಗೆ ಯಾವುದೇ ಮುನ್ಸೂಚನೆ ನೀಡದೆ ತೆರವು ಕಾರ್ಯಾಚರಣೆ ನಡೆಸಿದ್ದಾರೆ.

ಇದರಿಂದ ಅನೇಕ ಕುಟುಂಬಗಳು ಬೀದಿಗೆ ಬಿದ್ದಿವೆ ಎಂದು ಆರೋಪಿಸಿದ್ದಾರೆ.


☛ ಉದಯವಾಹಿನಿ ಚಿತ್ರ

- **ಥಣಿಸಂದ್ರದಲ್ಲಿ ಬಿಡಿಎ ಅಧಿಕಾರಿಗಳಿಂದ ಸರ್ಕಾರಿ ಜಾಗದಲ್ಲಿ ನಿರ್ಮಿಸಲಾಗಿದ್ದ 22 ಕಟ್ಟಡಗಳ ತೆರವು ಕಾರ್ಯಚರಣೆ**
- **2 ಎಕರೆ ಪ್ರದೇಶದಲ್ಲಿರುವ ಈ ಭೂಮಿಯನ್ನು ಅರ್ಕಾವತಿ ಲೇಔಟ್ ಯೋಜನೆಗಾಗಿ ಗುರುತಿಸತ್ತು ಎಂದ ಹೇಳಿದ ಅಧಿಕಾರಿಗಳು**
- **ನಮ್ಮ ಬಳಿ ಮಾನ್ಯ ದಾಖಲಡಗಳಿದ್ದರೂ ಯಾವುದೇ ಮುನ್ಸೂಚನೆಯಿಲ್ಲದೆ, ಮನೆಗಳನ್ನು ಕೆಡವಿದ್ದಾರೆಂದು ಸ್ಥಳೀಯರು ಆಕ್ರೋಶ**

**ಅಧಿಕಾರಿಗಳು ಹೇಳೋದೇನು?**

**ಬಿಡಿಎ ಅಧಿಕಾರಿಗಳ ಪ್ರಕಾರ, ಈ ಭೂಮಿಯನ್ನು 2004ರಲ್ಲಿ ಅರ್ಕಾವತಿ ಲೇಔಟ್ ಯೋಜನೆಗಾಗಿ ಗುರುತಿಸಲಾಗಿತ್ತು. ಅಧಿಸೂಚನೆಯ ನಂತರ, ಭೂಮಿ ಕಳೆದುಕೊಂಡವರಲ್ಲಿ ಒಬ್ಬರು ಬಿಡಿಎಯಿಂದ ಪರಿಹಾರ ಪಡೆದ ನಂತರವೂ, ಅಕ್ರಮವಾಗಿ ನಿವೇಶನಗಳನ್ನು ವಿಂಗಡಿಸಿ ಮಾರಾಟ ಮಾಡಿದ್ದರು. ಅನೇಕ ಖರೀದಿದಾರರು ಸ್ವಾಧೀನವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು, ಆದರೆ ತೀರ್ಪು ಬಿಡಿಎಪರವಾಗಿ ಬಂತು. ಆದ್ದರಿಂದ, ಪ್ರಾಧಿಕಾರಕ್ಕೆ ಸೇರಿದ ಭೂಮಿಯನ್ನು ನಾವು ಮರಳಿ ಪಡೆಯಬೇಕಾಯಿತು ಎಂದು ತಿಳಿಸಿದ್ದಾರೆ.**

ಈ ತೆರವು ಕಾರ್ಯಾಚರಣೆಯಿಂದ ಹಾನಿಗೊಳಗಾಗಿರುವ ಸಂತ್ರಸ್ತರೊಬ್ಬರು ನಾವು ಇಲ್ಲಿ ಸುಮಾರು 20 ವರ್ಷಗಳಿಂದ ವಾಸಿಸುತ್ತಿದ್ದೇವೆ.

ನಮ್ಮ ಬಳಿ ಇ–ಖಾತೆ, ವಿದ್ಯುತ್ ಸಂಪರ್ಕ, ಎಲ್ಲಾ ಆಸ್ತಿ ದಾಖಲೆಗಳಿವೆ. ಆದರೂ ನಮ್ಮ ವಸ್ತುಗಳನ್ನು ಎಸೆದು ತೆರವು ಕಾರ್ಯಾಚರಣೆ ನಡೆಸಿದ್ದು, ಈಗ ನಮಗೆ ಮಲಗಲು ಜಾಗವೂ ಇಲ್ಲ ಎಂದು ತಮ್ಮ ಅಳಲುತೋಡಿಕೊಂಡಿದ್ದಾರೆ. ಇದು ರಾಜ್ಯ ರಾಜಧಾನಿಯಲ್ಲಿ ಬುಲ್ಡೋಜರ್ ಸದ್ದು ಮಾಡುತ್ತಿರುವುದು ಥಣಿಸಂದ್ರದ ಪರಿಸ್ಥಿತಿಯೂ ಕೋಗಿಲು ಲೇಔಟ್ ನಂತೆ ಆಗಲಿದೆಯೇ ಎಂಬ ಅನುಮಾನ ಮೂಡಿದೆ.


## ಪಿಂಚಣಿಗಾಗಿ ವೃದ್ಧ ದಂಪತಿ ಪರದಾಟ

• **ಉದಯವಾಹಿನಿ, ಬೆಂಗಳೂರು**

ಆಧಾರ್ ಕಾರ್ಡ್ ಅನ್ನು ಬ್ಯಾಂಕ್ ಖಾತೆಗಳೊಂದಿಗೆ ಲಿಂಕ್ ಮಾಡದ ಕಾರಣ ವೃದ್ಧಾಪ್ಯ ಮತ್ತು ಅಂಗವೈಕಲ್ಯ ಪಿಂಚಣಿ ಇಲ್ಲದೆ 77 ವರ್ಷದ ವಿಕಲಚೇತನ ವ್ಯಕ್ತಿ ಮತ್ತು ಅವರ ಹಾಸಿಗೆ ಹಿಡಿದ ಪತ್ನಿ ಕಷ್ಟಪಡುತ್ತಿದ್ದಾರೆ ಎಂಬ ಮಾಧ್ಯಮ ವರದಿಯನ್ನು ಆಧರಿಸಿ ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆಎನ್ ಫಣೀಂದ್ರ ಸ್ವಯಂಪ್ರೇರಿತ ಪ್ರಕರಣವನ್ನು ಕೈಗೆತ್ತಿಕೊಂಡಿದ್ದಾರೆ.

ಈ ದಂಪತಿ ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ವಾಸಿಸುತ್ತಿದ್ದಾರೆ. ಬ್ಯಾಂಕ್ ಖಾತೆಗಳಿಗೆ ಆಧಾರ್ ಲಿಂಕ್ ಮಾಡಿಲ್ಲ ಎಂಬ ಒಂದೇ ಒಂದು ಕಾರಣಕ್ಕಾಗಿ ದಂಪತಿಯ ವೃದ್ಧಾಪ್ಯ ಮತ್ತು ಅಂಗವಿಕಲ ಪಿಂಚಣಿ ನಿರಾಕರಿಸುವುದು ಮತ್ತು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳದಿರುವುದು ಪ್ರಾಥಮಿಕವಾಗಿ ಅಧಿಕಾರಿಗಳ ಕರ್ತವ್ಯ ಲೋಪಕ್ಕೆ ಸಮನಾಗಿರುತ್ತದೆ ಎಂದು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಸೆಕ್ಷನ್ 2(1) ರ ಅಡಿಯಲ್ಲಿ ಪ್ರಕರಣ ದಾಖಲಿಸಿದ ನ್ಯಾಯಮೂರ್ತಿ ಫಣೀಂದ್ರ ಹೇಳಿದ್ದಾರೆ. ದೂರಿನ ಪ್ರಕಾರ, ಗಜಾನನ ಅವರು ಅಂಗವಿಕಲರಾಗಿದ್ದು, 7–8 ವರ್ಷಗಳಿಂದ ಹಾಸಿಗೆ ಹಿಡಿದಿರುವ ತಮ್ಮ ಪತ್ನಿ ಭಾರತಿಯನ್ನು ನೋಡಿಕೊಳ್ಳುತ್ತಿದ್ದಾರೆ. ಜೀವನೋಪಾಯಕ್ಕೆ ಬೇರೆ ದಾರಿಗಳಿಲ್ಲದೆ, ಸಾಗರದ ಭೀಮನಕೋಣೆ ಮುಖ್ಯ ರಸ್ತೆಯ ಪಕ್ಕದ ಮನೆಯಲ್ಲಿ ವಾಸಿಸುವ ಈ ದಂಪತಿ ಸಂಕಷ್ಟದಲ್ಲಿದ್ದಾರೆ. ಅವರ ವೃದ್ಧಾಪ್ಯ ಮತ್ತು ಅಂಗವೈಕಲ್ಯ ಪಿಂಚಣಿಗಳನ್ನು ನಿಲ್ಲಿಸಲಾಗಿದೆ ಎಂಬ ವಿಷಯವನ್ನು ತಾಲ್ಲೂಕು ಅಧಿಕಾರಿಗಳ ಗಮನಕ್ಕೆ ತರಲಾಯಿತು.

ಅವರು ಮನೆಗೆ ಭೇಟಿ ನೀಡಿ ಆಧಾರ್ ಲಿಂಕ್ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಿದರು. ಆದರೆ, ಅರ್ಜಿಯನ್ನು ತಿರಸ್ಕರಿಸಲಾಯಿತು. ಬಳಿಕ ಯಾವುದೇ ಮುಂದಿನ ಕ್ರಮಗಳನ್ನು ತೆಗೆದುಕೊಂಡಿಲ್ಲ.


☛ ಉದಯವಾಹಿನಿ ಚಿತ್ರ

ಅಧಿಕಾರಿಗಳ ಕಾರ್ಯವೈಖರಿಯನ್ನು 'ಕೆಟ್ಟ ನಿರ್ವಹಣೆ ಎಂದು ಬಣ್ಣಿಸಿದ ನ್ಯಾಯಮೂರ್ತಿ ಫಣೀಂದ್ರ, ಸಾಗರ ತಾಲ್ಲೂಕಿನ ಸಹಾಯಕ ಆಯುಕ್ತ ವೀರೇಶ್ ಕುಮಾರ್ ಮತ್ತು ತಹಶೀಲ್ದಾರ್ ಚಂದ್ರಶೇಖರ್ ನಾಯಕ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ದಂಪತಿಯ ನಿವಾಸಕ್ಕೆ ಭೇಟಿ ನೀಡಿ ಅವರ ಕುಂದುಕೊರತೆಗಳನ್ನು ಆಲಿಸಲು ಮತ್ತು ಸಂಬಂಧಪಟ್ಟವರಿಗೆ ನಿರ್ದೇಶನಗಳನ್ನು ನೀಡಲು ಆದೇಶದ ಪ್ರತಿಯನ್ನು ಶಿವಮೊಗ್ಗದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗೆ ಕಳುಹಿಸಿದ್ದಾರೆ. ಜನವರಿ 19 ರೊಳಗೆ ವರದಿ ನೀಡುವಂತೆಯೂ ಅವರು ಕೋರಿದ್ದಾರೆ.

# ಸೂರಿಗಾಗಿ ಸೋಲಿಗ ಸಮುದಾಯದ ವೃದ್ಧೆ ಪರದಾಟ : ಮುಕ್ತಿ ಕಾಲೋನಿ ಬಡ ವೃದ್ಧೆ ಕುಟುಂಬಕ್ಕೆ ಬೇಕಿದೆ ಆಸರೆ

• **ಉದಯವಾಹಿನಿ, ಗುಂಡ್ಲುಪೇಟೆ**

ಇಂದೋ ನಾಳೆಯೋ ಅಂತಿರುವ ವೃದ್ಧೆಗೆ ಕುಟುಂಬ ಜವಾಬ್ದಾರಿಯ ನೊಗ ಹೆಗಲೇರಿದೆ, ಸರಿಯಾದ ಸೂರಿಲ್ಲ ಜೀವನೋಪಾಯಕ್ಕಾಗಿ ಕೂಲಿ ನಾಲಿ ಮಾಡುತ್ತಿರುವ ಈಕೆಗೆ ಆಸರೆಯಾಗಿ ನಿಂತಿರುವುದು ಮಾತ್ರ ಸಹೋದರಿ, ಅಂಗವಿಕಲ ಮಗಳು, ಮೊಮ್ಮಗಳನ್ನ ಸಾಕಿ ಸಲಹುತ್ತಿರುವ ವೃದ್ಧೆಗೆ ಕರುಣೆ ತೋರಿಸುವವರು ಸಹ ಯಾರು ಇಲ್ಲ , ಜವಾಬ್ದಾರಿತನ ತೋರಬೇಕಿದ್ದ ಅಧಿಕಾರಿಗಳು ಕಣ್ಣಿದ್ದೂ ಕುರುಡರಾಗಿದ್ದು ಬಡ ಕುಟುಂಬಕ್ಕೆ ಶಾಪವಾಗಿ ಪರಿಣಮಿಸಿದೆ.

ತಾಲ್ಲೂಕಿನ ಬರಗಿ ಗ್ರಾಮಪಂಚಾಯತಿ ವ್ಯಾಪ್ತಿಯ ಮುಕ್ತಿ ಕಾಲೋನಿಯ ಸೋಲಿಗ ಜನಾಂಗದ 70 ವರ್ಷ ವಯಸ್ಸಿನ ವೃದ್ಧೆ ನೂರಾಳಮ್ಮ ಎಂಬವರ ಕಥೆ ಹೇಳತೀರದ್ದಾಗಿದೆ, ಇರಲು ಮನೆಯಿಲ್ಲ, ದಾನಿಗಳು ನೀಡಿದ ಪುಟ್ಟ ಕೋಣೆಯಲ್ಲಿ ಮಗಳು ಮೊಮ್ಮಗಳ ಜೊತೆಗೆ ವಾಸವಿರುವ ಈಕೆಗೆ ಕುಟುಂಬ ನಿರ್ವಹಣೆ ಸವಾಲು ಬೆನ್ನತ್ತಿದೆ.


ಉದಯವಾಹಿನಿ ಚಿತ್ರ

ಮಳೆ ಬಂತೆಂದರೆ ಸೋರುವ ಮನೆ, ಯಾವ ಸಂದರ್ಭದಲ್ಲಿ ಕುಸಿದು ಬೀಳುತ್ತದೆಯೋ ಅದರ ಅರಿವಂತೂ ಮೂವರಿಗೂ ಇಲ್ಲ. ವಸತಿ ಯೋಜನೆ ಮೂಲಕ ಬಡವರಿಗೆ ಮನೆಗಳನ್ನ ನೀಡಲಾಗುತ್ತಿದೆ ಎಂದು ಉದ್ದುದ್ದ ಭಾಷಣ ಬಿಗಿಯುವ ಸರ್ಕಾರಗಳು ಸಮಾಜದಲ್ಲಿ ನಿಷ್ಟುರ ಬದುಕು ಸಾಗಿಸುತ್ತಿರುವ ಈ ವೃದ್ಧೆಗೆ ಕಳೆದ 30 ವರ್ಷಗಳಲ್ಲಿ ಸೂರು ಕಲ್ಪಿಸಲಾಗಿಲ್ಲ ನೂರಾಳಮ್ಮ ಅದೆಷ್ಟೋ ಬಾರಿ ಅಧಿಕಾರಿಗಳನ್ನ ಬೇಡಿಕೊಂಡರೂ ಸಹ ಪ್ರಯೋಜನವಾಗಿಲ್ಲ.

**ಅಂಗವಿಕಲ ಮಗಳು - ಮೊಮ್ಮಗಳ ಜೊತೆ ವಾಸ :** ನೂರಾಳಮ್ಮ ಅವರಿಗೆ ಒತ್ತಾಸೆಯಾಗಿ ಸಹೋದರಿ ಪ್ರೇಮಾ ಅವರಿದ್ದರೂ ಸಹ ಬಡತನದ ಹೊರೆ ಸಂಪೂರ್ಣವಾಗಿ ಕುಗ್ಗಿಸಿದೆ, ಗ್ರಾಮಪಂಚಾಯತಿಯಿಂದ ಇವರಿಗೆ ಸಿಗಬೇಕಿರುವ ಸೌಲಭ್ಯಗಳು ಪರರ ಪಾಲಾಗಿವೆ ಎಂಬ ಆರೋಪವಿದೆ, ಅಂಗವಿಕಲ ವೇತನ, ವೃದ್ದಾಪ್ಯ ವೇತನವು ಸಿಗದೆ ಪ್ರತಿನಿತ್ಯ ಕಚೇರಿಗಳಿಗೆ ಅಲೆದಳೆದು ಬೇಸತ್ತು ಹೋಗಿದ್ದಾರೆ.

**ಉಜ್ವಲ ಯೋಜನೆ - ಶೌಚಾಲಯ ಸೌಕರ್ಯವಿಲ್ಲ :** ಕೇಂದ್ರ ಸರ್ಕಾರದಿಂದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಉಚಿತವಾಗಿ ಒದಗಿಸುತ್ತದೆ ಆದರೆ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಉಳ್ಳವರ ಪಾಲಾಗುತ್ತಿದೆಯೇ ಎಂಬ ಗುಮಾನಿ ಇದೆ, ಹಾಗೆಯೇ ಸ್ವಚ್ಛ ಭಾರತ್ ಗ್ರಾಮಾಂತರ ಪ್ರದೇಶಗಳಲ್ಲಿ ಬಯಲು ಶೌಚ ನಿರ್ಮೂಲನೆಗೆ ತಂದ ಯೋಜನೆ ಹಳ್ಳಹಿಡಿದಿದೆ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕಿರುವ ಸವಲತ್ತುಗಳು ಕಣ್ಮರೆಯಾಗುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ.

ಸರ್ಕಾರದಿಂದ ಏನನ್ನೂ ಅಪೇಕ್ಷಿಸದ ವೃದ್ಧೆ ನೂರಾಳಮ್ಮ ಇರಲು ಮನೆ, ಮಗಳು ಮೊಮ್ಮಗಳಿಗೆ ಅಂಗವಿಕಲ ವೇತನ , ಶೌಚಾಲಯ, ವಿದ್ಯುತ್ ವ್ಯವಸ್ಥೆ ಕಲ್ಪಿಸಿದರೆ ಸಾಕು ಎಂದು ಕೈ ಮುಗಿದು ಬೇಡಿಕೊಂಡಿದ್ದಾರೆ. 70 ರ ವಯಸ್ಸಿನಲ್ಲಿ ನೆಮ್ಮದಿ ಜೀವನ ಸಾಗಿಸಬೇಕಾದ ವೃದ್ಧೆ ಸರ್ಕಾರದ ಸವಲತ್ತುಗಳಿಗಾಗಿ ಅಂಗಲಾಚುತ್ತಿರುವುದು ಮಾತ್ರ ಶೋಚನೀಯವಾಗಿದೆ. ಇನ್ನಾದರೂ ಜನಪ್ರತಿನಿಧಿಗಳು , ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಗತ್ಯ ಸೌಕರ್ಯಗಳನ್ನ ಒದಗಿಸುವ ನಿಟ್ಟಿನಲ್ಲಿ ಪ್ರಾಮಾಣಿಕತೆ ತೋರಬೇಕಿದೆ.

# ಪಾವಗಡ ರೇಷ್ಮೆಗೆ ರಾಜ್ಯದಲ್ಲಿ ಇನ್ನಿಲ್ಲದ ಬೇಡಿಕೆ

## ಇದನ್ನೇ ಉದ್ಯಮವನ್ನಾಗಿಸಿಕೊಂಡು ಪ್ರತಿ ತಿಂಗಳು ಲಕ್ಷಾಂತರ ರೂ. ಲಾಭ ಪಡೆಯುತ್ತಿದ್ದಾರೆ

• **ಉದಯವಾಹಿನಿ, ಪಾವಗಡ**

ಕಲ್ಪತರು ಜಿಲ್ಲೆಯ ಪಾವಗಡ ತಾಲ್ಲೂಕು ಬರದನಾಡಾದರೂ ಇಲ್ಲಿನ ಹವಾಗುಣ ರೇಷ್ಮೆ ಬೆಳೆ ಕೈಹಿಡಿದಿದೆ. ಪರಿಣಾಮ ದಕ್ಷಿಣ ಕರ್ನಾಟಕದಲ್ಲೇ ಪಾವಗಡ ರೈತರು ಉತ್ತಮ ಗುಣಮಟ್ಟದ ರೇಷ್ಮೆ ಬೆಳೆ ಬೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಹೌದು, ಗಡಿಯ ಪಾವಗಡದಲ್ಲಿ ಹೆಚ್ಚು ರೈತರು ರೇಷ್ಮೆ ಬೆಳೆಯುವಲ್ಲಿಉತ್ಸಾಹ ತೋರುತ್ತಿದ್ದಾರೆ. ಜತೆಗೆ ಇದನ್ನೇ ಉದ್ಯಮವನ್ನಾಗಿಸಿಕೊಂಡು ಪ್ರತಿ ತಿಂಗಳು ಲಕ್ಷಾಂತರ ರೂ. ಲಾಭ ಪಡೆಯುತ್ತಿದ್ದಾರೆ. ಪದವಿ, ಉನ್ನತ ಶಿಕ್ಷಣ ಪಡೆದವರು ಕೂಡ ಲಾಭದಾಯಕ ರೇಷ್ಮೆ ಬೆಳೆ ಕಡೆ ಮುಖ ಮಾಡುವಂತಾಗಿದೆ ಎಂದರೆ ತಪ್ಪಾಗಲಾರದು.

**ಒಂದು ರೇಷ್ಮೆ ಗೂಡಿನಿಂದ 1100 ಮೀಟರ್ ದಾರ:** ತುಮಕೂರು ಜಿಲ್ಲೆಯ ಪಾವಗಡದಲ್ಲಿ ಬಿಳಿ ಗಿತ್ತಲಿ ಗೂಡು ಬೆಳೆಯುವಲ್ಲಿ ರಾಜ್ಯದಲ್ಲೇ ಮೂಂಚೂಣಿ. ಇಲ್ಲಿನ ರೇಷ್ಮೆ ಉತ್ತಮ ಗುಣಮಟ್ಟವಿರುವ ಹಿನ್ನೆಲೆ ತುಮಕೂರು, ಚಿತ್ರದುರ್ಗ, ಬಳ್ಳಾರಿ ಸೇರಿ ದಕ್ಷಿಣ ಕರ್ನಾಟಕದ ಆನೇಕ ಜಿಲ್ಲೆಗಳಲ್ಲಿ ಪಾವಗಡದ ರೇಷ್ಮೆಗೆ ಬೇಡಿಕೆ ಬರುತ್ತಿದೆ.

ಇಲ್ಲಿನ ಬೆಳೆ ದಕ್ಷಿಣದಲ್ಲೇ ಅತ್ಯಂತ ಗುಣಮಟ್ಟದಿಂದ ಕೂಡಿದ್ದು, ಒಂದು ಗೂಡಿನಿಂದ 1100 ಮೀಟರ್ ರೇಷ್ಮೆ ದಾರ ತೆಗೆಯಬಹುದು. ಇದೇ ಕಾರಣದಿಂದ ಇಲ್ಲಿನ ರೇಷ್ಮೆಗೆ ಬಹಳಷ್ಟು ಬೇಡಿಕೆ ಸೃಷ್ಟಿಯಾಗಿದೆ.


ಉದಯವಾಹಿನಿ ಚಿತ್ರ

ರೇಷ್ಮೆ ಬೆಳೆ ರೈತರಿಗೆ ಕೈಹಿಡಿದಿದೆ

**700 ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆ:** ಪಾವಗಡದಲ್ಲಿ ಬರದಿಂದಾಗಿ ಅಂತರ್ಜಲ ಕ್ಷೀಣಿಸಿದ ಪರಿಣಾಮ ರೇಷ್ಮೆ ಬೆಳೆಯಲ್ಲಿ ಕೂಡ ಹಿನ್ನಡೆ ಎದುರಾಗಿತ್ತು. ಆದರೆ, ಇತ್ತೀಚೆಗೆ 500 ಹೆಕ್ಟೇರ್ ಪ್ರದೇಶದಿಂದ 700 ಹೆಕ್ಟೇರ್ ಪ್ರದೇಶಕ್ಕೆ ರೇಷ್ಮೆ ಬೆಳೆ ವಿಸ್ತರಣೆಯಾದಂತಾಗಿದೆ. ಈ ವರ್ಷದಲ್ಲಿಯೇ 200 ಹೆಕ್ಟೇರ್ ಪ್ರದೇಶ ರೇಷ್ಮೆ ವಿಸ್ತರಣೆಯಾಗಿದ್ದು, ಇದು ಜಿಲ್ಲೆಯಲ್ಲೇ ಹೆಚ್ಚು.

**90 ಹಳ್ಳಿಗಳಲ್ಲಿ ಬೆಳೆಗಾರರು:** ತಾಲ್ಲೂಕಿನ ಬಿ.ಹೊಸಹಳ್ಳಿ, ಪೋಲೇನಹಳ್ಳಿ, ಲಿಂಗದಹಳ್ಳಿ, ಸಾಸಲಕುಂಟೆ, ಹರಿಹರಪುರ, ಟಿ.ಎನ್.ಬೆಟ್ಟ, ದವಡಬೆಟ್ಟ, ಮರಡಿಪಾಳ್ಯ, ವೀರ್ಲಗೊಂದಿ ಹಾಗೂ ಗುಮ್ಮಘಟ್ಟ ಗ್ರಾಮ ಸೇರಿದಂತೆ 90ಕ್ಕೂ ಹೆಚ್ಚು ಹಳ್ಳಿಗಳಲ್ಲಿರೇಷ್ಮೆ ಬೆಳೆಗಾರರಿದ್ದಾರೆ.

ಇತ್ತೀಚೆಗೆ ಹೆಚ್ಚಾಗಿ ವಿದ್ಯಾವಂತರು, ಉನ್ನತ ಶಿಕ್ಷಣ ಪಡೆದವರೇ ಲಾಭದಾಯಕ ರೇಷ್ಮೆ ಬೆಳೆ ಬೆಳೆಯುವಲ್ಲಿ ಆಸ್ತಕ್ತಿ ವಹಿಸಿದ್ದು, ತಾಲ್ಲೂಕಿನ 90 ಹಳ್ಳಿಗಳಿಂದ 1700ಕ್ಕೂ ಹೆಚ್ಚು ರೇಷ್ಮೆ ಬೆಳೆಗಾರರಿದ್ದಾರೆ.

**ಹವಾಗುಣವೇ ಗುಣಮಟ್ಟಕ್ಕೆ ವರದಾನ**

**ಪಾವಗಡ ತಾಲ್ಲೂಕು ಸೌರ ವಿದ್ಯುತ್ ಉತ್ಪಾದನೆಯಲ್ಲಿ ವಿಶ್ವದಲ್ಲೇ ಸೌರ ಕ್ರಾಂತಿ ಉಂಟು ಮಾಡಿರುವ ಹಾಗೆಯೇ, ಇಲ್ಲಿನ ಹವಾಗುಣ ಮತ್ತು ಪರಿಸರ ಗುಣಮಟ್ಟದ ರೇಷ್ಮೆ ಬೆಳೆಗೆ ವರವಾಗಿದೆ. ಇಲ್ಲಿನ ರೈತರು ಬೆಳೆದ ಬೆಳೆಗೆ ಮಾರುಕಟ್ಟೆಯಲ್ಲಿ ಸಿಕ್ಕಾಪಟ್ಟೆ ಬೇಡಿಕೆ ಸೃಷ್ಟಿಯಾಗುವುದರ ಜತೆಗೆ 1 ಕೆಜಿ ರೇಷ್ಮೆ 850ರಿಂದ 936 ರೂ.ವರೆಗೆ ಮಾರಾಟವಾಗುತ್ತಿದ್ದು, ವರ್ಷಕ್ಕೆ 10 ಬೆಳೆಗಳನ್ನು ಬೆಳೆದು ಪಾವಗಡ ರೈತರು ಯಶಸ್ವಿ ಕಂಡಿದ್ದಾರೆ.**

# ತಾಲ್ಲೂಕಿನ ಭೈರಮಂಗಲ ಡೇರಿಗೆ ಅಧ್ಯಕ್ಷ ಉಪಾಧ್ಯಕ್ಷ ಆಯ್ಕೆ

• **ಉದಯವಾಹಿನಿ, ಬಿಡದಿ (ರಾಮನಗರ)**

ತಾಲ್ಲೂಕಿನ ಭೈರಮಂಗಲ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬಿಜೆಪಿ ಬೆಂಬಲಿತ ಬಿ. ನಂಜಪ್ಪ ಹಾಗೂ ಉಪಾಧ್ಯಕ್ಷರಾಗಿ ಕೃಷ್ಣಪ್ಪ ಆಯ್ಕೆಯಾಗಿದ್ದಾರೆ.ಸಂಘದ ಕಚೇರಿ ಆವರಣದಲ್ಲಿ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಸಾಮಾನ್ಯ ಕ್ಷೇತ್ರದ ನಿರ್ದೇಶಕರಾದ ನಂಜಪ್ಪ ಅಧ್ಯಕ್ಷ ಸ್ಥಾನಕ್ಕೆ ಹಾಗೂ ಕೃಷ್ಣಪ್ಪ ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು. ಬೇರಾರು ನಾಮಪತ್ರ ಸಲ್ಲಿಸದಿದ್ದರಿಂದ ಇಬ್ಬರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸಹಕಾರ ಇಲಾಖೆಯ ಕೆ.ಟಿ. ಉಮೇಶ್ ಘೋಷಿಸಿದರು. ಸಂಘದ ಕಾರ್ಯದರ್ಶಿ ಮನೋಜ್ ಗೌಡ ಸಹಾಯಕ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಸಂಘದ ನಿರ್ದೇಶಕರ ಸ್ಥಾನಕ್ಕೆ ಡಿ. 18ರಂದು ನಡೆದಿದ್ದ ಚುನಾವಣೆಯಲ್ಲಿ 8 ಜೆಡಿಎಸ್-ಬಿಜೆಪಿ ಹಾಗೂ ಮೂವರು ಕಾಂಗ್ರೆಸ್ ಬೆಂಬಲಿತ ನಿರ್ದೇಶಕರು ಆಯ್ಕೆಯಾಗಿದ್ದರು. ನೂತನ ಅಧ್ಯಕ್ಷರನ್ನು ನಿರ್ದೇಶಕರಾದ ಪ್ರಕಾಶ್, ರಾಘವೇಂದ್ರ, ಹಾಲು ಪರೀಕ್ಷಕ ಚನ್ನಪ್ಪ, ಸಹಾಯಕ ರಾಮಕೃಷ್ಣಯ್ಯ, ಇತರರು ಅಭಿನಂದಿಸಿದರು.


ಉದಯವಾಹಿನಿ ಚಿತ್ರ

# ವೆನೆಜುವೆಲಾ ಅಧ್ಯಕ್ಷ ಅಪಹರಣ; ಸಿಪಿಎಂ ಪ್ರತಿಭಟನೆ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ವೆನೆಜುವೆಲಾ ಅಧ್ಯಕ್ಷರ ಅಪಹರಣ ಖಂಡಿಸಿ ನಗರದಲ್ಲಿ ಸಿಪಿಎಂ ಮತ್ತು ಕನ್ನಡ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟಿಸಿದರು. ವೆನೆಜುವೆಲಾ ದೇಶದ ಮೇಲೆ ಅಮೆರಿಕವು ಏಕಪಕ್ಷೀಯ ಮಿಲಿಟರಿ ಅಕ್ರಮಣ ನಡೆಸಿದೆ. ಅಧ್ಯಕ್ಷ ನಿಕೊಲಸ್ ಮಡೂರೊ, ಅವರ ಪತ್ನಿ ಸಿಲಿಯಾ ಅವರನ್ನು ಅಪಹರಣ ಮಾಡಿರುವುದು ಖಂಡನೀಯ ಎಂದು ಶಿಡ್ಲಘಟ್ಟ ವೃತ್ತದಲ್ಲಿ ಆಕ್ರೋಶ ವ್ಯಕ್ತಪಡಿಸಿದರು.



ಉದಯವಾಹಿನಿ ಚಿತ್ರ

ಸಿಪಿಎಂ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಎಂ.ಪಿ. ಮುನಿವೆಂಕಟಪ್ಪ ಮಾತನಾಡಿ ಹಾಗೂ ವೆನೆಜುವೆಲಾದ ತೈಲ ಸಂಪತ್ತನ್ನು ಕೊಳ್ಳೆ ಹೊಡೆಯುವ ದುರುದ್ದೇಶಕ್ಕೆ ಅಡ್ಡಿ ಆಗಿದ್ದ ಕಾರಣಕ್ಕಾಗಿ ಮಡೂರೊ ಅವರನ್ನು ಪದಚ್ಯುತಗೊಳಿಸಲು ಮಿಲಿಟರಿ ಕಾರ್ಯಾಚರಣೆ ನಡೆಸಿದೆ ಎಂದರು.

ಒಂದು ಸಾರ್ವಭೌಮ ಸ್ವಾತಂತ್ರ್ಯ ಹಾಗೂ ಚುನಾಯಿತ ಪ್ರಜಾಪ್ರಭುತ್ವ ರಾಷ್ಟ್ರದ ಅಧ್ಯಕ್ಷರನ್ನು ಮತ್ತೊಂದು ದೇಶ ಮಿಲಿಟರಿ ಅಕ್ರಮಣದ ಮೂಲಕ ಅಪಹರಿಸಿರುವುದು ಹಿಂದೆಂದೂ ಕಂಡರಿಯದ ದೌರ್ಜನ್ಯ. ವೆನೆಜುವೆಲಾ ದೇಶದ ಮೇಲೆ ನಡೆದಿರುವ ದಾಳಿ ಭಾರತ ಸೇರಿದಂತೆ ಇಡೀ ಪ್ರಪಂಚದ ಎಲ್ಲಾ ಸಾರ್ವಭೌಮ ದೇಶಗಳ ಮೇಲೆ ನಡೆದಿರುವ ಅಕ್ರಮಣವಾಗಿದೆ. ಕೂಡಲೇ ವೆನೆಜುವೆಲಾ ದೇಶದ ಅಧ್ಯಕ್ಷರನ್ನು ಬಿಡುಗಡೆ ಮಾಡುವಂತೆ ಭಾರತ ಸರ್ಕಾರ ಅಮೆರಿಕವನ್ನು ಒತ್ತಾಯಿಸಬೇಕು. ವಿಶ್ವಸಂಸ್ಥೆ ಭದ್ರತಾ ಮಂಡಳಿ ಕೂಡಲೇ ಅಮೆರಿಕದ ಪುಂಡಾಟಿಕೆ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಹಿಂದೆ ಇರಾಕ್, ಲಿಬಿಯಾ ಮುಂತಾದ ದೇಶಗಳ ಮೇಲೆ ಅಕ್ರಮಣ ನಡೆಸಿ ಅದರ ಅಧ್ಯಕ್ಷರನ್ನು ಅಮೆರಿಕ ಕಗ್ಗೊಲೆ ಮಾಡಿದೆ. ಇರಾಕ್ ಅಧ್ಯಕ್ಷ ಸದ್ದಾಮ್ ಹುಸೇನ್ ಅವರ ಮೇಲೆ ಸಮೂಹ ವಿನಾಶಕ ಅಸ್ತ್ರ ಹೊಂದಿರುವ ಆರೋಪ ಹೊರಿಸಲಾಗಿತ್ತು. ಇದೆಲ್ಲವೂ ತನ್ನ ಹಿಡಿತದ ಮಾಧ್ಯಮಗಳನ್ನು ಬಳಸಿ ಅಮೆರಿಕ ನಡೆಸಿರುವ ಅಪಪ್ರಚಾರಗಳೇ ಆಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.


# ಜನಹಿತ ಕಾಯಲು ಸ್ವಂತ ಹಣದಿಂದ ತಂಗುದಾಣ ನಿರ್ಮಾಣ

• **ಉದಯವಾಹಿನಿ, ರಾಮನಗರ,**

ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಜನರಿಗೆ ಅನುಕೂಲ ವಾಗುವಂತೆ ಹೈಮಾಸ್ ದ್ವೀಪ ಅಳವಡಿಕೆ ಮತು ಪ್ರಯಾಣಿಕರ ತಂಗುದಾಣಗಳನ್ನು ಸ್ವಂತ ಖರ್ಚಿನಲ್ಲಿ ನಿರ್ಮಿಸಲಾಗು ವುದು ಎಂದು ಸಮಾಜ ಸೇವಕ ಹಾಗೂ ಬಿಜೆಪಿ ಮುಖಂಡ ಪ್ರಸಾದ್‌ಗೌಡ ಹೇಳಿದರು.

ಬಿಜೆಪಿ ಮುಖಂಡ ಪ್ರಸಾದ್ ಗೌಡ ಹೇಳಿಕೆ

ತಾಲ್ಲೂಕಿನ ಬಿಡದಿ ಹೋಬಳಿ ಶೇಷಗಿರಿಹಳ್ಳಿ (ಶನಿಮಹಾತ್ಮ ದೇವಾಲಯ) ಗ್ರಾಮದ ಬಳಿ ಪ್ರಯಾಣಿಕರ ತಂಗುದಾಣ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಕ್ಷೇತ್ರದ ರಸ್ತೆಗಳ ಬದಿಗಳಲ್ಲಿ ಪ್ರಯಾಣಿಕರು, ಶಾಲಾ-ಕಾಲೇಜು ಮಕ್ಕಳು ಬಿಸಿಲು ಮಳೆಯಲ್ಲಿ ನಿಲ್ಲುವ ಪರಿಸ್ಥಿತಿಯನ್ನು ಕಣ್ಣಾರೆ ಕಂಡಿದ್ದೇನೆ. ಇದನ್ನು ಮನಗಂಡು ನನ್ನ ಸ್ವಂತ ಹಣದಲ್ಲಿ ಹೈಮಾಸ್ ದ್ವೀಪ ಮತ್ತು ಪ್ರಯಾಣಿಕರ ತಂಗುದಾಣಗಳ ನಿರ್ಮಾಣಕ್ಕೆ ಮುಂದಾಗಿದ್ದೇನೆ ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

ಚುನಾವಣೆಯಲ್ಲಿ ಗೆಲುವು-ಸೋಲು ಸಹಜ. ಆದರೆ ನಾನು ಆತ್ಮಸ್ಥೈರ್ಯ ಕಳೆದುಕೊಂಡಿಲ್ಲ.

ಈ ಹಿಂದೆಯೂ ಯುವಕರಲ್ಲಿ ಕ್ರೀಡಾ ಸ್ಫೂರ್ತಿ ಹೆಚ್ಚಿಸಲು ಕ್ರಿಕೆಟ್ ಪಂದ್ಯಾವಳಿ, ಆರೋಗ್ಯ ಶಿಬಿರಗಳ ಆಯೋಜನೆ ಮಾಡಿ ಬಡವರ, ಮಧ್ಯಮ ವರ್ಗದವರ, ನೊಂದವರ ಜೊತೆಯಿದ್ದು, ಈಗಾಗಲೇ ಕೊಟ್ಟಗಾರಹಳ್ಳಿ ಬಳಿ ಪ್ರಯಾಣಿಕರ ತಂಗುದಾಣ ನಿರ್ಮಿಸುತ್ತಿದ್ದು ಉದ್ಘಾಟನೆ ಹಂತಕ್ಕೆ ಬಂದಿದೆ. ಹೀಗೆ ನನ್ನ ಕೈಲಾದ ಸೇವೆ ಮಾಡುತ್ತಿದ್ದೇನೆ. ಇದಕ್ಕೆ ಸ್ಥಳೀಯ ಮುಖಂಡರ ಸಹಕಾರ ಬಹಳ ಮುಖ್ಯ ಎಂದರು.

ಮಂಚನಾಯ್ಕನಹಳ್ಳಿ ಗ್ರಾ.ಪಂ ಮಾಜಿ ಅಧ್ಯಕ್ಷೆ ನಂದಪ್ರಭಾ ಆನಂದ್ ಮಾತನಾಡಿ ಶೇಷಗಿರಿಹಳ್ಳಿ ಬಸ್ಸು ನಿಲ್ದಾಣದಲ್ಲಿ ಅತ್ಯಗತ್ಯವಾಗಿ ಬೇಕಿದ್ದ ಪ್ರಯಾಣಿಕರ ತಂಗುದಾಣ ನಿರ್ಮಾಣಕ್ಕೆ ಪ್ರಸಾದ್ ಗೌಡ ಅವರು ಮುಂದಾಗಿರುವುದು ಸಂತಸದ ವಿಷಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ ಅವರು ಈ ಉತ್ತಮ ಕೆಲಸದಿಂದ ಬಹಳಷ್ಟು ಜನರಿಗೆ ನೆರವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಸತೀಶ್ ಕುಮಾರ್, ಸದಸ್ಯರಾದ ಶಂಕುಕುಮಾರ್, ನಾಗೇಶ್ ಮುಖಂಡ ಮಂಜು ಮತ್ತಿತರರು ಇದ್ದರು.

# ನಾಯಿಗಳ ಹಾವಳಿ ತಡೆಗೆ ಒತ್ತಾಯ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ತಿಪಟೂರು**

ನಗರದ ತಾಲ್ಲೂಕು ಆಡಳಿತ ಸೌಧದ ಉಪವಿಭಾಗಧಿಕಾರಿ ಕಚೇರಿಯಲ್ಲಿ ಉಪವಿಭಾಗಧಿಕಾರಿ ಬಿ.ಕೆ.ಸಪ್ತಶ್ರೀ ಅಧ್ಯಕ್ಷತೆಯಲ್ಲಿ ತಿಪಟೂರು, ಚಿಕ್ಕನಾಯಕನಹಳ್ಳಿ, ತುರವೇಕೆರೆ ತಾಲ್ಲೂಕಿನ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ನಡೆಯಿತು. ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ನಾಯಿಗಳ ಹಾವಳಿ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು.

ಎಲ್ಲೆಂದರಲ್ಲಿ ಕಸ ಎಸೆಯುತ್ತಿರುವುದರಿಂದ ನಾಯಿಗಳ ಸಂತತಿ ಹೆಚ್ಚಾಗುತ್ತಿದೆ. ನಗರಸಭೆ, ಪಟ್ಟಣ ಪಂಚಾಯಿತಿ ಹಾಗೂ ಪುರಸಭೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು. ಶುದ್ಧ ಕುಡಿಯುವ ನೀರು ಒದಗಿಸುವುದು ಸರ್ಕಾರದ ಕರ್ತವ್ಯ. ನೀರಿನ ಗುಣಮಟ್ಟ ಹಾಗೂ ಶುದ್ಧತೆ ಖಚಿತಪಡಿಸಿಕೊಳ್ಳುವ ಜವಾಬ್ದಾರಿ ತಾಲ್ಲೂಕು ಆರೋಗ್ಯ ಅಧಿಕಾರಿಗಳದ್ದು. ಪ್ರತಿ ತಿಂಗಳು 6ರಂದು ತಾಲ್ಲೂಕು ಆಡಳಿತಕ್ಕೆ ವರದಿ ಸಲ್ಲಿಸಬೇಕು ಎಂದು ಸೂಚಿಸಿದರು. ಮುಂದಿನ ದಿನಗಳಲ್ಲಿ ಜಾತ್ರೆ ಉತ್ಸವಗಳು ಆರಂಭವಾಗಲಿದ್ದು ಸಾರ್ವಜನಿಕರ ಸುರಕ್ಷತೆ ಮತ್ತು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವಂತೆ ನಿರ್ದೇಶಿಸಲಾಯಿತು. ತಾಲ್ಲೂಕಿನ ಮುಜರಾಯಿ ಹಾಗೂ ಇತರೆ ದೇವಸ್ಥಾನಗಳಿಂದ ಅಗತ್ಯ ಮಾಹಿತಿ ಸಂಗ್ರಹಿಸಿ ಮಾರ್ಗಸೂಚಿ ಅಳವಡಿಸಬೇಕು. ಗ್ರಾಮಗಳ ಮುಖಂಡರು ಹಾಗೂ ದೇವಸ್ಥಾನ ಸಮಿತಿಗಳೊಂದಿಗೆ ಸಮನ್ವಯ ಸಾಧಿಸಿ ಸಾರ್ವಜನಿಕರಿಗೆ ತಿಳುವಳಿಕೆ ಹಾಗೂ ಒಪ್ಪಿಗೆ ಪತ್ರಗಳನ್ನು ಏಕಗವಾಕ್ಷಿ ಯೋಜನೆಯಲ್ಲಿ ಮಾಹಿತಿ ಸಂಗ್ರಹಿಸಬೇಕು ಎಂದರು. ರಸ್ತೆ ಬದಿಯಲ್ಲಿ ಕಸ ಹಾಕುವವರಿಗೆ ಮೊದಲು ತಿಳುವಳಿಕೆ ನೀಡಿ, ಮುಂದುವರಿದರೆ ದಂಡ ವಿಧಿಸಿ ನಂತರವೂ ನಿಯಮ ಉಲ್ಲಂಘನೆ ಮಾಡಿದವರ ವಿರುದ್ಧ ಪ್ರಕರಣ ದಾಖಲಿಸಿ ಹೆಚ್ಚುವರಿ ದಂಡ ವಿಧಿಸಬೇಕು ಎಂದು ಸಭೆಯಲ್ಲಿ ತಿಳಿಸಲಾಯಿತು. ಕಾರ್ಯನಿರ್ವಹಣಾಧಿಕಾರಿ ಎಚ್. ಎಂ. ಸುದರ್ಶನ್, ಕ್ಷೇತ್ರ ಶಿಕ್ಷಣಾಧಿಕಾರಿ, ತಹಶೀಲ್ದಾರ್, ತಾಲ್ಲೂಕು ಆರೋಗ್ಯಾಧಿಕಾರಿ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಕಿತ್ತು ಹೋದ ರಸ್ತೆಗೆ ಜಲ್ಲಿ ಸುರಿದು 6 ತಿಂಗಳು!

• **ಉದಯವಾಹಿನಿ, ಬಂಗಾರಪೇಟೆ**

ರಸ್ತೆ ಅಭಿವೃದ್ಧಿ ಹೆಸರಿನಲ್ಲಿ ಸಾರ್ವಜನಿಕರ ಪ್ರಾಣದ ಜೊತೆ ಆಟ ಆಡಲಾಗುತ್ತಿದೆ.

ಹಳೆ ಡಾಂಬರು ಕಿತ್ತು, ಜಲ್ಲಿ ಸುರಿದು ತಿಂಗಳೇ ಕಳೆದಿದ್ದರೂ ರಸೆ ಅಭಿವೃದ್ಧಿ ಕಾಮಗಾರಿ ಮುಗಿಯದ ಕಾರಣ ವಾಹನ ಸವಾರರ ಪಾಲಿಗೆ ಅಕ್ಷರಶಃ ಮೃತ್ಯುಕೂಪವಾಗಿದೆ.

ಅಧಿಕಾರಿಗಳು ತಕ್ಷಣವೇ ರಸ್ತೆ ಡಾಂಬರೀಕರಣ ಪೂರ್ಣಗೊಳಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಕೆಜಿಎಫ್‌ನ ಮಾರಿಕುಪ್ಪಂ, ಬೋಡಗುರ್ಕಿ ಲಕ್ಕೇನಹಳ್ಳಿ ಮಾರ್ಗದ ರಸ್ತೆಗೆ ಡಾಂಬರು ಹಾಕಿ ಹಲವು ದಶಕಳೇ ಕಳೆದಿವೆ. ಡಾಂಬರು ಕಿತ್ತು ಹೊಂಡಗಳು ನಿರ್ಮಾಣವಾಗಿ ವಾಹನ ಸಂಚಾರಕ್ಕೆ ಪ್ರಯಾಸಪಡಬೇಕಾಗಿತ್ತು. ಮಳೆ ಬಂದರೆ ರಸ್ತೆ ಯಾವುದು, ಹಳ್ಳ ಯಾವುದು ಎಂಬುದು ಗೊತ್ತಾಗದೆ ವಾಹನ ಸವಾರರು



ಪ್ರಾಣ ಭಯದಲ್ಲಿ ಸಂಚರಿಸುವಂತಾಗಿತ್ತು. ಈ ಮಾರ್ಗದ ರಸ್ತೆಯೂ ಅರಣ್ಯ ಪ್ರದೇಶದಲ್ಲಿ ಹಾದು ಹೋಗುತ್ತದೆ. ಇದರಿಂದಾಗಿ ಕಾಡು ಪ್ರಾಣಿಗಳ ಭಯದಲ್ಲಿ ಸವಾರರು ಸಂಚರಿಸಲು ಹಿಂದೇಟು ಹಾಕುವಂತಾಗಿತ್ತು. ರಸ್ತೆ ಅಭಿವೃದ್ಧಿಗೆ ಸಾರ್ವಜನಿಕರ ಒತ್ತಡವೂ ಇದ್ದ ಕಾರಣ ಬಂಗಾರಪೇಟೆ ಶಾಸಕ ಎಸ್.ಎನ್ ನಾರಾಯಣಸ್ವಾಮಿ ಮತ್ತು ಕೆಜಿಎಫ್ ಶಾಸಕಿ ರೂಪಕಲಾ ಶಶಿಧರ್ ಅನುದಾನ ತಂದು ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಿದ್ದಾರೆ. ಆದರೆ, ಗುತ್ತಿಗೆದಾರರು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

# ಪ್ರಾದೇಶಿಕ ಕೇಂದ್ರ ತೆರೆಯಲು ಒತ್ತಾಯ: ಕೆ. ಶಿವಕುಮಾರ್

## ಅರಿಸಿನ ಬೆಳೆಗಾರರು, ಖರೀದಿದಾರರು ಮಾರಾಟಗಾರರ ಸಮಾವೇಶ

• **ಉದಯವಾಹಿನಿ, ಮೈಸೂರು**

ರಾಜ್ಯದಲ್ಲಿ ಅತಿ ಹೆಚ್ಚು ಅರಿಸಿನ ಬೆಳೆಯುವ ಜಿಲ್ಲೆಯಾದ ಚಾಮರಾಜನಗರದಲ್ಲಿ ರಾಷ್ಟ್ರೀಯ ಅರಿಸಿನ ಮಂಡಳಿಯು ಪ್ರಾದೇಶಿಕ ಕೇಂದ್ರ ಹಾಗೂ ಸಂಸ್ಕರಣಾ ಘಟಕವನ್ನು ತೆರೆಯಬೇಕು ಎಂದು ವಿಧಾನಪರಿಷತ್ ಸದಸ್ಯ ಕೆ. ಶಿವಕುಮಾರ್ ಒತ್ತಾಯಿಸಿದರು. ನಗರದಲ್ಲಿ ತೋಟಗಾರಿಕೆ ಇಲಾಖೆ, ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ, ರಾಷ್ಟ್ರೀಯ ಅರಿಸಿನ ಮಂಡಳಿ ಹಾಗೂ ಭಾರತೀಯ ಸಾಂಬಾರು ಮಂಡಳಿ ಸಹಯೋಗದಲ್ಲಿ ಅರಿಸಿನ ಪದಾರ್ಥಗಳ ಬೆಳೆಗಾರರು, ಖರೀದಿದಾರರು, ಮಾರಾಟಗಾರರ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಚಾಮರಾಜಗರ ಜಿಲ್ಲೆ ಒಂದರಲ್ಲಿಯೇ 22 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಗುಣಮಟ್ಟದ ಅರಿಸಿನ ಬೆಳೆಯಲಾಗುತ್ತಿದೆ.

ಜೊತೆಗೆ ಮೈಸೂರು, ಕೊಡಗು ಜಿಲ್ಲೆಗಳಲ್ಲಿಯೂ ಗಣನೀಯ ಪ್ರಮಾಣದಲ್ಲಿ ಉತ್ಪಾದನೆ ನಡೆದಿದೆ. ಆದಾಗ್ಯೂ ಬೆಳೆಗಾರರು ಸಾಕಷ್ಟು ಸವಾಲು ಎದುರಿಸುತ್ತಿದ್ದಾರೆ. ಕೇಂದ್ರ ಸರ್ಕಾರ ಅರಿಸಿನ ಮಂಡಳಿ ಸ್ಥಾಪಿಸಿರುವುದು ಸ್ವಾಗತಾರ್ಹ. ಬೆಳೆಗಾರರು ಹಾಗೂ ಮಾರುಕಟ್ಟೆಯು ಈರೋಡ್ ಮೇಲಿನ ಅವಲಂಬನೆ ತಪ್ಪಬೇಕು. ಮಾರುಕಟ್ಟೆಯಲ್ಲಿನ ಅವ್ಯವಸ್ಥೆಗೆ ಲಗಾಮು ಹಾಕಬೇಕು ಎಂದು ಆಗ್ರಹಿಸಿದರು. ಉತ್ಪಾದನೆಗೆ ಪೂರಕವಾಗಿ ರೈತರಿಗೆ ಬಾಯರ್.


ಉದಯವಾಹಿನಿ ಚಿತ್ರ

ಪಾಲಿಶಿಂಗ್ ಯಂತ್ರ, ಟಾರ್ಪಲ್ ಸಹಿತ ವಿವಿಧ ಸೌಲಭ್ಯ ಒದಗಿಸಬೇಕು. ಪಾರದರ್ಶಕ ಹಾಗೂ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಬೇಕು. ಶೀತಲೀಕರಣ ಘಟಕ ಸೌಲಭ್ಯ ಒದಗಿಸಬೇಕು' ಎಂದು ಕೋರಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ವಾಣಿಜ್ಯ ಬೆಳೆ ಬೆಳೆಯಲು ಈಚಿನ ದಿನಗಳಲ್ಲಿ ಪೈಪೋಟಿ ಹೆಚ್ಚಾಗಿದೆ. ರೈತರು ಲಭ್ಯವಿರುವ ತಂತ್ರಜ್ಞಾನ ಹಾಗೂ ಸರ್ಕಾರದ ಆರ್ಥಿಕ ಸವಲತ್ತುಗಳನ್ನು ಉಪಯೋಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ರಾಷ್ಟ್ರೀಯ ಅರಿಸಿನ ಮಂಡಳಿ ಅಧ್ಯಕ್ಷ ಪಲ್ಲೆ ಗಂಗಾರೆಡ್ಡಿ ಅಧ್ಯಕ್ಷತೆ ವಹಿಸಿದ್ದರು. ಮಂಡಳಿಯ ಸದಸ್ಯರಾದ ಚೇತನ್ ಕುಮಾರ್ ಯಡವಣ್ಣವರ್, ಡಿ. ವಿಷ್ಣುವರ್ಧನ್, ಹುಡಿಗಾಲ ಎಫ್ ಒಪಿ ಪ್ರಧಾನ ವ್ಯವಸ್ಥಾಪಕ ರವಿಶಂಕರ್, ಗುರುಪ್ರಸಾದ್, ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿಯ ಪ್ರಧಾನ ವ್ಯವಸ್ಥಾಪಕರಾದ ರಾಮಚಂದ್ರ ಮಡಿವಾಳ, ಲಕ್ಷ್ಮಿಕಾಂತ ಬೊಮ್ಮಣ್ಣವರ, ಕೇಂದ್ರ ಸಾಂಬಾರು ಮಂಡಳಿ ಉಪನಿರ್ದೇಶಕ ಎಂ.ವೈ. ಹೊನ್ನೂರ. ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ನಾಗರಾಜು, ಉಪನಿರ್ದೇಶಕ ಶಿವಪ್ರಸಾದ್, ಸಹಾಯಕ ನಿರ್ದೇಶಕರಾದ ಚೇತನ್, ಭಾರತಿ ಇದ್ದರು. ವಿವಿಧ ಜಿಲ್ಲೆಗಳ ಅರಿಸಿನ ಬೆಳೆಗಾರರು, ಖರೀದಿದಾರರು ಹಾಗೂ ಮಾರಾಟಗಾರರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

> **ಚಾಮರಾಜನಗರದಲ್ಲಿ ಅರಿಸಿನ ಮಂಡಳಿ ಪ್ರಾದೇಶಿಕ ಕೇಂದ್ರ ಸ್ಥಾಪನೆಗೆ ಅಗತ್ಯವಾದ ಜಾಗ ಒದಗಿಸಲು ರಾಜ್ಯ ಸರ್ಕಾರ ಸಿದ್ಧವಿದೆ. ಇಲ್ಲಿ ಕೇಂದ್ರದ ಜೊತೆಗೆ ರೂ.50 ಕೋಟಿ ಪ್ಯಾಕೇಜ್ ಘೋಷಿಸಬೇಕು**
>
> **ಕೆ. ಶಿವಕುಮಾರ್ ವಿಧಾನಪರಿಷತ್ ಸದಸ್ಯ**

**ಉತ್ಪಾದನೆ ಬಳಕೆಯಲ್ಲೂ ಭಾರತ ನಂ 1**

**ಪ್ರಾಸ್ತಾವಿಕವಾಗಿ ಮಾತನಾಡಿದ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಬಿ.ಆರ್. ಗಿರೀಶ್ ಭಾರತವು ಸಾಂಬಾರು ಬೆಳೆಗಳ ವಿಸ್ತೀರ್ಣ ಉತ್ಪಾದನೆ ರಫ್ತು ಹಾಗೂ ಬಳಕೆಯಲ್ಲೂ ಅಗ್ರಸ್ಥಾನದಲ್ಲಿದೆ. ಜಾಗತಿಕವಾಗಿ ಒಟ್ಟು ಉತ್ಪಾದನೆಯ ಶೇ 75-80 ಸಾಂಬಾರು ಪದಾರ್ಥ ಇಲ್ಲಿಂದಲೇ ತಯಾರಾಗುತ್ತದೆ. ಇಲ್ಲಿನ 47 ಲಕ್ಷ ಹೆಕ್ಟೇರ್‌ನಷ್ಟು ಪ್ರದೇಶದಲ್ಲಿ ವಿವಿಧ ಬೆಳೆ ಬೆಳೆಯುತ್ತಿದ್ದು 1.7 ಕೋಟಿ ಟನ್ ಉತ್ಪಾದನೆ ಇದೆ. ವಾರ್ಷಿಕ ರೂ.40 ಸಾವಿರ ಕೋಟಿಯಷ್ಟು ಮೌಲ್ಯದ ಉತ್ಪನ್ನ ರಫ್ತಾಗುತ್ತಿದೆ' ಎಂದು ವಿವರ ನೀಡಿದರು. ಕರ್ನಾಟಕದಲ್ಲಿ 3.96 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ವಾರ್ಷಿಕ 8.63 ಲಕ್ಷ ಟನ್‌ನಷ್ಟು ಉತ್ಪಾದನೆ ಆಗುತ್ತಿದೆ. ಇದರಲ್ಲಿ ಸುಮಾರು 1.3 ಲಕ್ಷ ಟನ್‌ನಷ್ಟು ರಫ್ತಾಗುತ್ತಿದೆ. ನಮ್ಮಲ್ಲಿ ರೋಗಬಾಧೆ ಜೊತೆಗೆ ಉತ್ಪಾದಕತೆಯ ಪ್ರಮಾಣ ಕಡಿಮೆ ಇದ್ದು ಸುಧಾರಣ ಕ್ರಮಗಳ ಅಗತ್ಯವಿದೆ ಎಂದರು.**

## ಮಿನಿ ನ್ಯೂಸ್

### ನೇನೇಕಟ್ಟೆ ಗ್ರಾಮದಲ್ಲಿ ಚಿರತೆ ಸಂಚಾರ : ಆತಂಕದಲ್ಲಿ ಸ್ಥಳೀಯರು


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಗುಂಡ್ಲುಪೇಟೆ**

ನೇನೇಕಟ್ಟೆ ಗ್ರಾಮದಲ್ಲಿ ಚಿರತೆಯೊಂದು ಪ್ರತ್ಯಕ್ಷವಾಗಿದ್ದು ಸ್ಥಳೀಯರನ್ನ ಬೆಚ್ಚಿಬೀಳಿಸಿದೆ, ತಡರಾತ್ರಿ ಗ್ರಾಮದ ಒಳಗೆ ಪ್ರವೇಶಿಸಿರುವ ಚಿರತೆ ಬಿಂದಾಸಾಗಿ ಓಡಾಟ ನಡೆಸಿದೆ, ಸದ್ಯ ಚಿರತೆ ಚಲನವಲನ ಸಿಸಿಟಿವಿಯಲ್ಲಿ ಸೆರೆಯಾಗಿದ್ದು ಅರಣ್ಯ ಇಲಾಖೆಗೆ ಮಾಹಿತಿ ನೀಡಲಾಗಿದೆ. ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಗುಂಡ್ಲುಪೇಟೆ ಬಫರ್ ಜೋನ್ ವಲಯಕ್ಕೆ ಸೇರಿದ ನೇನೇಕಟ್ಟೆಯಲ್ಲಿ ಕಾಣಿಸಿಕೊಂಡಿರುವ ಚಿರತೆಯಿಂದ ಗ್ರಾಮಸ್ಥರಲ್ಲಿ ಭೀತಿ ಹೆಚ್ಚಾಗಿದೆ ಹಾಗೂ ಚಿರತೆಯ ಚಲನವಲನ ಸಿಸಿಟಿವಿಯಲ್ಲಿ ಸೆರೆಯಾಗಿದ್ದು ಮುಂಜಾನೆ ದೃಶ್ಯ ನೋಡಿದವರು ಹೌಹಾರಿದ್ದಾರೆ ಈ ಘಟನೆಯಿಂದ ರಾತ್ರಿ ವೇಳೆ ಹೊರಬರುವುದಾದರು ಹೇಗೆ ಎಂದು ಕಳವಳ ವ್ಯಕ್ತಪಡಿಸಿದ್ದು ಚಿರತೆ ಸೆರೆಗೆ ಅರಣ್ಯ ಇಲಾಖೆ ಮುಂದಾಗುವಂತೆ ಆಗ್ರಹಿಸಿದ್ದಾರೆ.

### ನಾನು ಟಿಕೆಟ್ ಆಕಾಂಕ್ಷಿ, ಅಭ್ಯರ್ಥಿಯನ್ನು ಪಕ್ಷ ನಿರ್ಧರಿಸುತ್ತದೆ: ಪ್ರತಾಪ ಸಿಂಹ

• **ಉದಯವಾಹಿನಿ, ಮೈಸೂರು**

ನಾನೂ ಚಾಮರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಎಂದು ಹೇಳಿದ್ದೇನೆ. ಸಾಮಾನ್ಯ ಕಾರ್ಯಕರ್ತ ಕೂಡ ಆಕಾಂಕ್ಷಿ ಆಗಬಹುದು. ಅಭ್ಯರ್ಥಿ ಯಾರಾಗಬೇಕು ಎಂಬುದನ್ನು ಪಕ್ಷ ನಿರ್ಧರಿಸುತ್ತದೆ ಎಂದು ಮಾಜಿ ಸಂಸದ ಪ್ರತಾಪ ಸಿಂಹ ಹೇಳಿದರು.ಇಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಆಕಾಂಕ್ಷಿ ಹಾಗೂ ಅಭ್ಯರ್ಥಿ ಇವರೆಡರ ನಡುವಿನ ವ್ಯತ್ಯಾಸವನ್ನು ಅರ್ಥ ಮಾಡಿಕೊಳ್ಳಬೇಕು ಎಂದರು. ನಾನು ರಾಜ್ಯ ರಾಜಕಾರಣಕ್ಕೆ ಬಂದು ಬಹಳ ದಿನಗಳೇ ಆಗಿ ಹೋಗಿವೆ. ದೇಶದಲ್ಲಿ ಪಕ್ಷದಲ್ಲಿನ ಬಹಳಷ್ಟು ಮಂದಿ ಟಿಕೆಟ್ ವಂಚಿತರಾಗಿದ್ದಾರೆ. ನಮ್ಮಲ್ಲಿ 2019ರಲ್ಲಿ ಬಿಜೆಪಿಯಿಂದ ಗೆದಿದ್ದ 303 ಸಂಸದರಲ್ಲಿ ಶೇ 43ರಷ್ಟು ಆಕಾಂಕ್ಷಿಗಳಿಗೆ ಅಂದರೆ 132 ಮಂದಿಗೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ಕೊಡಲಿಲ್ಲ. ಅವರಲ್ಲಿ ಹಲವರಿಗೆ ಆಯಾ ರಾಜ್ಯದ ವಿಧಾನಸಭೆಯಲ್ಲಿ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಆದ್ದರಿಂದಲೇ ನಾನು ಜನರೊಂದಿಗೆ ಇರಬೇಕೆಂದು ತೀರ್ಮಾನ ಮಾಡಿದ್ದೇನೆ. ಟಿಕೆಟ್ ಆಕಾಂಕ್ಷಿಯಾಗಿದ್ದೇನೆ' ಎಂದರು.

### ರೂ.40 ಕೋಟಿ ಮೊತ್ತದ ಯಂತ್ರೋಪಕರಣ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ತಾಲ್ಲೂಕಿನ ಆರೂರು ಬಳಿಯ ನಂದಿ ವೈದ್ಯಕೀಯ ಕಾಲೇಜು ಸಂಶೋಧನಾ ಸಂಸ್ಥೆಗೆ ರೂ. 40 ಕೋಟಿ ವೆಚ್ಚದಲ್ಲಿ ಯಂತ್ರೋಪಕರಣ ಮತ್ತು ಪೀಠೋಪಕರಣ ಖರೀದಿಗೆ ಸಚಿವ ಸಂಪುಟ ಹಸಿರು ನಿಶಾನೆ ತೋರಿದೆ. ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿದೆ.

ನಂದಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನೂತನ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಗೆ ಅವಶ್ಯವಿರುವ ಯಂತ್ರೋಪಕರಣ ಮತ್ತು ಪೀಠೋಪಕರಣಗಳನ್ನು ರೂ. 40 ಕೋಟಿ ಅನುದಾನದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ವೈದ್ಯಕೀಯ ಕಾಲೇಜಿಗೆ ಅಗತ್ಯ ಪೀಠೋಪಕರಣ ಮತ್ತು ಯಂತ್ರೋಪಕರಗಳು ಇಲ್ಲದಿರುವುದು ಚಿಕ್ಕಬಳ್ಳಾಪುರ ಜಿಲ್ಲೆಯ ರಾಜಕೀಯದಲ್ಲಿ ಪರಸ್ಪರ ಟೀಕೆಗಳಿಗೂ ಕಾರಣವಾಗಿತ್ತು. ಈ ಅನುಮೋದನೆಯೊಂದಿಗೆ ಅರೂರು ಬಳಿಯ ಕಾಲೇಜಿನಲ್ಲಿಯೇ ಆಸ್ಪತ್ರೆ ಕಾರ್ಯಾರಂಭ ಮತ್ತಿತರ ಚಟುವಟಿಕೆಗಳಿಗೆ ಅನುಕೂಲವಾಗಲಿದೆ. ಚಿಕ್ಕಬಳ್ಳಾಪುರದ ನಂದಿ ವೈದ್ಯಕೀಯ ಶಿಕ್ಷಣ ಮಹಾವಿದ್ಯಾಲಯದ ಕಾಮಗಾರಿಗಳಿಗೆ ಬಿಜೆಪಿ ಮತ್ತು ಕಾಂಗ್ರೆಸ್ ಸರ್ಕಾರ ಇಲ್ಲಿಯವರೆಗೆ ಒಟ್ಟು ರೂ. 810 ಕೋಟಿ ಬಿಡುಗಡೆ ಮಾಡಿವೆ.

### ವಿಬಿ-ಜಿ ರಾಮ್ ಜಿ ಯೋಜನೆ ಬಗ್ಗೆ ಕಾಂಗ್ರೆಸ್ ಅಪಪ್ರಚಾರ

• **ಉದಯವಾಹಿನಿ, ತುಮಕೂರು**

ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ (ವಿಬಿ-ಜಿ ರಾಮ್ ಜಿ) ಯೋಜನೆ ಬಗ್ಗೆ ರಾಜ್ಯದ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಪಪ್ರಚಾರ ಮಾಡುತ್ತಿದೆ ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಇಲ್ಲಿ ಆರೋಪಿಸಿದರು.

ಮಹಾತ್ಮ ಗಾಂಧೀಜಿ ಸ್ವರಾಜ್ಯದ ಕನಸು ಕಂಡಿದ್ದರು. ಪ್ರಸ್ತುತ ಸಂದರ್ಭದಲ್ಲಿ ಗಾಂಧಿ ಹೆಸರಿನ ಬದಲಿಗೆ ರಾಮ್ ಜಿ ಹೆಸರು ಸೇರಿಸಲಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಗಾಂಧೀಜಿ ಹೆಸರು ಬದಲಾವಣೆಯನ್ನು ಸಮರ್ಥಿಸಿಕೊಂಡರು. ದೇಶದಲ್ಲಿ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಆರಂಭವಾಗಿ ಎರಡು ದಶಕ ಕಳೆದಿದೆ. ಕಾಲಕ್ಕೆ ತಕ್ಕಂತೆ ಯೋಜನೆಯಲ್ಲಿ ಬದಲಾವಣೆ ಮಾಡುವುದು ಅಗತ್ಯವಿದ್ದು, ಆ ಕಾರಣಕ್ಕೆ ಬದಲಾವಣೆ ಮಾಡಲಾಗಿದೆ.



ಈವರೆಗೆ ಕೇಂದ್ರ ಸರ್ಕಾರವೇ ಪೂರ್ಣ ಪ್ರಮಾಣದಲ್ಲಿ ಅನುದಾನ ನೀಡುತ್ತಿತ್ತು. ಇನ್ನು ಮುಂದೆ ಕೇಂದ್ರ ಶೇ 60ರಷ್ಟು ಹಣ ನೀಡಿದರೆ, ರಾಜ್ಯ ಸರ್ಕಾರ ಶೇ 40ರಷ್ಟು ಹಣ ಒದಗಿಸಿ ಯೋಜನೆ ಜಾರಿ ಮಾಡಬೇಕಿದೆ. ರಾಜ್ಯ ಸರ್ಕಾರದ ಹೊಣೆಗಾರಿಕೆ ಹೆಚ್ಚಿಸುವುದು. ಮತ್ತಷ್ಟು ಪಾರದರ್ಶಕ ಹಾಗೂ ಶಾಶ್ವತವಾಗಿ ಗುಣಮಟ್ಟದ ಆಸ್ತಿ ನಿರ್ಮಾಣದ ಗುರಿ ಹೊಂದಿದೆ ಎಂದು ಹೇಳಿದರು. ಉದ್ಯೋಗ ಖಾತ್ರಿಯನ್ನು 100ರಿಂದ 125 ದಿನಗಳಿಗೆ ಹೆಚ್ಚಿಸಲಾಗಿದೆ. ಯೋಜನೆಯಲ್ಲಿ ಪಾರದರ್ಶಕತೆ ತರುವ ಸಲುವಾಗಿ ಡಿಜಿಟಲ್ ವ್ಯವಸ್ಥೆಗೆ ರೂಪಾಂತರಿಸಲಾಗುತ್ತಿದೆ. ಇದರಿಂದಾಗಿ ಯೋಜನೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ಕಾಣಬಹುದು. ಆದರೆ ರಾಜ್ಯ ಸರ್ಕಾರ ಅನಗತ್ಯವಾಗಿ ಆರೋಪ ಮಾಡುತ್ತಿದೆ ಎಂದು ತಿಳಿಸಿದರು. ಶಾಸಕರಾದ ಬಿ.ಸುರೇಶ್ ಗೌಡ, ಜಿ.ಬಿ.ಜ್ಯೋತಿಗಣೇಶ್, ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಎಸ್.ರವಿಶಂಕರ್. ಮುಖಂಡರಾದ ವೈ.ಎಚ್. ಹುಚ್ಚಯ್ಯ, ಗಂಗರಾಜು, ಸಂದೀಪ್ ಗೌಡ, ರವೀಶಯ್ಯ, ಧನುಷ್, ಟಿ.ಆರ್.ಸದಾಶಿವಯ್ಯ. ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅಂತರಾಳದಿಂದ... EDITORIAL


# ಬೀದಿ ದನಗಳ ಬಗ್ಗೆಯೂ ನ್ಯಾಯಾಲಯ ಮಾತನಾಡಲಿ

ಬೀದಿ ನಾಯಿಗಳ ವಿರುದ್ಧ ಸುಪ್ರೀಂಕೋರ್ಟ್ ಮತ್ತೊಮ್ಮೆ ಎಚ್ಚರಿಕೆ ನೀಡಿದೆ. ರಸ್ತೆಗಳನ್ನು ಬೀದಿಗಳನ್ನು ನಾಯಿಗಳಿಂದ ಮುಕ್ತವಾಗಿರಿಸಬೇಕು. ಬೀದಿ ನಾಯಿಗಳ ವಿಷಯದಲ್ಲಿ ಚಿಕಿತ್ಸೆಗಿಂತ ಮುನ್ನೆಚ್ಚರಿಕೆಯೇ ಮದ್ದು' ಎಂದಿರುವ ಸುಪ್ರೀಂಕೋರ್ಟ್, ದೇಶದಲ್ಲಿ ಜನರು ಸಾಯುತ್ತಿರುವುದು ನಾಯಿ ಕಡಿತದಿಂದ ಮಾತ್ರ ಅಲ್ಲ ರಸ್ತೆಗಳಲ್ಲಿ ಇತರ ಪ್ರಾಣಿಗಳಿಂದ ಉಂಟಾಗುವ ಅಪಘಾತಗಳಿಂದಲೂ ಜೀವಹಾನಿ ಸಂಭವಿಸುತ್ತಿವೆ. ಕಳೆದ 20 ದಿನಗಳಲ್ಲಿ ಇಬ್ಬರು ನ್ಯಾಯಮೂರ್ತಿಗಳೂ ಪ್ರಾಣಿಗಳಿಂದಾಗಿ ಹೆದ್ದಾರಿಗಳಲ್ಲಿ ಅಪಘಾತಕ್ಕೆ ಒಳಗಾಗಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದೆ. ನಾಯಿಗಳು ದಾಳಿ ಮಾಡುವುದರಿಂದ ಮಾತ್ರವಲ್ಲ ದಿಢೀರ್ ರಸ್ತೆಗೆ ನುಗ್ಗುವುದರಿಂದಲೂ ಅಪಘಾತಗಳು ಸಂಭವಿಸಿ ಜೀವಹಾನಿ ಸಂಭವಿಸುತ್ತವೆ. ಹಾಗಾಗಿ ರಸ್ತೆಗಳನ್ನು ನಾಯಿಗಳಿಂದ ಮುಕ್ತವಾಗಿಸುವುದೇ ಈ ಸಮಸ್ಯೆಗೆ ಪರಿಹಾರ ಎಂದು ಸುಪ್ರೀಂಕೋರ್ಟ್ ಹೇಳಿದೆ. ಬೀದಿ ನಾಯಿಗಳಿಗೆ ಆಶ್ರಯ ಒದಗಿಸುವುದು ಈ ಸಮಸ್ಯೆಗೆ ಪರಿಹಾರ ಅಲ್ಲ. ಇದು ಭೌತಿಕವಾಗಿ ಸಾಧ್ಯವಿಲ್ಲ. ಆರ್ಥಿಕವಾಗಿಯೂ ಅಸಾಧ್ಯ ವೈಜ್ಞಾನಿಕ ರೀತಿಯಲ್ಲಿ ಇದಕ್ಕೆ ಪರಿಹಾರ ಹುಡುಕಬೇಕು ಎಂದು ಅದು ಅಭಿಪ್ರಾಯ ಪಟ್ಟಿದೆ. ಈ ದೇಶದಲ್ಲಿ ಸುಪ್ರೀಂಕೋರ್ಟ್ ನಿಜಕ್ಕೂ ಚರ್ಚಿಸಬೇಕಾದುದು, ಸಮಾಜ ನಿಜಕ್ಕೂ ಕಾಳಜಿ ವ್ಯಕ್ತಪಡಿಸಬೇಕಾದುದು ಬೀದಿ ಮಕ್ಕಳ ಬಗ್ಗೆ ಈ ದೇಶದಲ್ಲಿ ಒಂದೂವರೆ ಕೋಟಿಗೂ ಅಧಿಕ ಮಕ್ಕಳು ನಗರದ ಬೀದಿಗಳಲ್ಲಿ ಬದುಕು ನಡೆಸುತ್ತಿದ್ದಾರೆ ಮತ್ತು ಸಮಾಜ ಇವರ ಮೇಲೆ ಬೀದಿ ನಾಯಿಗಳಿಗಿಂತಲೂ ಕ್ರೂರವಾಗಿ ಎರಗುತ್ತಿವೆ. ಆದರೆ, ಬೀದಿ ಮಕ್ಕಳ ಮೇಲೆ ಪ್ರತಿ ದಿನ ನಡೆಯುತ್ತಿರುವ ದೌರ್ಜನ್ಯಗಳು ಸುಪ್ರೀಂಕೋರ್ಟ್‌ನಲ್ಲಿ ಚರ್ಚೆಗೊಳಗಾದುದು ತೀರಾ ಕಡಿಮೆ. ಹಲವು ಸಂಘಟನೆಗಳು ಬೀದಿ ಮಕ್ಕಳಿಗಾಗಿ ಕೆಲಸ ಮಾಡುತ್ತಿವೆಯಾದರೂ ನಗರ ಬೆಳೆದಂತೆ ಈ ಮಕ್ಕಳ ಸಂಖ್ಯೆಯೂ ಹೆಚ್ಚುತ್ತಿವೆ. ಆಗಾಗ ಸರಕಾರ ನಗರದ ಕೊಳೆಗೇರಿಗಳಲ್ಲಿ ನಡೆಸುವ ಬುಲ್ಡೋಜರ್ ಕಾರ್ಯಾಚರಣೆಯಲ್ಲಿ ಸಂತ್ರಸ್ತರಾದ ಮಕ್ಕಳಿಗೆ ಅಂತಿಮವಾಗಿ ಆಶ್ರಯ ನೀಡುವುದು ನಗರದ ಬೀದಿಗಳು, ಈ ಬೀದಿ ಬದಿಯಲ್ಲಿರುವ ಎಳೆ ಮಕ್ಕಳ ಮೇಲೆಯೇ ಅತಿ ಹೆಚ್ಚು ಅತ್ಯಾಚಾರಗಳು ನಡೆಯುತ್ತವೆ. ಕೊಲೆಗಳೂ ನಡೆಯುತ್ತವೆ. ಬೀದಿ ನಾಯಿಗಳಿಗೆ ಇರುವ ಬೆಲೆಯೂ ಇವರ ಜೀವಕ್ಕಿಲ್ಲ ಎನ್ನುವ ಸ್ಥಿತಿ ದೇಶದಲ್ಲಿದೆ. ಬೀದಿ ನಾಯಿಗಳು ಈ ಮಕ್ಕಳ ಬದುಕನ್ನು ಹರಿದು ತಿಂದರೂ ಅದರ ಬಗ್ಗೆ ಸಮಾಜಕ್ಕಾಗಲಿ, ನ್ಯಾಯಾಲಯಕ್ಕಾಗಲಿ ಕಾಳಜಿಯಿಲ್ಲ, ಹೊಟ್ಟೆ ತುಂಬಿದವರು ಇಂದು ಬೀದಿ ನಾಯಿಗಳ ಹಕ್ಕಿನ ಬಗ್ಗೆ ಮಾತನಾಡುತ್ತಿದ್ದಾರೆ ಮತ್ತು ಚರ್ಚಿಸುತ್ತಿದ್ದಾರೆ. ಬೀದಿ ಮಕ್ಕಳನ್ನು ರಕ್ಷಿಸಿ ಅವರಿಗೆ ಆಶ್ರಯ ನೀಡುವಲ್ಲಿ ಯಶಸ್ವಿಯಾದಾಗ ಮಾತ್ರ ನಾವು ಬೀದಿ ನಾಯಿಗಳಿಗೆ ಆಶ್ರಯ ನೀಡುವ ಬಗ್ಗೆ ಮಾತನಾಡಲು ನೈತಿಕವಾಗಿ ಅರ್ಹರಾಗುತ್ತೇವೆ. ರಸ್ತೆಗಳನ್ನು ಬೀದಿನಾಯಿಗಳು ಮಾತ್ರವಲ್ಲ ಉಂಡಾಡಿ ದನಗಳು ಕೂಡ ಸಮಸ್ಯೆಗಳಾಗಿ ಕಾಡುತ್ತಿವೆ.

**ರೈಲ್ವೇ ಇಲಾಖೆಯ ಅಂತರಿಕ ದತ್ತಾಂಶಗಳ ಪ್ರಕಾರ, 2019ರಲ್ಲಿ ಭಾರತದಲ್ಲಿ ಪ್ರತಿ ದಿನ ಸುಮಾರು 70ರಿಂದ 80 ದನಕರುಗಳು ರೈಲಿಗೆ ಸಿಲುಕುತ್ತಿದ್ದವು. 2017-18ರಲ್ಲಿ 18,900 ಪ್ರಕರಣಗಳು ಸಂಭವಿಸಿದ್ದರೆ, 2019ರಲ್ಲಿ 43,000ಕ್ಕೆ ತಲುಪಿತ್ತು. ವಂದೇಭಾರತ್ ಎಕ್ಸ್‌ಪ್ರೆಸ್ ಉದ್ಘಾಟನೆಯಾಗಿ ಎರಡನೇ ದಿನದ ಸಂಚಾರದಲ್ಲೇ ಆಕಳಿಗೆ ಢಿಕ್ಕಿ ಹೊಡೆದು ಮಾಧ್ಯಮಗಳಲ್ಲಿ ಸುದ್ದಿಯಾಗಿತ್ತು. ಬೀದಿ ನಾಯಿಗಳಿಂದ ರಸ್ತೆ ಅಪಘಾತಗಳಷ್ಟೇ ನಡೆದರೆ ಬೀದಿ ದನಗಳಿಂದ ರೈಲು, ವಿಮಾನ ಅಪಘಾತಗಳೂ ಸಂಭವಿಸಿವೆ. ಇಷ್ಟಾದರೂ ನ್ಯಾಯಾಲಯಗಳು ಈ ಬೀದಿ ದನಗಳ ಹಿಂದಿರುವ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಮುಂದಾಗಿಲ್ಲ. ಯಾಕೆಂದರೆ ಬೀದಿ ನಾಯಿಗಳಿಗೆ ಪರಿಹಾರ ಸೂಚಿಸಿದಂತೆ ಬೀದಿ ದನಗಳಿಗೆ ಪರಿಹಾರ ಸೂಚಿಸಿ ಹೊರಟರೆ ಆಗ ಸರಕಾರದ ಅವೈಜ್ಞಾನಿಕ ಜಾನುವಾರು ಮಾರಾಟಕ್ಕೆ ಸಂಬಂಧಿಸಿದ ಕಾಯ್ದೆಯನ್ನು ಬದಲಿಸುವುದಕ್ಕೆ ಸೂಚನೆ ನೀಡಬೇಕಾಗುತ್ತದೆ.**

ಸರಕಾರ ಗೋಹತ್ಯೆ ನಿಷೇಧ ಕಾನೂನನ್ನು ಜಾರಿಗೆ ತಂದ ಆನಂತರ ತಾವು ಸಾಕುತ್ತಿರುವ ಅನುಪಯುಕ್ತ ಗೋವುಗಳನ್ನು ಮಾರಾಟ ಮಾಡಲಾಗದೆ ಅವುಗಳನ್ನು ರೈತರು ರಸ್ತೆಗೆ ಬಿಡುತ್ತಿದ್ದಾರೆ. 2020ರಲ್ಲಿ ಬಿಡುಗಡೆಯಾದ ಜಾನುವಾರು ಗಣತಿಯ ಪ್ರಕಾರ ಭಾರತದಲ್ಲಿ ಐವತ್ತು ಲಕ್ಷಕ್ಕೂ ಅಧಿಕ ಬೀದಿ ದನಗಳಿವೆ. ಇನ್ನೂ ದನಗಳು ಕಾಡಿನಿಂದ ದಾರಿ ತಪ್ಪಿ ಬಂದವುಗಳಲ್ಲ. ರೈತರು ತಾವು ಸಾಕಿದ ದನಗಳನ್ನು ಅನಿವಾರ್ಯವಾಗಿ ಬೀದಿಗೆ ಬಿಡುತ್ತಿದ್ದಾರೆ. ಜಾನುವಾರುಗಳನ್ನು ಮಾರಾಟ ಮಾಡಲು ಒಂದೆಡೆ ಕಾನೂನಿನ ಭಯ. ಇನ್ನೊಂದೆಡೆ ಗೋರಕ್ಷಕರ ವೇಷದಲ್ಲಿರುವ ಸಂಘಪರಿವಾರ ಗೂಂಡಾಗಳ ಭಯ, ಅಂತಿಮವಾಗಿ ಜಾನುವಾರುಗಳು ಬೀದಿ ಪಾಲಾಗುತ್ತಿವೆ. ಎರಡು ವರ್ಷಗಳ ಹಿಂದೆ ಉತ್ತರ ಭಾರತದಲ್ಲಿ ಜಾನುವಾರುಗಳ ನಡುವೆ ಸಾಂಕ್ರಾಮಿಕ ರೋಗಗಳು ಹರಡಲೂ ಈ ಬೀದಿ ದನಗಳೇ ಕಾರಣವಾಗಿದ್ದವು. ನೂರಾರು ದನಗಳು ಬೀದಿಗಳಲ್ಲೇ ಮೃತಪಟ್ಟಿದ್ದವು. ಉತ್ತರ ಭಾರತದಲ್ಲಿ ಅತಿ ಹೆಚ್ಚು ರಸ್ತೆ ಅಪಘಾತಗಳು ಸಂಭವಿಸುವುದು ಬೀದಿ ದನಗಳಿಂದ ಅಷ್ಟೇ ಅಲ್ಲ ಹಲವು ರೈಲು ಅವಘಡಗಳಿಗೂ ಈ ಉಂಡಾಡಿ ದನಗಳು ಕಾರಣವಾಗಿವೆ. ಅಷ್ಟೇ ಯಾಕೆ. ವಿಮಾನ ನಿಲ್ದಾಣಗಳಿಗೂ ಈ ದನಗಳು ನುಗ್ಗಿವೆ. ರನ್ ವೇಗಳಲ್ಲಿ ದನಗಳು ನುಗ್ಗುವುದು, ವಿಮಾನಗಳಿಗೆ ಅಡ್ಡಿಯುಂಟು ಮಾಡುವುದು ಸಾಮಾನ್ಯವಾಗಿವೆ. 2018ರಲ್ಲಿ ಅಹ್ಮದಾಬಾದ್ ವಿಮಾನ ನಿಲ್ದಾಣದ ರನ್‌ವೇಗೆ ನುಗ್ಗಿದ ಆಕಳೊಂದು ಭಾರೀ ಗೊಂದಲ ಸೃಷ್ಟಿಸಿತ್ತು. ಇದರಿಂದಾಗಿ ಎರಡು ವಿಮಾನಗಳು ಲ್ಯಾಂಡಿಂಗ್‌ನ್ನು ಅರ್ಧಕ್ಕೇ ನಿಲ್ಲಿಸಬೇಕಾಯಿತು. ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದ ಕಾರ್ಗೋ ಗೇಟ್ ಭದ್ರತೆಯನ್ನು ಮೀರಿ ಆಕಳು ನುಗ್ಗಿದ್ದರಿಂದ ಒಂದು ಸರಕು ಸಾಗಣೆ ವಿಮಾನವನ್ನು ಮುಂಬೈಗೆ ತಿರುಗಿಸಲಾಯಿತು.

## ರಾಮಾಯಣ



ವಾಲಿಯನ್ನು ವಧಿಸುತ್ತೇನೆಂದು ಶ್ರೀ ರಾಮನ ಪ್ರತಿಜ್ಞೆ

• ಹಿಂದಿನ ಸಂಚಿಕೆಯಿಂದ 120 ನೆಯ ಅಧ್ಯಾಯ

ಅಟ್ಟಿ ಬಂದು ಆತನನ್ನು ಕುರಿತು ಮೃದುನುಡಿಯಿಂದ ಎಲೈ ದುಂದುಬಿಯೆ, ನೀನೇನು ಕಾರಣವಾಗಿ ಕಿಂಧಾಪಟ್ಟಣದ ಬಾಗಿಲನ್ನಡ್ಡಗಟ್ಟಿ ಇಲ್ಲಿಂದ ಬೊಬ್ಬಿಟ್ಟು ಕೂಗುತ್ತಿದ್ದೀಯೆ ? ನನ್ನ ಪರಾಕ್ರಮವನ್ನು ನೀನು ಬಲ್ಲೆಯಷ್ಟೆ! ಇಲ್ಲಿರಬೇಡ. ಇಲ್ಲಿಂದ ಹಿಂದಿರುಗಿ ನಿನ್ನ ಪ್ರಾಣಗಳನ್ನು ಉಳಿಸಿಕೊ ಎಂದು ಹೇಳಿದನು. ದುಂದುಭಿಯು ಅತ್ಯಂತ ಕೋಪಯುಕ್ತನಾಗಿ ಎಲೈ ವಾಲಿಯೆ, ನೀನು ನಿನ್ನ ಸ್ತ್ರೀಯರ ಸಮೀಪದಲ್ಲಿ ಪೌರುಷವನ್ನು ಹೇಳಿಕೊಳ್ಳಬೇಡ. ಈಗ ನನ್ನೊಡನೆ ಯುದ್ಧವನ್ನು ಮಾಡಿದರೆ ನನ್ನ ಸಾಮರ್ಥ್ಯವನ್ನು ಕಾಣುವೆ: ಈಗ ನನ್ನ ಕೋಪವನ್ನು ತಡೆದುಕೊಂಡಿರುತ್ತೇನೆ. ನೀನು ಈ ರಾತ್ರಿಯಲ್ಲಿ ನಿನ್ನ ಸತಿಯೊಡನೆ ವಿಹರಿಸುತ್ತ ಸುಖವಾಗಿರು. ನಿನ್ನ ಪರಿವಾರಕ್ಕೆ ಉಚಿತವಾದ ಉಡುಗೊರೆಗಳನ್ನು ಕೊಟ್ಟು ಸಂತವಿಟ್ಟು ನಿನಗೆ ಸಹಾಯವಾಗಿರುವ ಬಂಧುಗಳನ್ನು ಸಂಮಾನಿಸಿ ಪಟ್ಟಣಗಳಲ್ಲಿರುವ ಪ್ರಜೆಗಳನ್ನು ಸಂತವಿಡು. ನೀನು ಸ್ತ್ರೀಲೋಲನಾಗಿದ್ದೀಯ, ರಾಜನೀತಿಯಲ್ಲಿ ಸ್ತ್ರೀಶೋಲನಾಗಿ ಮದಿಸಿರುವವನೊಡನೆ ಯುದ್ಧವು ಸಲ್ಲದೆಂದು ಹೇಳಿದೆ.

ಕಾಮದಿಂದ ಮದಿಸಿದವನೊಡನೆಯೂ ಉನ್ಮಾದದಿಂದ ಮೈಮರೆತವನೊಡನೆಯೂ ಮಲಗಿದ್ದವನೊಡನೆಯೂ ಆಯುಧವಿಲ್ಲದವನೊಡನೆಯೂ ಯುದ್ಧವನ್ನು ಮಾಡಿ ಕೊಲ್ಲುವವನು ಭ್ರೂಣಹತ್ಯಾಪಾಪಫಲ ನನ್ನೆದುವನು. ಆದಕಾರಣ ಕಾಮಮೋಹಿತನಾಗಿರುವ ನೀನು ತಿರುಗಿ ಹೋಗಿ ನಿನ್ನ ಮನಸ್ಸು ಬಂದಂತೆ ಭೋಗಗಳನ್ನನುಭವಿಸಿ ನಾಳೆಯ ಪ್ರಾತಃಕಾಲದಲ್ಲಿ ಬಾ. ಆಗ ನಿನಗೆ ತಕ್ಕ ಬುದ್ಧಿಯನ್ನು ಕಲಿಸುವೆನು ಎಂದು ಹೇಳಿದನು.

ಆ ಮಾತನ್ನು ಕೇಳಿ ವಾಲಿಯು ತಾರಾದೇವಿಯೇ ಮೊದಲಾದ ತನ್ನ ಸ್ತ್ರೀಯರನ್ನು ಮನೆಗೆ ಕಳುಹಿಸಿ ಎಲೈ ದುಂದುಭಿಯೆ, ನನ್ನನ್ನು ನೀನು ಮೋಹದಿಂದ ಮದಿಸಿದವನೆಂದೆಣಿಸಬೇಡ. ನಾನು ಯುದ್ಧರಂಗದಲ್ಲಿ ನಿನ್ನನ್ನು ಕೊಲ್ಲಬೇಕೆಂದು ಮದಿಸಿದ್ದೇನೆ. ನೀನು ನನ್ನೊಡನೆ ಯುದ್ಧವನ್ನು ಮಾಡುವುದಕ್ಕೆ ಅಂಜದ ಪಕ್ಷದಲ್ಲಿ ಯುದ್ಧಸಂನದ್ಧನಾಗು ಎಂದು ನುಡಿದನು. ಅನಂತರ ವಾಲಿಯು ಅತ್ಯಂತ ಕೋಪಯುಕ್ತನಾಗಿ ತನ್ನ ತಂದೆಯಾದ ದೇವೇಂದ್ರನು ಕೊಟ್ಟ ಸುವರ್ಣದ ಹಾರವನ್ನು ಹಾಕಿಕೊಂಡು ಯುದ್ಧಸಂನದ್ಧನಾದನು. ಕೋಣದ ಸ್ವರೂಪದಿಂದ ಪರ್ವತದ ಆಕಾರದಲ್ಲಿದ್ದ ದುಂದುಭಿಯ ಕೊಂಬುಗಳನ್ನು ಹಿಡಿದು ತಿರುಗಿಸಿ ನೆಲಕ್ಕೆ ಅಪ್ಪಳಿಸಿ ಕೆಡಹಿ ಬೊಬ್ಬಿಟ್ಟು ಕೂಗಿದನು.

ಆಗ ಆ ಕೋಣದ ಕಿವಿಗಳಿಂದ ರಕ್ತ ಪ್ರವಾಹವು ಸುರಿಯಲಾರಂಭಿಸಿತು. ಆ ಬಳಿಕ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಬುದ್ಧಿಯಿಂದ ವಾಲಿ ದುಂದುಭಿಯರಿಗೆ ಮಹಾಘೋರವಾದ ಯುದ್ಧವಾಯಿತು. ದೇವೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ವಾಲಿಯು ಮುಷ್ಟಿಗಳಿಂದಲೂ ಮೊಣಕಾಲುಗಳಿಂದಲೂ ಕಲ್ಲರೆಗಳಿಂದಲೂ ದೊಡ್ಡ ಮರಗಳಿಂದಲೂ ಹೊಡೆಯುತ್ತಿರಲು ದುಂದುಭಿಯು ಸತ್ತ್ವಗುಂದಿದನು. ಆಮೇಲೆ ವಾಲಿಯು ಒಂದು ಕ್ಷಣಮಾತ್ರ ತಳಹರಿಸಿಕೊಂಡು ದುಂದುಭಿಯನ್ನು ಉಗುರುಗಳಿಂದ ಸೀಳಿ ಭೂಮಿಯ ಮೇಲೆ ಕೆಡಹಿ ಕೈಗಳಿಂದ ಶರೀರವನ್ನು ಮುರಿದು ನೆಲಕ್ಕೆ ಅಪ್ಪಳಿಸಲು ಆತನು ಸತ್ತುಹೋದನು.

ಮುಂದುವರಿಯುವುದು...

# ಮುಖದ ಅಂದಕ್ಕೆ ಹಸಿರು ಬಟಾಣಿ ಫೇಸ್ ಪ್ಯಾಕ್



ಬಟಾಣಿಗಳು ದೇಹದಲ್ಲಿ ಕಾಲಜನ್ ಉತ್ಪಾದನೆಯನ್ನು ಹೆಚ್ಚಿಸುತ್ತವೆ, ಇದು ಆರೋಗ್ಯಕರ ಚರ್ಮಕ್ಕೆ ಅವಶ್ಯಕವಾಗಿದೆ. ಬಟಾಣಿಯಲ್ಲಿರುವ ವಿಟಮಿನ್ ಸಿ ಫ್ರೀ ರಾಡಿಕಲ್‌ಗಳಿಂದ ಉಂಟಾಗುವ ಹಾನಿಯಿಂದ ಜೀವಕೋಶಗಳನ್ನು ರಕ್ಷಿಸಲು ಸಹಾಯ ಮಾಡುತ್ತದೆ. ಬಟಾಣಿಗಳು ಬೀಟಾ-ಕ್ಯಾರೋಟಿನ್ ನಲ್ಲಿಯೂ ಸಮೃದ್ಧವಾಗಿವೆ, ಇದು ಚರ್ಮಕ್ಕೆ ತುಂಬಾ ಪ್ರಯೋಜನಕಾರಿಯಾಗಿದೆ.

ಈಗಂತೂ ಹಸಿ ಬಟಾಣಿಗಳ ಸೀಸನ್ ಶುರುವಾಗಿ ಬಿಟ್ಟಿದೆ ಮಾರುಕಟ್ಟೆಯಲ್ಲಿ ಸ್ವಲ್ಪ ದುಬಾರಿಯಾದರೂ ಆರೋಗ್ಯಕ್ಕೆ ಬಹಳ ಒಳ್ಳೆಯದು ಎಂದು ತಜ್ಞರು ಕೂಡ ಸಲಹೆ ನೀಡುತ್ತಾರೆ. ಇನ್ನು ಸಾಮಾನ್ಯವಾಗಿ ಒಣಗಿದ ಬಟಾಣಿ ಕಾಳುಗಳಿಗೆ ಹೋಲಿಸಿದರೆ, ಅಂದರೆ ಸೂಪರ್ ಮಾರ್ಕೆಟ್‌ನಲ್ಲಿ ಸಿಗುವ ಫ್ರೀಜ್ ಮಾಡಲ್ಪಟ್ಟಿರುವ ಬಟಾಣಿ ಕಾಳುಗಳಿಗೆ ಹೋಲಿಸಿದರೆ ತಾಜಾ ರೂಪದಲ್ಲಿ ಅಂದರೆ ಹಸಿರು ಕೋಡಿನ ರೂಪದಲ್ಲಿ ಸಿಗುವ ಹಸಿರು ಬಟಾಣಿ ಕಾಳುಗಳಲ್ಲಿ ಆರೋಗ್ಯಕ್ಕೆ ಬಹಳ ಒಳ್ಳೆಯದು

**ಹಸಿರು ಬಟಾಣಿ ಕಾಳುಗಳು ತ್ವಚೆಯ ಕಾಂತಿಗೂ ಒಳ್ಳೆಯದೇ?:** ಆದರೆ ಹಸಿರು ಬಟಾಣಿ ಕಾಳುಗಳು ಆರೋಗ್ಯಕ್ಕೆ ಮಾತ್ರವಲ್ಲ, ಮುಖದ ಸೌಂದ ರ್ಯವನ್ನು ಹೆಚ್ಚಿಸುವಲ್ಲಿಯೂ ಕೂಡ ನೆರವಿಗೆ ಬರುತ್ತದೆ ಎನ್ನುವುದು ನಿಮಗೆ ತಿಳಿದಿದೆಯೇ? ಹೌದು ಈ ಹಸಿರು ಬಟಾಣಿ ಫೇಸ್ ಪ್ಯಾಕ್ ಮುಖದ ಸೌಂದರ್ಯ ವರ್ಧಿಸುವಲ್ಲಿಯೂ ಕೂಡ ನೆರವಿಗೆ ಬರುತ್ತದೆ. ಚಳಿಗಾಲದಲ್ಲಿ ಚರ್ಮಕ್ಕೆ ವಿಶೇಷ ಕಾಳಜಿ ಬೇಕು, ಏಕೆಂದರೆ ಈ ಸಮಯದಲ್ಲಿ ಕಾಣಿಸಿಕೊಳ್ಳುವ ತಂಪಾದ ಗಾಳಿಯಿಂದಾಗಿ ತ್ವಚೆಯ ತನ್ನ ತೇವಾಂಶವನ್ನು ಕಳೆದುಕೊಳ್ಳಬಹುದು ಮತ್ತು ಅತಿಯಾಗಿ ಒಣಗಬಹುದು. ಈ ನಿಟ್ಟಿನಲ್ಲಿ ಹಸಿರು ಬಟಾಣಿಯನ್ನು ಮನೆಯಲ್ಲಿ ತಯಾರಿಸಿದ ಕೆಲವು ಪದಾರ್ಥಗಳೊಂದಿಗೆ ಬೆರೆಸಿ ತಯಾರಿಸಿದ ಫೇಸ್ ಪ್ಯಾಕ್ ಚರ್ಮದ ತೇವಾಂಶ ವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಹಾಗಾದ್ರೆ ಈ ನಮ್ಮ ಚರ್ಮವನ್ನು ಹೊಳೆಯುವಂತೆ ಮಾಡುವ ಹಸಿರು ಬಟಾಣಿ ಗಳನ್ನು ಬಳಸಿ ಫೇಸ್ ಪ್ಯಾಕ್‌ಗಳನ್ನು ತಯಾರಿಸುವುದು ಹೇಗೆ ಎನ್ನುವುದರ ಬಗ್ಗೆ ಇಂದಿನ ಲೇಖನದಲ್ಲಿ ನೋಡೋಣ...

**ಚರ್ಮದ ಆರೈಕೆಯಲ್ಲಿ ಹಸಿರು ಬಟಾಣಿಗಳ ಪಾತ್ರಗಳೇನು? :** ಇದು ಚರ್ಮದ ನೈಸರ್ಗಿಕ ತಡೆಗೋಡೆಯನ್ನು ಆಳವಾಗಿ ಸ್ವಚ್ಛಗೊಳಿಸುತ್ತದೆ ಹಾಗೂ ಬಲಪಡಿಸುತ್ತದೆ ಮತ್ತು ಕಾಲಜನ್ ರಚನೆಗೆ ಕಾರಣವಾಗುತ್ತದೆ, ಇದು ವಯಸ್ಸಾಗುವುದನ್ನು ವಿಳಂಬಗೊಳಿಸುತ್ತದೆ ಮತ್ತು ಸುಕ್ಕುಗಳು ಬರದಂತೆ ನೋಡಿ ಕೊಳ್ಳುತ್ತದೆ. ಚರ್ಮವನ್ನು ಹೈಡ್ರೇಟ್ ಮಾಡುವಲ್ಲಿ ಇದು ತುಂಬಾ ಸಹಾಯಕವಾಗಿದೆ, ಇದು ಚರ್ಮದ ಬಣ್ಣವನ್ನು ರಕ್ಷಿಸುತ್ತದೆ ಮತ್ತು ಅದನ್ನು ಹೆಚ್ಚು ಹೊಳೆಯುವ ಮತ್ತು ಸ್ಫಟಿಕವಾಗಿ ಸ್ಪಷ್ಟವಾಗಿ ಕಾಣುವಂತೆ ಮಾಡುತ್ತದೆ. ಬಟಾಣಿಗಳು ನೈಸರ್ಗಿಕವಾಗಿ ವಿಟಮಿನ್ ಎ, ಬಿ 6, ಸಿ, ಫೋಲೇಟ್ ಮತ್ತು ಸತುವುಗಳಂತಹ ಖನಿಜಗಳು ಮತ್ತು ಜೀವಸತ್ವಗಳಿಂದ ಸಮೃದ್ಧವಾಗಿವೆ, ಇದು ನಿಮ್ಮ ಚರ್ಮವನ್ನು ಸೂರ್ಯನಿಂದ ಅಥವಾ ಯಾವುದೇ ಅಲರ್ಜಿಯಿಂದ ಯಾವುದೇ ಹಾನಿಯಿಂದ ತಡೆಯುತ್ತದೆ ಅದರ ಮೊಡವೆಗಳನ್ನು ಮುಕ್ತವಾಗಿರಿಸುತ್ತದೆ ಮತ್ತು ತೆರೆದ ದೊಡ್ಡ ರಂಧ್ರಗಳನ್ನು ಕುಗ್ಗಿಸಲು ಸಹಾಯ ಮಾಡುತ್ತದೆ ಎಂದು ಕೃತಿಕಾ ಶರ್ಮಾ ಗೌತಮ್ ಅವರು ತಮ್ಮ ಇನ್ಸ್ಟಾಗ್ರಾಮ್ ಪೇಜ್ ನಲ್ಲಿ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ಹಸಿರು ಬಟಾಣಿ ಬಳಸಿ ಚರ್ಮವನ್ನು ಹೊಳೆಯುವಂತೆ ಮಾಡುವ ಫೇಸ್ ಪ್ಯಾಕ್‌ಗಳನ್ನು ಹೇಗೆ ತಯಾರಿಸಬೇಕು ಎನ್ನುವುದನ್ನು ನೋಡೋಣ

**ಇದನ್ನು ರೆಡಿ ಮಾಡುವ ವಿಧಾನ:** ಮೊದಲು ಬೇಯಿಸಿದ ಹಸಿರು ಬಟಾಣಿಯನ್ನು ಮಿಕ್ಸರ್‌ನಲ್ಲಿ ಪುಡಿಮಾಡಿ ಪೇಸ್ಟ್ ಮಾಡಿ. ಈಗ ಬೇಯಿಸಿದ ಹಸಿರು ಬಟಾಣಿ ಪೇಸ್ಟ್ ಅನ್ನು ಒಂದು ಬಟ್ಟಲಿಗೆ ವರ್ಗಾಯಿಸಿ ಮತ್ತು ಎಲ್ಲಾ ಪದಾರ್ಥಗಳನ್ನು ಚೆನ್ನಾಗಿ ಮಿಶ್ರಣ ಮಾಡಿ.

**ಹೇಗೆ ಬಳಸುವುದು:** ಫೇಸ್ ಪ್ಯಾಕ್ ಅನ್ನು ನಿಮ್ಮ ಮುಖಕ್ಕೆ ಹಚ್ಚುವ ಮೊದಲು, ಸೌಮ್ಯವಾದ ಕ್ಲೆನ್ಸರ್ ಅಥವಾ ಹಸಿ ಹಾಲಿನಿಂದ ನಿಮ್ಮ ಮುಖವನ್ನು ಚೆನ್ನಾಗಿ ಸ್ವಚ್ಛಗೊಳಿಸಿ. ಫೇಸ್ ಪ್ಯಾಕ್ ಅನ್ನು ನಿಮ್ಮ ಮುಖ ಮತ್ತು ಕುತ್ತಿಗೆಗೆ ಸಮವಾಗಿ ಹಚ್ಚಿ, 15 ನಿಮಿಷಗಳ ಕಾಲ ಅದನ್ನು ಬಿಡಿ. ಫೇಸ್ ಪ್ಯಾಕ್ ಒಣಗಿದ ನಂತರ, ವೃತ್ತಾಕಾರದ ಚಲನೆಗಳಲ್ಲಿ ನಿಮ್ಮ ಮುಖವನ್ನು ತೊಳೆಯಿರಿ.

ಉಗುರು ಬೆಚ್ಚಗಿನ ನೀರಿನಿಂದ ಚೆನ್ನಾಗಿ ತೊಳೆಯಿರಿ. ಫೇಸ್ ವಾಶ್ ಕ್ಲಾತ್ ಬಳಸುವ ಬದಲು, ಬೆಚ್ಚಗಿನ ನೀರಿನಲ್ಲಿ ಅದ್ದಿದ ಟವಲ್‌ನಿಂದ ನಿಮ್ಮ ಮುಖವನ್ನು ಒರೆಸಬಹುದು. ಈ ಫೇಸ್ ಪ್ಯಾಕ್ ಅನ್ನು ವಾರಕ್ಕೆ ಎರಡು ಬಾರಿ ಬಳಸುವುದರಿಂದ ಚಳಿಗಾಲದಲ್ಲಿ ಚರ್ಮದ ಹೊಳಪನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

### ಹಸಿರು ಬಟಾಣಿ ಅರಿಶಿನ ಫೇಸ್ ಪ್ಯಾಕ್

**ಹಸಿರು ಬಟಾಣಿ ವಿಟಮಿನ್ ಸಿ ಮತ್ತು ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿದೆ, ಆದ್ದರಿಂದ ಅವುಗಳನ್ನು ಬಳಸಿ ಮಾಡಿದ ಫೇಸ್ ಪ್ಯಾಕ್‌ಗಳು ಚರ್ಮಕ್ಕೆ ಅತ್ಯಂತ ಪ್ರಯೋಜನಕಾರಿ. ಹಸಿರು ಬಟಾಣಿ ಫೇಸ್ ಪ್ಯಾಕ್ ಚರ್ಮವನ್ನು ಹೊಳೆ ಯುವಂತೆ ಮಾಡುವುದಲ್ಲದೆ ಅದನ್ನು ತೇವಗೊಳಿಸುತ್ತದೆ.**

### ಬೇಕಾಗುವ ಸಾಮಗ್ರಿಗಳು

- ಬೇಯಿಸಿದ ಹಸಿರು ಬಟಾಣಿ - 1 ಕಪ್
- ಜೇನುತುಪ್ಪ - 1 ಟೀಚಮಚ
- ಮೊಸರು - 1 ಟೀಚಮಚ
- ಅರಿಶಿನ - 1 ಟೀಚಮಚ
- ಅಲೋವೆರಾ ಜೆಲ್ - 1 ಟೀಚಮಚ
- ನಿಂಬೆ - 1/2 ಟೀಚಮಚ
- ಗಂಧದ ಪುಡಿ - 1/2 ಟೀಚಮಚ

# ಗೋಡಂಬಿ ಅಂದ್ರೆ ಇಷ್ಟನಾ?



ಗೋಡಂಬಿ ನಾಲಗೆಗೆ ರುಚಿಯನ್ನು ನೀಡುವಂತಹ ಡ್ರೈಫ್ರೂಟ್ಸ್ ಆಗಿದೆ. ಇದನ್ನು ಪ್ರತಿದಿನ ತಿನ್ನೋದು ಆರೋಗ್ಯಕ್ಕೆ ಒಳ್ಳೆಯದು. ಆದರೆ ಎಷ್ಟು ಪ್ರಮಾಣದಲ್ಲಿ ತಿನ್ನಬೇಕು ಎನ್ನುವುದನ್ನು ತಿಳಿದಿರುವುದು ಮುಖ್ಯ. ಚಳಿಗಾಲದಲ್ಲಿ ದೇಹವನ್ನು ಬೆಚ್ಚಗಿಡಲು, ರೋಗನಿರೋಧಕ ಶಕ್ತಿಯನ್ನು ಬಲಪಡಿಸಲು, ಶಕ್ತಿಯನ್ನು ಹೆಚ್ಚಿಸಲು ಮತ್ತು ರುಚಿಯನ್ನು ಹೆಚ್ಚಿಸಲು, ನಿಮ್ಮ ಆಹಾರದಲ್ಲಿ ಗೋಡಂಬಿಯನ್ನು ಸೇರಿಸುವುದು ಉತ್ತಮ . ಒಣ ಹಣ್ಣುಗಳಲ್ಲಿ ಗೋಡಂಬಿ ಮತ್ತು ಒಣದ್ರಾಕ್ಷಿಗಳ ರುಚಿಯನ್ನು ಎಲ್ಲರೂ ಆನಂದಿಸುತ್ತಾರೆ. ಗೋಡಂಬಿಯನ್ನು ತಿಂಡಿಯಾಗಿ ತಿನ್ನಬಹುದು.

ಸಾದಾ ಗೋಡಂಬಿ ಸ್ವಲ್ಪ ಸಿಹಿ ರುಚಿಯನ್ನು ಹೊಂದಿರುತ್ತದೆ. ನೀವು ಅವುಗಳನ್ನು ಲಘುವಾಗಿ ಹುರಿದು ಉಪ್ಪು,ಖಾರ ಸೇರಿಸಿಯೂ ತಿನ್ನಬಹುದು. ನೀವು ದಿನಕ್ಕೆ ಎಷ್ಟು ಗೋಡಂಬಿ ತಿನ್ನಬೇಕು ಮತ್ತು ಅವುಗಳನ್ನು ತಿನ್ನುವುದರಿಂದಾಗುವ ಪ್ರಯೋಜನಗಳ ಬಗ್ಗೆ ತಿಳಿಯೋಣ.

**ನೀವು ದಿನಕ್ಕೆ ಎಷ್ಟು ಗೋಡಂಬಿ ತಿನ್ನಬೇಕು?:** ಗೋಡಂಬಿ ಎಷ್ಟು ರುಚಿಕರವಾದ ರುಚಿಯನ್ನು ಹೊಂದಿದೆಯೆಂದರೆ ನೀವು ಅವುಗಳನ್ನು ತಿನ್ನಲು ಪ್ರಾರಂಭಿಸಿದ ನಂತರ, ಪದೇ ಪದೇ ತಿನ್ನಬೇಕೆಂದು ಬಯಸುತ್ತೀರಿ. ಹಾಗಂತ ಅಧಿಕ ಪ್ರಮಾಣದಲ್ಲಿ ಗೋಡಂಬಿ ಸೇವಿಸುವುದು ಆರೋಗ್ಯಕ್ಕೆ ಹಾನಿಯನ್ನುಂಟು ಮಾಡಬಲ್ಲದು. ನೀವು ಪ್ರತಿದಿನ ಸೀಮಿತ ಪ್ರಮಾಣದಲ್ಲಿ ಗೋಡಂಬಿಯನ್ನು ತಿನ್ನಬೇಕು. ನೀವು ದಿನಕ್ಕೆ 3 ರಿಂದ 4 ಗೋಡಂಬಿಯನ್ನು ತಿನ್ನಬೇಕು. ಮಕ್ಕಳಿಗೆ ಪ್ರತಿದಿನ 2 ಗೋಡಂಬಿಯನ್ನು ನೀಡಬಹುದು. ನೀವು ನಿಜವಾಗಿಯೂ ಗೋಡಂಬಿಯನ್ನು ಇಷ್ಟಪಟ್ಟರೆ, ನೀವು 4 ರಿಂದ 5 ವರೆಗೆ ತಿನ್ನಬಹುದು. ಗೋಡಂಬಿತಿನ್ನುವುದು ನಿಮ್ಮ ಹಸಿವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.

**ನೀವು ಗೋಡಂಬಿಯನ್ನು ಹೇಗೆ ತಿನ್ನಬೇಕು:** ನೀವು ಗೋಡಂಬಿಯನ್ನು ಕಚ್ಚಾ ತಿನ್ನಬಹುದು. ರುಚಿಯನ್ನು ಹೆಚ್ಚಿಸಲು, ಗೋಡಂಬಿಯನ್ನು ಲಘುವಾಗಿ ಹುರಿದು ಉಪ್ಪುಸಹಿತ ಗೋಡಂಬಿಯನ್ನು ತಿನ್ನಬಹುದು. ಮಕ್ಕಳಿಗೆ ಜೇನುತುಪ್ಪದೊಂದಿಗೆ ಗೋಡಂಬಿಯನ್ನು ತಿನ್ನಿಸಿ. ಜೇನುತುಪ್ಪ ಮತ್ತು ಗೋಡಂಬಿ ತಿನ್ನುವುದರಿಂದ ಕರುಳಿನ ಆರೋಗ್ಯ ಸುಧಾರಿಸುತ್ತದೆ.

ಮಕ್ಕಳ ತೂಕವೂ ಹೆಚ್ಚಾಗುತ್ತದೆ. ಜೇನುತುಪ್ಪ ಮತ್ತು ಗೋಡಂಬಿ ತಿನ್ನುವುದರಿಂದ ಹೊಟ್ಟೆ ಮತ್ತು ಜೀರ್ಣಕ್ರಿಯೆ ಸುಧಾರಿಸುತ್ತದೆ. ಅವು ಆರೋಗ್ಯಕರ ಕೊಬ್ಬುಗಳು ಉತ್ಕರ್ಷಣ ನಿರೋಧಕಗಳನ್ನು ಒದಗಿಸುತ್ತವೆ, ಇದು ಚರ್ಮವನ್ನು ಹೈಡ್ರೇಟ್ ಆಗಿಡುತ್ತದೆ.


**ಅಧಿಕ ಗೋಡಂಬಿ ಸೇವಿಸುವುದರ ಅಡ್ಡಪರಿಣಾಮಗಳು:** ತೂಕ ಹೆಚ್ಚಾಗುವುದು: ಹೆಚ್ಚಿನ ಕ್ಯಾಲೋರಿ ಅಂಶದಿಂದಾಗಿ, ನಿಯಮಿತವಾಗಿ ಹೆಚ್ಚಿನ ಪ್ರಮಾಣದಲ್ಲಿ ಗೋಡಂಬಿಯನ್ನು ಸೇವಿಸುವುದರಿಂದ ತೂಕ ಹೆಚ್ಚಾಗಬಹುದು.

**ಜೀರ್ಣಕಾರಿ ಸಮಸ್ಯೆಗಳು:** ಇತರ ಬೀಜಗಳಂತೆ ಗೋಡಂಬಿಯು ಆಹಾರದ ನಾರಿನಂಶದಿಂದ ಸಮೃದ್ಧವಾಗಿದೆ. ಫೈಬರ್ ಜೀರ್ಣಕ್ರಿಯೆಗೆ ಪ್ರಯೋಜನಕಾರಿಯಾಗಿದ್ದರೂ, ಒಂದೇ ಬಾರಿಗೆ ಹೆಚ್ಚು ಗೋಡಂಬಿಯನ್ನು ಸೇವಿಸುವುದರಿಂದ ಹೊಟ್ಟೆ ಉಬ್ಬುವುದು, ಅನಿಲ ಅಥವಾ ಅತಿಸಾರ ಉಂಟಾಗಬಹುದು, ವಿಶೇಷವಾಗಿ ನಿಮ್ಮ ಜೀರ್ಣಾಂಗ ವ್ಯವಸ್ಥೆಯು ಹೆಚ್ಚಿನ ಫೈಬರ್ ಆಹಾರಗಳಿಗೆ ಒಗ್ಗಿಕೊಂಡಿಲ್ಲದಿದ್ದರೆ.

### ಗೋಡಂಬಿ ತಿನ್ನುವುದರ ಪ್ರಯೋಜನಗಳು

- ಪ್ರತಿದಿನ ಗೋಡಂಬಿ ತಿನ್ನುವುದರಿಂದ ದೇಹದಲ್ಲಿನ ಸತುವಿನ ಕೊರತೆಯನ್ನು ತುಂಬಲು ಸಹಾಯ ಮಾಡುತ್ತದೆ ಮತ್ತು ರೋಗನಿರೋಧಕ ಶಕ್ತಿ ಸುಧಾರಿಸುತ್ತದೆ.
- ಗೋಡಂಬಿ ಹೃದಯಕ್ಕೂ ಪ್ರಯೋಜನಕಾರಿ. ಅವುಗಳನ್ನು ತಿನ್ನುವುದರಿಂದ ದೇಹದಲ್ಲಿ ಉತ್ತಮ ಕೊಲೆಸ್ಟ್ರಾಲ್ ಹೆಚ್ಚಾಗುತ್ತದೆ.
- ಗೋಡಂಬಿ ಜೀರ್ಣಕ್ರಿಯೆ ಮತ್ತು ಹೊಟ್ಟೆಗೆ ಒಳ್ಳೆಯದು ಎಂದು ಪರಿಗಣಿಸಲಾಗುತ್ತದೆ.
- ಅವು ಆಹಾರದ ನಾರನ್ನು ಹೊಂದಿರುವುದರಿಂದ ಜೀರ್ಣಕ್ರಿಯೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.
- ಗೋಡಂಬಿ ತಿನ್ನುವುದರಿಂದ ದೇಹಕ್ಕೆ ಹೇರಳವಾದ ಕ್ಯಾಲ್ಸಿಯಂ ಮತ್ತು ಉತ್ತಮ ಪ್ರಮಾಣದ ಮೆಗ್ನೀಸಿಯಮ್ ದೊರೆಯುತ್ತದೆ.
- ಇದು ಮೂಳೆಗಳನ್ನು ಬಲಪಡಿಸಲು ಸಹಾಯ ಮಾಡುತ್ತದೆ.
- ಗೋಡಂಬಿ ಮೆದುಳಿನ ಆರೋಗ್ಯಕ್ಕೂ ಪ್ರಯೋಜನಕಾರಿ ಎಂದು ಪರಿಗಣಿಸಲಾಗುತ್ತದೆ. ಗೋಡಂಬಿ ಪ್ರೋಟೀನ್, ಆರೋಗ್ಯಕರ ಕೊಬ್ಬುಗಳು ಮತ್ತು ಪಾಲಿಫಿನಾಲ್‌ಗಳಂತಹ ಉತ್ಕರ್ಷಣ ನಿರೋಧಕಗಳನ್ನು ಹೊಂದಿರುತ್ತದೆ.

# ಗುರು ರಾಯರ ದರ್ಶನಕ್ಕೆ ಸಹಸ್ರ ಸಂಖ್ಯೆಯಲ್ಲಿ ಭಕ್ತರ ಆಗಮನ



• ಉದಯವಾಹಿನಿ, ಬೆಂಗಳೂರು

ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮ ಪೂಜ್ಯ ಶ್ರೀ1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶ ಅನುಗ್ರಹದೊಂದಿಗೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಗುರುವಾರದ ಪ್ರಯುಕ್ತ ಬೆಳಗ್ಗೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು ಈ ಸಂದರ್ಭದಲ್ಲಿ ಗುರುರಾಯರ ಸನ್ನಿಧಿಗೆ ಆಗಮಿಸಿದ ಪ್ರತಿಯೊಬ್ಬ ಸಹಸ್ರಾರು ಭಕ್ತರಿಗೆ ಅನ್ನದಾನ ಸೇವೆ ನೆರವೇರಿತು ಎಂದು ನಂದ ಕಿಶೋರಾಚಾರ್ಯರು ತಿಳಿಸಿದರು ಸಂಜೆಯ ಕಾರ್ಯಕ್ರಮದಲ್ಲಿ ರಥೋತ್ಸವ ಗಜವಾಹನೋತ್ಸವ ಪಲ್ಲಕ್ಕಿ ಉತ್ಸವ ತೊಟ್ಟಿಲು ಸೇವೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನೃತ್ಯ ದಿಶಾ ಟ್ರಸ್ಟ್ ನಿರ್ದೇಶಕಿ ಡಾ|| ದರ್ಶಿನಿ ಮಂಜುನಾಥ್ ಅವರು ತಮ್ಮ ಹಿರಿಯ ಶಿಷ್ಯೆಯರಾದ ಉಮಾ, ಸ್ನೇಹ ಹಾಗೂ ಸಹನಾ ಅವರ ಸಹಕಾರದೊಂದಿಗೆ ಸುಮಾರು 75 ಮಕ್ಕಳಿಂದ ಭರತನಾಟ್ಯ ಪ್ರದರ್ಶನ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಶ್ರೀ ರಾಘವೇಂದ್ರ ಮಹಾತ್ಮೆ ಧಾರಾವಾಹಿಯ ಗುರು ರಾಯರ ಪಾತ್ರವನ್ನು ಅಭಿನಯಿಸುತ್ತಿರುವ ಶ್ರೇಯಸ್ ಕಶ್ಯಪ್ ರವರು ಗುರು ರಾಯರ ದರ್ಶನ ಪಡೆದುಕೊಂಡು ಫಲ ಮಂತ್ರಾಕ್ಷತೆ ಸ್ವೀಕರಿಸಿದರು.

# ಹಾರ್ಟ್ ಅಟ್ಯಾಕ್ ಜೀವ ಉಳಿಸಬಹುದು ಆದರೆ ಕಾರ್ಡಿಯಾಕ್ ಅರೆಸ್ಟ್!



ಒಂದು ಸಣ್ಣ ಸೂಚನೆ ಕೂಡ ಗೊತ್ತೇ ಆಗದ ಹಾಗೆ, ಇದ್ದಕ್ಕಿದ್ದಂತೆ ಎದೆಯಲ್ಲಿ ನೋವು ಕಾಣಿಸಿಕೊಂಡು ನಮ್ಮಲ್ಲಿ ಎಷ್ಟೋ ಜನರು ಪ್ರಾಣವನ್ನು ಕಳೆದುಕೊಂಡು ಬಿಟ್ಟಿದ್ದಾರೆ. ಇದನ್ನು ಕಾರ್ಡಿಯಾಕ್ ಅರೆಸ್ಟ್ ಅಂದರೆ ಹೃದಯಸ್ತಂಭನ ಎಂದು ಕರೆಯಲಾಗುತ್ತದೆ. ಪ್ರಸ್ತುತ ಇಂದಿನ ಲೇಖನದಲ್ಲಿ ಹೃದಯಘಾತ ಹಾಗೂ ಹೃದಯಸ್ತಂಭನದ ನಡುವಿನ ವ್ಯತ್ಯಾಸವನ್ನ ನೋಡೋಣ

ವೇದಾಂತ ಗ್ರೂಪ್ ಮುಖ್ಯಸ್ಥ ಅನಿಲ್ ಅಗರ್ವಾಲ್ ಅವರ ಪುತ್ರ ಅಗ್ನಿವೇಶ್ ಅಗರ್ವಾಲ್ ಅಮೆರಿಕದಲ್ಲಿ ಹೃದಯಸ್ತಂಭನದಿಂದ ಇಹಲೋಕ ತ್ಯಜಿಸಿ ದ್ದಾರೆ. ಮೂಲಗಳ ಪ್ರಕಾರ ಅಗ್ನಿವೇಶ್ ಅಗರ್ವಾಲ್ ಅವರು ಸ್ಕೈಯಿಂಗ್ ಆಟದಲ್ಲಿ ಮಗ್ನರಾಗಿದ್ದ ಸಂದರ್ಭದಲ್ಲಿ ಆಕಸ್ಮಾತ್ ಆಗಿ ಗಾಯಗೊಂಡಿದ್ದರು ಕೂಡಲೇ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು, ಚೇತರಿಕೆಯ ಹಂತದಲ್ಲಿದ್ದರು ಆದರೆ ವಿಧಿಯ ಆಟ ಬೇರೆಯದ್ದೇ ಆಗಿತ್ತು, ಇದ್ದಕ್ಕಿದಂತೆ ಅವರ ಆರೋಗ್ಯದಲ್ಲಿ ಏರುಪೇರಾದ ಕಾರಣದಿಂದಾಗಿ ದಿಢೀರ್ ಆಗಿ ಹೃದಯಸ್ತಂಭನ ಕಾಣಿಸಿಕೊಂಡು ತಮ್ಮ ಪ್ರಾಣವನ್ನು ಕಳೆದಕೊಂಡರು

**ಹೃದಯಾಘಾತ, ಹೃದಯಸ್ತಂಭನ ಎರಡು ಬೇರೆಬೇರೆ :** ಈ ಘಟನೆಯ ನಂತರ, ಹೃದಯಾಘಾತ, ಹೃದಯಸ್ತಂಭನ ಚರ್ಚೆ ಮತ್ತೊಮ್ಮೆ ತೀವ್ರಗೊಂಡಿದೆ. ಜನರು ಸಾಮಾನ್ಯವಾಗಿ ಹೃದಯಾಘಾತ, ಹೃದಯಸ್ತಂಭನವನ್ನು ಒಂದೇ ಸ್ಥಿತಿ ಎಂದು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ. ಆದರೆ ವಾಸ್ತವದಲ್ಲಿ, ವೈದ್ಯಕೀಯ ಕ್ಷೇತ್ರದಲ್ಲಿ ಇವೆರಡೂ ಸಂಪೂರ್ಣವಾಗಿ ವಿಭಿನ್ನ ಸ್ಥಿತಿಗಳಾಗಿವೆ. ಆದ್ದರಿಂದ, ಹೃದಯಾಘಾತದಿಂದ ಹೃದಯಸ್ತಂಭನ ಹೇಗೆ ಭಿನ್ನವಾಗಿದೆ ಎಂಬುದನ್ನು ಇಂದಿನ ಲೇಖನದಲ್ಲಿ ನೋಡೋಣ

**ಹೃದಯ ಸ್ತಂಭನ ಎಂದರೇನು?:** ಹೃದಯ ಸ್ತಂಭನವು ಹೃದಯದ ವಿದ್ಯುತ್ ವೈಫಲ್ಯವಾಗಿದ್ದು, ಇದು ವಿದ್ಯುತ್ ಸಂಕೇತಗಳನ್ನು ಕಳುಹಿಸುವ ಹೃದಯದ ನೈಸರ್ಗಿಕ ಪೇಸ್‌ಮೇಕರ್ ಆಗಿದೆ.

ಈ ವಿದ್ಯುತ್ ಸಂಕೇತಗಳು ಇದ್ದಕ್ಕಿದ್ದಂತೆ ಹದಗೆಟ್ಟಾಗ ಅಥವಾ ಸಂಪೂರ್ಣವಾಗಿ ನಿಂತಾಗ, ಹೃದಯ ಬಡಿತ ನಿಲ್ಲುತ್ತದೆ. ಈ ಸಂದರ್ಭದಲ್ಲಿ, ಒಬ್ಬ ವ್ಯಕ್ತಿಯು ಇದ್ದಕ್ಕಿದ್ದಂತೆ ಪ್ರಜ್ಞೆ ತಪ್ಪಬಹುದು ಮತ್ತು ಉಸಿರಾಟವನ್ನು ನಿಲ್ಲಿಸಬಹುದು. ಅದಕ್ಕಾಗಿಯೇ ಇದನ್ನು ಹಠಾತ್ ಹೃದಯ ಸ್ತಂಭನ ಎಂದೂ ಕರೆಯುತ್ತಾರೆ. ಹೃದಯ ಸ್ತಂಭನದ ಪ್ರಮುಖ ಲಕ್ಷಣಗಳು ಇದ್ದಕ್ಕಿದಂತೆ ತಲೆಸುತ್ತು ಬರುವುದು, ಆಯಾಸ ಸುಸ್ತು ಕಾಣಿಸಿಕೊಳ್ಳುವುದು, ಎದೆಯ ಭಾಗದಲ್ಲಿ ಬಿಗಿತ ಕಂಡು ಬರುವುದು, ಸಣ್ಣದಾಗಿ ಮೈ ಬೆವರುವುದು, ಹೃದಯ ಬಡಿತದಲ್ಲಿ ಏರುಪೇರಾ ಗುವುದು, ಇವೆಲ್ಲಾ ಲಕ್ಷಣಗಳು ಸಡನ್ ಕಾರ್ಡಿಯಾಕ್ ಅರೆಸ್ಟ್ ಅಂದರೆ ಹೃದಯ ಸ್ತಂಭನದ ಪ್ರಮುಖ ರೋಗಲಕ್ಷಣಗಳು ಎಂದು ಹೇಳಬಹುದು.

**ಕಾರ್ಡಿಯಾಕ್ ಅರೆಸ್ಟ್ ಹಾಗೂ ಹೃದಯಾಘಾತದ ನಡುವೆ ವ್ಯತ್ಯಾಸಗಳೇನು? :** ಹೃದಯಾಘಾತ ಮತ್ತು ಹೃದಯ ಸ್ತಂಭನದ ನಡುವಿನ ದೊಡ್ಡ ವ್ಯತ್ಯಾಸವೆಂದರೆ ಹೃದಯಾಘಾತದಲ್ಲಿ, ಹೃದಯಕ್ಕೆ ರಕ್ತ ಪೂರೈಕೆಯಲ್ಲಿ ಅಡಚಣೆ ಉಂಟಾಗುತ್ತದೆ. ಇದರರ್ಥ ಹೃದಯಕ್ಕೆ ಸಾಕಷ್ಟು ರಕ್ತ ಪೂರೈಕೆಯಾಗುವುದಿಲ್ಲ, ಆದರೆ ಹೃದಯ ಬಡಿಯುತ್ತಲೇ ಇರುತ್ತದೆ ಮತ್ತು ರೋಗಿಯು ಆಗಾಗ್ಗೆ ಪ್ರಜ್ಞಾಪೂರ್ವಕವಾಗಿರುತ್ತಾನೆ. ಅದೇ ಕಾರ್ಡಿಯಾಕ್ ಅರೆಸ್ಟ್ ಅಂದರೆ ಹೃದಯಸ್ತಂಭನದ ಕಾಣಿಸಿಕೊಂಡ ಸಂದರ್ಭದಲ್ಲಿ, ಹೃದಯವನ್ನು ಚಾಲನೆ ಮಾಡುವ ವಿದ್ಯುತ್ ಪ್ರಚೋದನೆಗಳು ನಿಂತು ಹೃದಯವು ಸಂಪೂರ್ಣವಾಗಿ ನಿಲ್ಲುತ್ತದೆ. ರೋಗಿಯು ಸೆಕೆಂಡುಗಳಲ್ಲಿ ಪ್ರಜ್ಞಾಹೀನನಾಗುತ್ತಾನೆ ಮತ್ತು ತಕ್ಷಣದ ಚಿಕಿತ್ಸೆ ಪಡೆಯದಿದ್ದರೆ, ಜೀವಕ್ಕೆ ಅಪಾಯವು ತುಂಬಾ ಹೆಚ್ಚಾಗಿರುತ್ತದೆ.



**ಹೃದಯ ಸ್ತಂಭನ ಏಕೆ ಸಂಭವಿಸುತ್ತದೆ:** ವೈದ್ಯರ ಪ್ರಕಾರ, ಹೃದಯ ಸ್ತಂಭನವು ಯಾವಾಗಲೂ ಮೊದಲೇ ಇರುವ ಹೃದಯ ಕಾಯಿಲೆಯಿಂದ ಉಂಟಾಗುವುದಿಲ್ಲ. ಇದು ಇದ್ದಕ್ಕಿದ್ದಂತೆಯೂ ಸಂಭವಿಸ ಬಹುದು. ಕೆಲವೊಮ್ಮೆ, ಹೃದಯ ಸ್ತಂಭನವು ಅಸಹಜ ಹೃದಯ ಬಡಿತದಿಂದ ಉಂಟಾಗ ಬಹುದು, ಇದನ್ನು ಆರ್ಹೆತ್ಮಿಯಾ ಎಂದು ಕರೆಯಲಾಗುತ್ತದೆ. ಹೃದಯದ ಕೆಳಭಾಗವು ರಕ್ತವನ್ನು ಪಂಪ್ ಮಾಡುವ ಬದಲು ನಡುಗುವ ವೆಂಟ್ರಿಕ್ಯುಲರ್ ಫೈಬ್ರಿಲೇಷನ್ ಸಹ ಹೃದಯ ಸ್ತಂಭನಕ್ಕೆ ಕಾರಣವಾಗಬಹುದು. ಹೃದಯ ಸ್ನಾಯುಗಳಿಗೆ ಸಂಬಂಧಿಸಿದ ಕಾಯಿಲೆಗಳು ಸಹ ಹೃದಯ ಸ್ತಂಭನಕ್ಕೆ ಕಾರಣವಾಗಬಹುದು.

ಇವುಗಳ ಹೊರತಾಗಿ, ಹೃದಯದ ರಕ್ತನಾಳಗಳಲ್ಲಿನ ಅಡಚಣೆಗಳು ಅಥವಾ ದೀರ್ಘಕಾಲದ ಪರಿಧಮನಿಯ ಅಪಧಮನಿ ಕಾಯಿ ಲೆಯು ಸಹ ಹೃದಯ ಸ್ತಂಭನಕ್ಕೆ ಕಾರಣವಾಗಬಹುದು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ಧ್ಯಾನ ನೀವು ಒಳ್ಳೆಯ ದೇಹರಚನೆ ಕಾಯ್ದುಕೊಳ್ಳಲು ಮತ್ತು ಮಾನಸಿಕವಾಗಿ ಸದೃಢವಾಗಿರಲು ಸಹಾಯ ಮಾಡುತ್ತದೆ. ಮಕ್ಕಳ ಕಾರಣದಿಂದ ಆರ್ಥಿಕ ಲಾಭಹವನ್ನು ಪಡೆಯುವ ಸಾಧ್ಯತೆ ಕಂಡುಬರುತ್ತಿದೆ.

**ವೃಷಭ** ನಿಮ್ಮ ಯಾವುದೇ ಹಳೆಯ ಸ್ನೇಹಿತ ಇಂದು ವ್ಯಾಪಾರದಲ್ಲಿ ಲಾಭ ಗಳಿಸಲು ನಿಮಗೆ ಸಲಹೆ ನೀಡಬಹುದು, ನೀವು ಈ ಸಲಹೆಯನ್ನು ಅನುಸರಿಸಿದರೆ, ನೀವು ಖಂಡಿತವಾಗಿಯೂ ಹಣವನ್ನು ಗಳಿಸುವಿರಿ.

**ಮಿಥುನ** ಕೆಲವು ಗಂಭೀರ ತೊಂದರೆಗಳನ್ನು ಎದುರಿಸಲು ಸಾಧ್ಯತೆಯಿರುವುದರಿಂದ ನಿಮ್ಮನ್ನು ನಿಯಂತ್ರಿಸಿಕೊಳ್ಳಿ. ವಿಶೇಷವಾಗಿ ಸಣ್ಣ ಹುಚ್ಚಲ್ಲದೇ ಬೇರೇನೂ ಅಲ್ಲದ ನಿಮ್ಮ ಕೋಪವನ್ನು ನಿಯಂತ್ರಿಸಿಕೊಳ್ಳಿ.

**ಕರ್ಕಾಟಕ** ಕೆಲವು ಅನಿವಾರ್ಯ ಸಂದರ್ಭಗಳು ನಿಮಗೆ ಅಹಿತಕರವೆನಿಸಬಹುದು. ಆದರೆ ನೀವು ನಿಮ್ಮ ಸಮತೋಲನ ಕಾಯ್ದುಕೊಳ್ಳಬೇಕು ಮತ್ತು ಪರಿಸ್ಥಿತಿಯನ್ನು ನಿಭಾಯಿಸಲು ತಕ್ಷಣವೇ ಪ್ರತಿಕ್ರಿಯಿಸಬಾರದು.

**ಸಿಂಹ** ಬಸುರಿಯು ನೆಲದ ಮೇಲೆ ನಡೆದುಕೊಂಡು ಹೋಗುವಾಗ ವಿಶೇಷ ಕಾಳಜಿ ವಹಿಸಬೇಕು. ಹದೀರ್ಘಕಾಲದಿಂದ ಬಾಕಿಯಿರುವ ಬಿಲ್ಲುಗಳನ್ನು ಪಾವತಿಸುವುದನ್ನು ಅನುಕೂಲಕರವಾಗಿಸುತ್ತದೆ.

**ಕನ್ಯಾ** ವಿಧಿಯನ್ನು ಆಧರಿಸದಿರಿ ಮತ್ತು ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದ್ದು ಇದು ಎಂದಿಗೂ ತಾನಾಗಿಯೇ ನಿಮ್ಮ ಬಳಿ ಬರುವುದಿಲ್ಲ.

**ತುಲಾ** ವಿಜಯೋತ್ಸವವು ನಿಮಗೆ ಪ್ರಚಂಡ ಸಂತೋಷವನ್ನು ನೀಡುತ್ತದೆ. ನಿಮ್ಮ ಸಂತೋಷವನ್ನು ಅನುಭವಿಸಲು ನೀವಿದನ್ನು ನಿಮ್ಮ ಸ್ನೇಹಿತರ ಜೊತೆ ಹಂಚಿಕೊಳ್ಳಬಹುದು.

**ವೃಶ್ಚಿಕ** ಅದೃಷ್ಟವನ್ನು ಅವಲಂಬಿಸಬೇಡಿ, ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದೆ. ಆರ್ಥಿಕವಾಗಿ ಇಂದು ನೀವು ಸಾಕಷ್ಟು ಬಲವಾಗಿ ಕಾಣುವಿರಿ.

**ಧನಸ್ಸು** ನಿಮ್ಮ ವೈವಾಹಿಕ ಜೀವನದಲ್ಲಿ ಅನೇಕ ಏರಿಳಿತಗಳ ನಂತರ, ಪರಸ್ಪರರಿಗೆ ನಿಮ್ಮ ಪ್ರೀತಿಯನ್ನು ಆಸ್ವಾದಿಸುವ ಸುವರ್ಣ ದಿನ. ಅದ್ಭುತ ದಿನ, ಚಲನಚಿತ್ರ, ಪಾರ್ಟಿ ಮತ್ತು ಸ್ನೇಹಿತರೊಂದಿಗೆ ಸುತ್ತಾಡುವ ಸಾಧ್ಯತೆ ಇದೆ.

**ಮಕರ** ನಿಮ್ಮ ಸಂವಹನ ತಂತ್ರಗಳು ಮತ್ತು ಕೆಲಸದ ಕೌಶಲಗಳು ಪರಿಣಾಮಕಾರಿಯಾಗಿರುತ್ತವೆ. ನಿಮ್ಮ ಸಂಗಾತಿಯು ನಿಮ್ಮನ್ನು ಸಂತೋಷಗೊಳಿಸುವಲ್ಲಿ ಪ್ರಯತ್ನಗಳನ್ನು ಮಾಡುತ್ತಾರೆ.

**ಕುಂಭ** ನಿಮ್ಮ ಜ್ಞಾನದಾಹ ನಿಮಗೆ ಹೊಸ ಸ್ನೇಹಿತರನ್ನು ಪಡೆಯಲು ಸಹಾಯ ಮಾಡುತ್ತದೆ. ನಿಮ್ಮ ಕನಸುಗಳು ಹಾಗೂ ವಾಸ್ತವವು ಪ್ರೀತಿಯ ಭಾವಪರವಶತೆಯಲ್ಲಿ ಇಂದು ಸೇರಿಹೋಗುತ್ತವೆ.

**ಮೀನ** ಕೆಲವು ಬಿಕ್ಕಟ್ಟುಗಳು ಮತ್ತು ಭಿನ್ನಾಭಿಪ್ರಾಯಗಳು ನಿಮಗೆ ಕಿರಿಕಿರಿ ಹಾಗೂ ಆತಂಕವನ್ನು ತರಬಹುದು. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ.

### ವೈದ್ಯಕೀಯ ಕಾಲೇಜಿನ ಕೊಡುಗೆ ನೀಡಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯ ಮೊದಲ ಬಾರಿಗೆ ಜಿಲ್ಲೆಗೆ ಆಗಮನ

# ಜಿಲ್ಲೆಯ ಜನತೆ ಪರವಾಗಿ ಸಿ.ಎಂ. ಸಿದ್ದುಗೆ ಕೃತಜ್ಞತೆ: ಶಿವಾನಂದ ಪಾಟೀಲ

• **ಉದಯವಾಹಿನಿ ವಿಜಯಪುರ**

ರಾಜ್ಯದ ಸುದೀರ್ಘ ಆಡಳಿತ ನಡೆಸಿದ ಮುಖ್ಯಮಂತ್ರಿ ಎಂಬ ದಾಖಲೆ ಮಾಡಿದ ಬಳಿಕ ಜಿಲ್ಲೆಗೆ ವೈದ್ಯಕೀಯ ಕಾಲೇಜಿನ ಕೊಡುಗೆ ನೀಡಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯ ಮೊದಲ ಬಾರಿಗೆ ಜಿಲ್ಲೆಗೆ ಆಗಮಿಸುತ್ತಿದ್ದಾರೆ. ಹೀಗಾಗಿ ಮುಖ್ಯಮಂತ್ರಿಗಳನ್ನು ಜಿಲ್ಲೆಯ ಜನತೆಯ ಪರವಾಗಿ ಹೃತ್ಪೂರ್ವಕ ಸ್ವಾಗಿತಿಸಿ, ಕೃತಜ್ಞತೆ ಸಲ್ಲಿಸುವುದಾಗಿ ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಹೇಳಿದರು.


**ವೈದ್ಯಕೀಯ ಕಾಲೇಜಿನ ಘೋಷಣೆ**

ಗುರುವಾರ ನಗರದ ಡಿಸಿಸಿ ಬ್ಯಾಂಕ್ ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸುದೀರ್ಘ ಕಾಲದವರೆಗೆ ಮುಖ್ಯಮಂತ್ರಿ ಸ್ಥಾನ ಅಲಂಕರಿಸಿದ ಸಾಧನೆ ಮಾಡಿದ್ದು, ಇದಕ್ಕಾಗಿ ಸಿದ್ಧರಾಮಯ್ಯ ಅವರನ್ನು ಅಭಿನಂದಿಸುತ್ತೇನೆ. ಶುಕ್ರವಾರ ಜಿಲ್ಲೆಗೆ ಆಗಮಿಸಲಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಹಾವೇರಿ ಕಾರ್ಯಕ್ರಮದಲ್ಲಿ ಈಗಾಗಲೇ ಘೋಷಿಸಿರುವ ವಿಜಯಪುರ ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜಿನ ಘೋಷಣೆಯನ್ನು ಪುನರುಚ್ಚರಿಸಲಿ ಎಂದು ಮನವಿ ಮಾಡಿದರು.

ಹೋರಾಟಗಾರರಿಗೆ ನಾನು ಬೆಂಬಲ ನೀಡಿದ್ದು ನಿಜ, ಹೀಗಾಗಿ ಹೋರಾಟದ ಸಂದರ್ಭದಲ್ಲಿ ಅಚಾತುರ್ಯ ಆಗಿದ್ದರೆ ಅದಕ್ಕೆ ವಿಷಾದಿಸುತ್ತೇನೆ. ಹೋರಾಟ ಮಾಡುವುದು ಎಲ್ಲರ ಹಕ್ಕು, ಅದನ್ನು ಯಾರೂ ಕಿತ್ತುಕೊಳ್ಳಲಾಗದು. ಹೋರಾಟಗಾರರ ಮೇಲೆ ದಾಖಲಿಸಿರುವ ಪ್ರಕರಣ ಹಿಂಪಡೆಯುವ ಕುರಿತು ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಮನವಿ ಮಾಡುತ್ತೇನೆ ಎಂದು ಸ್ಪಷ್ಟಪಡಿಸಿದರು. ನಾನು ಆರೋಗ್ಯ ಸಚಿವನಾಗಿದ್ದ ಸಂದರ್ಭದಲ್ಲೇ ವಿಜಯಪುರ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭಕ್ಕೆ ಬೇಕಾದ ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದೆ. ಆದರೆ ಅಷ್ಟರಲ್ಲಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಸರ್ಕಾರ ಪತನವಾಯ್ತು ಎಂದರು.

ಆದರೆ ನಂತರ ಬಂದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಕಾಲೇಜು ಸ್ಥಾಪನೆಗೆ ನಿರ್ಧರಿಸಿತ್ತು. ಆದರೆ ಸಿದ್ಧರಾಮಯ್ಯ ಅವರು 2014-15 ನೇ ಸಾಲಿನ ಬಜೆಟ್‌ನಲ್ಲಿ ಪ್ರತಿ ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜು ಘೋಷಿಸಿದ್ದರು. ಇದೀಗ ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಘೋಷಿಸಿದ್ದು, ಅದಕ್ಕಾಗಿ ಮುಖ್ಯಮಂತ್ರಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಮುಖ್ಯಮಂತ್ರಿಗಳು ಸರ್ಕಾರಿ ಕಾಲೇಜು ಘೋಷಣೆ ಕುರಿತು ಅನುಮಾನ ಬೇಡ, ಬರುವ ಬಜೆಟ್ ನಲ್ಲಿ ಅನುದಾನದ ಅವಕಾಶ ಸಿಗಲಿದೆ ಎಂದರು. ಹಾವೇರಿಯಲ್ಲಿ ಕೇವಲ 56 ಎಕರೆ ಜಮೀನಿದ್ದು, ಯಾವುದೇ ಸೌಲಭ್ಯ ಇರಲಿಲ್ಲ. ಆದರೆ ನಾನು ಆ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡ ಬಳಿಕ ಸರ್ಕಾರಿ ವೈದ್ಯಕೀಯ ಕಾಲೇಜಿನ ಕಟ್ಟಡ ಪೂರ್ಣಗೊಳಿಸಿದ್ದೇನೆ. ಕಳೆದ ಲೋಕಸಭಾ ಚುನಾವಣೆ ಪೂರ್ವದಲ್ಲೇ ಬಹುತೇಕ ಕಾಮಗಾರಿ ಮುಗಿದಿತ್ತು, ಆದರೆ ಸಂಸದ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಸರ್ಕಾರದ ಪಾಲೂ ಇರುವ ಕಾರಣ ಕೇಂದ್ರದ ಸಚಿವರು ಪಾಲ್ಗೊಳ್ಳಲು ಅವಕಾಶ ಆಗುವಂತೆ ಕಾರ್ಯಕ್ರಮ ಮಾಡೋಣ ಎಂದು ಮನವಿ ಮಾಡಿದ್ದರು. ಹೀಗಾಗಿ ಇದೀಗ ಲೋಕಾರ್ಪಣೆ ಮಾಡಿದ್ದೇವೆ ಎಂದು ವಿವರಿಸಿದರು.



#### ನೂರು ಕೋಟಿ ರೂ. ಸಾಕು

**4 ಬೋಧನೆ ಕೋಣೆ, ಒಂದು ಆಡಿಟೋರಿಯಂ, ಪರೀಕ್ಷಾ ಘಟಕ ಸ್ಥಾಪಿಸಿದರೆ 250 ಎಂಬಿಬಿಎಸ್ ಸೀಟ್‌ಗಳೊಂದಿಗೆ ವೈದ್ಯಕೀಯ ಕಾಲೇಜು ಸ್ಥಾಪಿಸಬಹುದು. ಹೊಸದಾಗಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ 6-7 ನೂರು ಕೋಟಿ ರೂ. ಅನುದಾನ ಬೇಕು. ವಿಜಯಪುರ ಜಿಲ್ಲೆಯಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳು ಈಗಾಗಲೆ ಇದ್ದು, ಕೇವಲ ನೂರು ಕೋಟಿ ರೂ. ಸಾಕು ಎಂದು ತಮ್ಮ ಕಾಲಾವಧಿಯಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಇರುವ ಸುಲಭ ಅವಕಾಶಗಳನ್ನು ವಿವರಿಸಿದರು.**

**ಪತ್ರಕರ್ತರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಸಂಸದ ರಮೇಶ ಜಿಗಜಿಣಗಿ ಅವರು ಕೇಂದ್ರದಿಂದ ಏಮ್ಸ್ ಕಾಲೇಜು ಮಂಜೂರು ಮಾಡಿಸಿದರೆ ಅಭಿನಂದಿಸುತ್ತೇನೆ. ಪಕ್ಕದ ಕಲಬುರಗಿ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜೂ ಇದೆ, ಏಮ್ಸ್ ಆಸ್ಪತ್ರೆಯ ಸೌಲಭ್ಯವೂ ಇದೆ. ನಮ್ಮ ಸಂಸದರು ಈ ನಿಟ್ಟಿನಲ್ಲಿ ಕೇಂದ್ರದಿಂದ ಜಿಲ್ಲೆಗೆ ಸೌಲಭ್ಯ ತರಲಿ. ಎಲ್ಲಕ್ಕಿಂತ ಮುಖ್ಯವಾಗಿ ಜಿಲ್ಲೆಯಲ್ಲಿ ಗುಂಡಿ ಬಿದ್ದಿರುವ ರಾಷ್ಟ್ರೀಯ ಹೆದ್ದಾರಿಗಳ ಗುಂಡಿ ಮುಚ್ಚುವ ಕೆಲಸವನ್ನು ತುರ್ತಾಗಿ ಮಾಡಲಿ ಎಂದು ನಿಮ್ಮ ಮೂಲಕ ಮನವಿ ಮಾಡುತ್ತೇನೆ**

**-ಶಿವಾನಂದ ಪಾಟೀಲ,ಸಚಿವ**

ಆದರೆ ವಿಜಯಪುರ ಜಿಲ್ಲೆಯಲ್ಲಿ 153 ಎಕರೆ ಜಮೀನಿದ್ದು, ನಾನು ಆರೋಗ್ಯ ಸಚಿವನಾಗಿದ್ದಾಗ 150 ಹಾಸಿಗೆಯ ತಾಯಿ ಮಕ್ಕಳ ಆಸ್ಪತ್ರೆ, ಟ್ರಾಮಾ ಸೆಂಟರ್ ಸೇರಿದಂತೆ ಹಲವು ಸೌಲಭ್ಯ ಕಲ್ಪಿಸಿದೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಾಡಿದ್ದಲ್ಲದೇ ಕ್ಯಾನ್ಸರ್ ಚಿಕಿತ್ಸಾ ಘಟಕ ಸ್ಥಾಪಿಸಿದ್ದೇನೆ. ಈ ಕಾಮಗಾರಿ ಇನ್ನಷ್ಟೇ ಪೂರ್ಣಗೊಳ್ಳಬೇಕಿದೆ. ಇಷ್ಟೆಲ್ಲ ಸೌಲಭ್ಯಗಳನ್ನು ಹೊಂದಿರುವ ವಿಜಯಪುರ ಜಿಲ್ಲಾ ಆಸ್ಪತ್ರೆ ಪರಿಸರದಲ್ಲಿ ಸರ್ಕಾರ ಕೇವಲ 100 ಕೋಟಿ ರೂ. ವೆಚ್ಚದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಲು ಅವಕಾಶವಿದೆ ಎಂದರು.

## ಕಲಿಕಾ ಹಬ್ಬದಿಂದ ಮಕ್ಕಳಲ್ಲಿ ಕಲಿಕಾ ಉತ್ಸಾಹ: ಸುನೀಲ ನಾಯಕ



ಉದಯವಾಹಿನಿ ಚಿತ್ರ

• **ಉದಯವಾಹಿನಿ ಕೊಲ್ಹಾರ**

ಪಟ್ಟಣದ ಕೆ ಜಿ ಎಸ್ ಶಾಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ, ಬಸವನ ಬಾಗೇವಾಡಿ ಹಾಗೂ ಸಮೂಹ ಸಂಪನ್ಮೂಲ ಕೇಂದ್ರ ಸಹಯೋಗದಲ್ಲಿ ಮಕ್ಕಳ ಕಲಿಕಾ ಹಬ್ಬದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪಟ್ಟಣ ಪಂಚಾಯಿತಿ ಅಧ್ಯಕ್ಷ ಚನ್ನಮಲ್ಲಪ್ಪ ಗಿಡ್ಡಪ್ಪಗೋಳ ಕಲಿಕಾ ಹಬ್ಬದ ಜಾತಾಗೆ ಎತ್ತಿನ ಬಂಡಿಗಳಿಗೆ ಚಾಲನೆ ನೀಡಿದರು. ಕಲಿಕಾ ಹಬ್ಬದ ಕಾರ್ಯಕ್ರಮವನ್ನು ಎಸ್ಡಿಎಂಸಿ ಅಧ್ಯಕ್ಷೆ ರೂಪಾ ಗಿಡ್ಡಪ್ಪಗೋಳ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಕ್ಷೇತ್ರ ಸಮನ್ವಯಾಧಿಕಾರಿ ಸುನೀಲ್ ನಾಯಕ ಮಾತನಾಡಿ ಕಲಿಕಾ ಹಬ್ಬದ ಉದ್ದೇಶಗಳಾದ ಮಕ್ಕಳಲ್ಲಿ ಅಡಿಪಾಯ ಸಾಕ್ಷರತೆ,ಭಾವನಾತ್ಮಕ ಬೆಳವಣಿಗೆಗೆ ಪೂರಕವಾದ ಕಲೆ, ಸಂಗೀತ ಮತ್ತು ಆಟಗಳ ಮೂಲಕ ಮಕ್ಕಳು ಪರಸ್ಪರ ಕಲಿಕೆಯ ಅನುಭವಗಳನ್ನು ಹಂಚಿಕೊಳ್ಳುವಂತೆ ಪ್ರೋತ್ಸಾಹಿಸುವುದು.ಸಮುದಾಯದ ಭಾಗವಹಿಸುವಿಕೆ: ಪೋಷಕರು,ಶಿಕ್ಷಕರು ಮತ್ತು ಸಮುದಾಯದ ಸದಸ್ಯರನ್ನು ಶಿಕ್ಷಣ ಪ್ರಕ್ರಿಯೆಯಲ್ಲಿ ತೊಡಗಿಸುವುದು ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಶಿಕ್ಷಕ ಸಂಘದ ಜಿಲ್ಲಾ ಉಪಾಧ್ಯಕ್ಷ ಅಶೋಕ ಗಿಡ್ಡಪ್ಪಗೋಳ ಮಾತನಾಡಿ ಕಲಿಕಾ ಹಬ್ಬ ಇದರಿಂದ ಮಕ್ಕಳಿಗೆ ಆನಂದದಾಯಕ ಕಲಿಕೆಯ ಕೌಶಲ್ಯಗಳನ್ನು ನೀಡಿ, ಸೃಜನಶೀಲತೆ ಮತ್ತು ಸಹಯೋಗವನ್ನು ಬೆಳೆಸುವ ಒಂದು ಶೈಕ್ಷಣಿಕ ಉತ್ತಮ ಕಾರ್ಯಕ್ರಮ ಇದಾಗಿದೆ ಎಂದು ಹೇಳಿದರು. ಸಮೂಹ ಸಂಪನ್ಮೂಲ ವ್ಯಕ್ತಿ ಎಸ್ ಎನ್ ತಡಲಗಿ ಮಾತನಾಡಿ,ಇಂತಹ ಕಲಾಜಾತಾಗಳು, ಅಕ್ಷರ ಬಂಡಿಗಳು, ಮಕ್ಕಳ ನೃತ್ಯಗಳು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಸಾಗುವ ಸಂದರ್ಭದಲ್ಲಿ ಸಚಿವ ಶಿವಾನಂದ ಎಸ್ ಪಾಟೀಲರು ಮಕ್ಕಳ ನೃತ್ಯ ಕಂಡು ಇಂತಹ ಮಕ್ಕಳು ನಮ್ಮ ಸರ್ಕಾರಿ ಶಾಲೆ ಮಕ್ಕಳು ಎಂದು ಅಭಿಮಾನ ವ್ಯಕ್ತಪಡಿಸಿದ್ದು ನೋಡಿದರೆ ತುಂಬಾ ಸಂತೋಷ ಎಂದು ಹೇಳಿದರು.

**ಈ ಕಲಿಕಾ ಹಬ್ಬದ ಜಾತಾದಲ್ಲಿ ನಮ್ಮ ಸರ್ಕಾರಿ ಶಾಲೆಯ ಹೆಣ್ಣು ಮಕ್ಕಳ ನೃತ್ಯಗಳು ನೋಡಿದರೆ ಯಾವ ಶಾಲೆಗಳಿಗಿಂತ ಕಡಿಮೆಯಿಲ್ಲಾ ಎಂಬುದು ನಮ್ಮ ಹೆಮ್ಮೆ -ವಸಂತ ರಾಠೋಡ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಸವನ ಬಾಗೇವಾಡಿ.**

**ವಿಶೇಷತೆ:**ಎತ್ತಿನ ಬಂಡಿಯಲ್ಲಿ ವಿವಿಧ ವೇಷ ಭೂಷಣ ಧರಿಸಿದ ಮಕ್ಕಳ ಮೆರವಣಿಗೆ ಹಾಗೂ ವಿವಿಧ ಕಲಾತಂಡಗಳ ನೃತ್ಯಗಳು ನೋಡುಗರ ಕಣ್ಮನ ಸೆಳೆದವು.

ಈ ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ವಸಂತ ರಾಠೋಡ, ಶಿಕ್ಷಣ ಸಂಯೋಜಕ ವ್ಹಿ ಎಚ್ ಪುರೋಹಿತ,ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಬಸವರಾಜ ಅವಟಿ,ಉಪಾಧ್ಯಕ್ಷ ಪುಂಡಲೀಕ ಬೆಳ್ಳುಬ್ಬಿ, ಮಾರುತಿ ಪವಾರ, ಹೊನ್ನಪ್ಪ ಹಡಪದ,ಕಾಶೀಬಾಯಿ ಬಾಲಗೊಂಡ, ಹಸೀನಾಬೆಗಂ ಕಂಕರಫೀರ,ಎಲ್ ಆರ್ ಕೆಲವಡಿ, ಆಯ್ ಎಂ ಬಾಟಿ,ಟಿ ಪಿ ದಳವಾಯಿ, ಎಸ್ ಎಸ್ ಜಂಗಮಶೆಟ್ಟಿ, ಗೀತಾ ಕುಲಕರ್ಣಿ,ಜಲಜಾ ಹೊಸಮನಿ,ಎಸ್ ಎಂ ಹಂಡಿ, ಕೃಷ್ಣಾ ರಜಪೂತ ವಿವಿಧ ಶಾಲೆಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪೋಷಕರು ಭಾಗವಹಿಸಿದ್ದರು.

## ಸಂಕಷ್ಟದ ಸಮಯದಲ್ಲಿ ಪೊಲೀಸರ ನೆರವು ಪಡೆಯಿರಿ: ಡಿವೈಎಸ್ಪಿ ಗೀತಾ

• **ಉದಯವಾಹಿನಿ ಶಿರಸಿ**

ಮಹಿಳೆಯರ ಸುರಕ್ಷತೆಗಾಗಿ ಕಾನೂನಿನಲ್ಲಿ ಸಾಕಷ್ಟು ಅವಕಾಶಗಳಿದ್ದು, ವಿದ್ಯಾರ್ಥಿನಿಯರು ಯಾವುದೇ ಭಯವಿಲ್ಲದೆ ಸಂಕಷ್ಟದ ಸಮಯದಲ್ಲಿ ಪೊಲೀಸ್ ಇಲಾಖೆಯ ನೆರವು ಪಡೆಯಬೇಕು' ಎಂದು ಶಿರಸಿ ಡಿವೈಎಸ್ಪಿ ಗೀತಾ ಪಾಟೀಲ ಹೇಳಿದರು. ನಗರದ ಉಡುಪಿ ಎಕ್ಸಲೆನ್ಸ್ ಅಕಾಡೆಮಿ ಹಾಗೂ ಶಿರಸಿ ನಗರ ಪೊಲೀಸ್ ಠಾಣೆಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಮಹಿಳಾ ಸುರಕ್ಷತಾ ಜಾಗೃತಿ ಜಾಥಾದ ನಂತರ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಅವರು ಮಾತನಾಡಿದರು.

ಕಾನೂನಿನ ಬಗ್ಗೆ ಅರಿವಿದ್ದಾಗ ಮಾತ್ರ ಅಪರಾಧಗಳನ್ನು ತಡೆಯಲು ಸಾಧ್ಯ. ಠಾಣೆಯ ಕಾರ್ಯವೈಖರಿಯನ್ನು ತಿಳಿದುಕೊಳ್ಳುವುದು ಮತ್ತು ತುರ್ತು ಸಹಾಯವಾಣಿಗಳ ಬಳಕೆಯ ಬಗ್ಗೆ ಜಾಗೃತರಾಗಿರುವುದು ಇಂದಿನ ಕಾಲಘಟ್ಟದಲ್ಲಿ ಅತ್ಯಗತ್ಯ ಎಂದು ತಿಳಿಸಿದರು.

ಇದಕ್ಕೂ ಮುನ್ನ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಮಹಿಳಾ ಸುರಕ್ಷತೆಯ ಘೋಷಣೆಗಳಿರುವ ಭಿತ್ತಿಫಲಕಗಳನ್ನು ಹಿಡಿದು ನಗರದ ಶಿವಾಜಿ ಚೌಕದಿಂದ ಐದುರಸ್ತೆ ಮಾರ್ಗವಾಗಿ ಪೊಲೀಸ್ ಠಾಣೆಯವರೆಗೆ ಬೃಹತ್ ಜಾಥಾ ನಡೆಸಿದರು. ಶಿರಸಿ ನಗರ ಠಾಣೆಯ ಪಿಎಸ್‌ಐ ನಾಗಪ್ಪ ಬಿ., ಕಾಲೇಜಿನ ಪ್ರಾಚಾರ್ಯ ರೋಷನ ಗೌಡ ಹಾಗೂ ಕಾಲೇಜಿನ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಗೆ ಪೊಲೀಸ್ ಠಾಣೆಯ ಒಳಗಿನ ಚಟುವಟಿಕೆಗಳು ಹೇಗೆ ನಡೆಯುತ್ತವೆ. ಎಂಬುದನ್ನು ಇದೇ ವೇಳೆ ಪ್ರತ್ಯಕ್ಷವಾಗಿ ತೋರಿಸಿಕೊಡಲಾಯಿತು.

## ಇಂದು ಶ್ರೀ ಶ್ರೀನಿವಾಸ ಕಲ್ಯಾಣ ಮಹೋತ್ಸವ

• **ಉದಯವಾಹಿನಿ ಬಸವನಬಾಗೇವಾಡಿ**




ಪಟ್ಟಣದಲ್ಲಿ ಇಂದು ಶನಿವಾರ ಪ್ರಥಮ ಬಾರಿಗೆ ಶ್ರೀ ಬಸವೇಶ್ವರ ಸೇವಾ ಸಮಿತಿ ಹಾಗೂ ಯೋಧಾ ಪೂರ್ವ ಪ್ರಾಥಮಿಕ ಶಾಲೆ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಶ್ರೀ ಶ್ರೀನಿವಾಸ ಕಲ್ಯಾಣ ಮಹೋತ್ಸವ ಆಯೋಜಿಸಲಾಗಿದೆ. ಮಧ್ಯಾಹ್ನ 1 ಗಂಟೆಯಿಂದ 3 ಗಂಟೆವರೆಗೂ ಮುತ್ತೈದೆ ಉಡಿ ತುಂಬುವುದು, 3 ಗಂಟೆಗೆ ಭವ್ಯ ಮೆರವಣಿಗೆ ಜರುಗುವುದು. ನಂತರ ಪಟ್ಟಣದ ಬಸವ ಭವನದಲ್ಲಿ ಜರುಗುವ ಧಾರ್ಮಿಕ ಕಾರ್ಯಕ್ರಮದ ಸಾನಿಧ್ಯವನ್ನು ಪಟ್ಟಣದ ಸಿದ್ದಲಿಂಗ ಸ್ವಾಮೀಜಿ, ಶಿವಪ್ರಕಾಶ ಸ್ವಾಮೀಜಿ ವಹಿಸುವರು. ಉದ್ಘಾಟಕರಾಗಿ ಸಚಿವ ಶಿವಾನಂದ ಎಸ್ ಪಾಟೀಲ, ಅಧ್ಯಕತೆಯನ್ನು ಪಿ. ಎಲ್. ಡಿ ಬ್ಯಾಂಕ್ ಅಧ್ಯಕ್ಷ ಈರಣ್ಣ. ಚ. ಪಟ್ಟಣಶೆಟ್ಟಿ ವಹಿಸುವರು. ಶಾಸಕ ರಾಜುಗೌಡ ಬ ಪಾಟೀಲ, ಶ್ರೀ ಶರಣಬಸವೇಶ್ವರ ವಿವಿ ಸಂಘದ ಅಧ್ಯಕ್ಷೆ ಭಾಗ್ಯ ಶ್ರೀ ಶಿ. ಪಾಟೀಲ, ಗಣ್ಯ ವ್ಯಾಪಾರಸ್ಥ ಭರತ ಅಗರವಾಲ, ರಾಘವೇಂದ್ರ ಆಚಾರ್ಯ ಹೊಸಳ್ಳಿ, ಯೋಧಾ ಪೂರ್ವ ಪ್ರಾಥಮಿಕ ಶಾಲೆಯ ಮುಖ್ಯಸ್ಥೆ ಶೈಲಜಾ ಮಂಜುನಾಥ್ ಕುರ್ಡೇಕರ, ಚೇತನಾ ಕಾಲೇಜು ಅಧ್ಯಕ್ಷ ರಾಜಶ್ರೀ ದಯಾನಂದ ಜುಗತಿ ಆಗಮಿಸುವರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

## ವಿಶ್ವಹಿಂದೂ ಪರಿಷತ್: ಓಂ ಪ್ರಖಂಡ: ಧರ್ಮ ಸಂರಕ್ಷಣೆ , ಸಮಾಜ ಸೇವೆಗೆ ಒತ್ತು

• **ಉದಯವಾಹಿನಿ ಕಲಬುರಗಿ**

ನಗರದ ಪ್ರಶಾಂತ ನಗರದಲ್ಲಿರುವ ಶ್ರೀ ಹನುಮಾನ್ ಮಂದಿರದಲ್ಲಿ ವಿಶ್ವ ಹಿಂದೂ ಪರಿಷತ್‌ನ ಓಂ ಪ್ರಖಂಡದ ವತಿಯಿಂದ ಗುರುವಾರ - ದಿನಾಂಕ 08 ಜನವರಿ 2025 ರಂದು ನಡೆದ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಹಿಂದೂ ಧರ್ಮದ ಸಂರಕ್ಷಣೆ ಮತ್ತು ಸಮಾಜ ಸೇವೆಗಾಗಿ ಸಂಘಟನೆಯನ್ನು ಇನ್ನಷ್ಟು ಬಲಪಡಿಸುವ ನಿಟ್ಟಿನಲ್ಲಿ ಸಭೆಯಲ್ಲಿ ಪ್ರಮುಖ ಚರ್ಚೆಗಳು ನಡೆದವು.



ಉದಯವಾಹಿನಿ ಚಿತ್ರ

ಸಭೆಯ ಪ್ರಮುಖಾಂಶವಾಗಿ ಓಂ ಪ್ರಖಂಡದ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಘೋಷಿಸಲಾಯಿತು. ಹಿಂದೂ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ನೂತನ ಪದಾಧಿಕಾರಿಗಳು ಸಂಕಲ್ಪ ತೊಟ್ಟರು. ಹಿಂದೂ ಧರ್ಮದ ಮೌಲ್ಯಗಳನ್ನು ಯುವ ಪೀಳಿಗೆಗೆ ತಲುಪಿಸುವ ಮತ್ತು ಸಮಾಜದಲ್ಲಿ ಧಾರ್ಮಿಕ ಜಾಗೃತಿ ಮೂಡಿಸುವ ಬಗ್ಗೆ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು.

ವಿಶ್ವ ಹಿಂದೂ ಪರಿಷತ್‌ನ ಕಾರ್ಯಸೂಚಿಗಳಾದ ಧರ್ಮ ರಕ್ಷಣೆ, ಗೋ ಸಂರಕ್ಷಣೆ, ಸಂಸ್ಕಾರ ಕೇಂದ್ರಗಳ ಸ್ಥಾಪನೆ ಹಾಗೂ ಸಮಾಜ ಸೇವೆಯನ್ನು ಪ್ರಶಾಂತ ನಗರ ವ್ಯಾಪ್ತಿಯಲ್ಲಿ ಇನ್ನಷ್ಟು ಕ್ರಿಯಾಶೀಲವಾಗಿ ಅನುಷ್ಠಾನಗೊಳಿಸುವ ಬಗ್ಗೆ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಬಡಾವಣೆಯ ಬಂಧು-ಮಿತ್ರರು, ಸಂಘಟನೆಯ ಹಿರಿಯ ಸದಸ್ಯರು ಹಾಗೂ ಸ್ಥಳೀಯ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಸಭೆಯಲ್ಲಿ ಭಾಗವಹಿಸಿ, ಯಶಸ್ಸಿಗೆ ಸಹಕರಿಸಿದರು.

ಸಭೆಯಲ್ಲಿ ಸವಿಶ್ವ ಹಿಂದೂ ಪರಿಷತ್ತಿನ ಮುಖಂಡರು ಪದಾಧಿಕಾರಿಗಳು ಕಾರ್ಯಕರ್ತರು ಭಾಗವಹಿಸಿದ್ದರು.

## ಕರಾವಳಿ ಕರ್ನಾಟಕಕ್ಕೆ ಕೇಂದ್ರದ ಯೋಜನೆಗಳನ್ನು ಆಕರ್ಷಿಸುವ ಕುರಿತು ಸಭೆ

• **ಉದಯವಾಹಿನಿ ಮಂಗಳೂರು**

ಕರಾವಳಿ ಕರ್ನಾಟಕಕ್ಕೆ ಸಾಗರಮಾಲಾ ಯೋಜನೆ ಸೇರಿದಂತೆ ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ತರಲು ಇರುವ ಅವಕಾಶಗಳು, ಸಾಧ್ಯತೆಗಳು ಹಾಗೂ ಸಂಯೋಜಿತ ಕಾರ್ಯತಂತ್ರಗಳ ಕುರಿತು, ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ. ಗಫೂರ್ ಅವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯಲ್ಲಿ ಕರಾವಳಿ ನಿಯಂತ್ರಣ ವಲಯ ಕರ್ನಾಟಕ ಮೆರಿಟೈಮ್ ಬೋರ್ಡ್, ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ಹಾಗೂ ಮೀನುಗಾರಿಕೆ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಿ, ತಮ್ಮ ತಮ್ಮ ಇಲಾಖೆಗಳ ವ್ಯಾಪ್ತಿಯಲ್ಲಿನ ಮಾಹಿತಿಯನ್ನು ಮಂಡಿಸಿದರು. ಎಲ್ಲಾ ಇಲಾಖೆಗಳ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡ ಅಧ್ಯಕ್ಷರು ಮಾತನಾಡಿ, ಮುಂದಿನ ದಿನಗಳಲ್ಲಿ ಕರಾವಳಿ ಕರ್ನಾಟಕದ ಸಮಗ್ರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು, ರಾಜ್ಯ ಹಾಗೂ ಕೇಂದ್ರ ಸರ್ಕಾರದ ಜನಪ್ರತಿನಿಧಿಗಳು ಮತ್ತು ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

## ಬೀದರ್ ಪ್ರವಾಸೋದ್ಯಮಕ್ಕೆ ಜಾಗತಿಕ ಗುರುತು: ಡಿಸ್ಕವರ್ ಬೀದರ್

• **ಉದಯವಾಹಿನಿ ಬೀದರ**

ಪ್ರವಾಸೋದ್ಯಮ ಸಚಿವಾಲಯ, ಭಾರತ ಸರ್ಕಾರದ ಬೆಂಗಳೂರು ಕಚೇರಿ, ಮತ್ತು ಸಹಾಯಕ ನಿರ್ದೇಶಕರ ಕಚೇರಿ ಬೀದರ್ ಸಂಯೋಗದೊಂದಿಗೆ ಡಿಸ್ಕವರ್ ಬೀದರ್ ಟ್ರಿಪ್ ಅಂಗವಾಗಿ ಬೀದರ್ ನಗರದ ಎಸ್‌ಆರೆಸ್ ರೆಸಾಟ್ನಲ್ಲಿ ಓರಿಯಂಟೇಶನ್ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಈ ಮೂರು ದಿನಗಳ ಪರಿಚಿತ ಪ್ರವಾಸವು ಜನವರಿ 7ರಿಂದ 9ರವರೆಗೆ ನಡೆಯುತ್ತಿದೆ.

**ಜಾಗತಿಕ ಆಕರ್ಷಣೆಯನ್ನು ಹೆಚ್ಚಿಸಲಿದೆ**

ಈ ಕಾರ್ಯಕ್ರಮವನ್ನು ಬೀದರ್ ಜಿಲ್ಲಾಡಳಿತ ಹಾಗೂ ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದು, ಬೀದರ್ ಜಿಲ್ಲೆಯನ್ನು ಪರಂಪರೆ, ಸಾಂಸ್ಕೃತಿಕ ಮತ್ತು ಅನುಭವಾತ್ಮಕ ಪ್ರವಾಸೋದ್ಯಮದ ಪ್ರಮುಖ ತಾಣವಾಗಿ ಉತ್ತೇಜಿಸುವುದು ಇದರ ಪ್ರಧಾನ ಉದ್ದೇಶವಾಗಿದೆ.

ಓರಿಯಂಟೇಶನ್ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಉದ್ಘಾಟಿಸಿ ಮಾತನಾಡಿ, ಬೀದರ್ ಜಿಲ್ಲೆಯ ಶ್ರೀಮಂತ ಐತಿಹಾಸಿಕ ಪರಂಪರೆ, ಸಾಂಸ್ಕೃತಿಕ ವೈಭವ ಹಾಗೂ ಪ್ರವಾಸೋದ್ಯಮದ ಅಪಾರ ಸಾಧ್ಯತೆಗಳ ಕುರಿತು ವಿವರಿಸಿದರು. ಪ್ರಮುಖ ಪರಂಪರಾ ಸ್ಮಾರಕಗಳು, ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳು ಹಾಗೂ ಜಿಐ ಟ್ಯಾಗ್ ಪಡೆದ ಬಿದ್ರಿವೇರ್ ಕರಕುಶಲ ಕುರಿತು ಮಾಸ್ಟರ್ ಕುಶಲಕರ್ಮಿಗಳ ನೇರ ಪ್ರದರ್ಶನಗಳೊಂದಿಗೆ ಕಾರ್ಯಾಗಾರ ಆಯೋಜಿಸಲಾಗಿದ್ದು, ಇದು ಶತಮಾನಗಳ ಹಳೆಯ ಈ ಕಲೆಯ ಜಾಗತಿಕ ಆಕರ್ಷಣೆಯನ್ನು ಮತ್ತಷ್ಟು ಹೆಚ್ಚಿಸಲಿದೆ ಎಂದು ತಿಳಿಸಿದರು.




ಉದಯವಾಹಿನಿ ಚಿತ್ರ

ಮುಂದಿನ ದಿನಗಳಲ್ಲಿ ಭಾಗವಹಿಸುವವರಿಗೆ ಬೀದರ್ ಕೋಟೆ, ರಂಗೀನ್ ಮಹಲ್, ಸೋಲಾ ಖಂಬಾ ಮಸೀದಿ, ಕರೇಜ್ ಜಲವ್ಯವಸ್ಥೆ, ಬರಿದ್ ಶಾಹಿ ಗೋರಿಗಳು, ಶ್ರೀ ಕ್ಷೇತ್ರ ಜರ್ನಿ ನರಸಿಂಹ ಗುಹಾ ದೇವಾಲಯ ಸೇರಿದಂತೆ ವನ್ಯಜೀವಿ ಸಫಾರಿ ಮತ್ತು ಪಕ್ಷಿ ವೀಕ್ಷಣೆಯಂತಹ ಪ್ರಕೃತಿ ಆಧಾರಿತ ಅನುಭವಗಳನ್ನು ಒದಗಿಸಲಾಗುತ್ತದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಆಹ್ವಾನಿತ ಪ್ರವಾಸ ನಿರ್ವಾಹಕರು, ಸಾಮಾಜಿಕ ಮಾಧ್ಯಮ ಪ್ರಭಾವಿಗಳು ಹಾಗೂ ಸ್ಥಳೀಯ ಪ್ರವಾಸೋದ್ಯಮ ಪಾಲುದಾರರು ಭಾಗವಹಿಸಿದ್ದರು. ಮುಂದಿನ ದಿನಗಳಲ್ಲಿ ಜಿಲ್ಲೆಯ ಪ್ರಮುಖ ಪ್ರವಾಸಿ ಆಕರ್ಷಣೆಗಳಿಗೆ ಪರಿಚಿತ ಭೇಟಿ ಕೈಗೊಳ್ಳಲಿದ್ದಾರೆ.

## ಶಾಲೆಯ ಬಿಸಿಯೂಟದಲ್ಲಿ ಹುಳ ಪತ್ತೆ: ಮೂವರು ಅಧಿಕಾರಿಗಳು ಅಮಾನತು

• **ಉದಯವಾಹಿನಿ ಕೊಪ್ಪಳ**

ಜಿಲ್ಲೆಯ ಕೆಲ ಶಾಲೆಗಳ ಬಿಸಿಯೂಟದಲ್ಲಿ ಹುಳಗಳು ಪತ್ತೆಯಾಗಿದ್ದ ಸಂಬಂಧ ಅಕ್ಷರ ದಾಸೋಹ ಇಲಾಖೆಯ ಮೂವರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಆದೇಶ ಹೊರಡಿಸಿದ್ದು, ಅಕ್ಷರ ದಾಸೋಹ ಜಿಲ್ಲಾ ಅಧಿಕಾರಿ ಅನಿತಾ ಹಾಗೂ ಇಬ್ಬರು ಸಹಾಯಕ ನಿರ್ದೇಶಕರುಗಳಾದ ಮಲ್ಲಿಕಾರ್ಜುನ ಗುಡಿ, ಮಹಾಂತಯ್ಯ ಸೊಪ್ಪಿಮಠ ಅಮಾನತು ಮಾಡಿದ್ದಾರೆ.

# ಜನ ಸಂಪರ್ಕ ಸಭೆ- ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ

### ಭಾರತ ದೇಶದಲ್ಲಿ ಕರ್ನಾಟಕದಲ್ಲಿ ಅಭಿವೃದ್ಧಿ ಮಾಡಿದಷ್ಟು ಬೇರೆ ಎಲ್ಲೂ ಇಲ್ಲ: ಸಿಎಂ ಆರ್ಥಿಕ ಸಲಹೆಗಾರ ಶ್ರೀ ಬಸವರಾಜರಾಯರೆಡ್ಡಿ

• **ಉದಯವಾಹಿನಿ ಯಲಬುರ್ಗಾ**

ತಾಲ್ಲೂಕಿನ ಚಿಕ್ಕವಂಕಲಕುಂಟಾ ಗ್ರಾಮದಲ್ಲಿ ಕ್ಷೇತ್ರದ ಶಾಸಕರು ಹಾಗೂ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾದ ಶ್ರೀ ಬಸವರಾಜ ರಾಯರೆಡ್ಡಿಯವರ ನೇತೃತ್ವದಲ್ಲಿ ಜನಸಂಪರ್ಕ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು. ಮುಖ್ಯಮಂತ್ರಿಯನ್ನಾಗಿ ಹಾಗೂ ಮಂತ್ರಿ ಮಂಡಲ ಮಾಡಲಾಯಿತು.

ಆದರು ನನಗೆ ಮಂತ್ರಿಯಾಗುವ ಅವಕಾಶ ಕೈ ತಪ್ಪಿರುವ ಹಿನ್ನೆಲೆಯಲ್ಲಿ ನನಗೆ ಮುಖ್ಯಮಂತ್ರಿ ಆರ್ಥಿಕ ಸಲಹೆಗಾರರನ್ನಾಗಿ ಆಯ್ಕೆ ಮಾಡಿದ್ದರಿರಿಂದ ಚುನಾವಣೆಯ ಪೂರ್ವದಲ್ಲಿ ಘೋಷಣೆ ಮಾಡಿದಂತೆ ಪಂಚಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಯಿತು. ಮಂತ್ರಿಯಾಗಲು ಮುಖ್ಯಮಂತ್ರಿಯಾಗಲು ಸಮಯ ಬರಬೇಕು ಜನರು ಮನಸ್ಸು ಗೆದ್ದವರು ದೋಡ್ಡವರು ಅಧಿಕಾರ ಶಾಶ್ವತವಲ್ಲ ತಾಲ್ಲೂಕಿನ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಜಾರಿಗೆ ತರಲಾಗಿದೆ ರೈಲ್ವೇ ಜಾರಿಗೆ ತಂದಿರುವೆ 4 ನವೋದಯ ಶಾಲೆ ತೆರೆಯಲಾಗಿದೆ ಲಿಂಗಸುಗೂರು ಹುಬ್ಬಳ್ಳಿ ಕಲಬುರ್ಗಿ. ತಾಲೂಕಿನಲ್ಲಿ ವಾಣಿಜ್ಯ ಇಲ್ಲ ಸಾರ್ವಜನಿಕರಲ್ಲಿ ಹಣವಿಲ್ಲ ನೀರಾವರಿ ಇಲ್ಲ ಅತಿ ಆರ್ಥಿಕ ವಾಗಿ ಹಿಂದುಳಿದ ತಾಲ್ಲೂಕು ನಮ್ಮದಾಗಿದೆ ಶೈಕ್ಷಣಿಕವಾಗಿ ಮುಂದುವರಿದಿದೆ.



ಉದಯವಾಹಿನಿ ಚಿತ್ರ

**ಭಾರತ ದೇಶದಲ್ಲಿ ಕರ್ನಾಟಕದಲ್ಲಿ ಅಭಿವೃದ್ಧಿ ಮಾಡಿದಷ್ಟು ಬೇರೆ ಎಲ್ಲೂ ಇಲ್ಲ ರಾಜ್ಯ 4,36 ಲಕ್ಷ ಜನಕ್ಕೆ ಆಹಾರ ಧಾನ್ಯ.5 ಕೇಜಿ ಆಹಾರ ಧಾನ್ಯದ ಜೋತೆಗೆ ಬೆಳೆ ಹುಕ್ಕೇರಿ ಉಪ್ಪು ಕಾರ ಎಣ್ಣೆ ವಿತರಿಸಲಾಗುವುದು. ಬಡಜನತೆಗೆ ತಾಲ್ಲೂಕಿನಲ್ಲ 2.56 ಸಾವೀರ ಜನರಿಗೆ ಆಹಾರ ಧಾನ್ಯ ಗೃಹಲಕ್ಷ್ಮಿ ಯೋಜನೆಯಡಿ. 3-50 ಕೋಟಿ ಮಹಿಳೆಯರಿಗೆ ಉಚಿತ ಪ್ರಯಾಣ 1,69 ಲಕ್ಷ ಮನೆಗಳಿಗೆ ಉಚಿತ ವಿದ್ಯುತ್.54 ಸಾವೀರ ಮನೆಗಳಿಗೆ ಉಚಿತ ವಿದ್ಯುತ್. 1,60 ಲಕ್ಷ ಜನರು ಉಚಿತ ಪ್ರಯಾಣ ಮಾಡಿದ್ದಾರೆ. 1-13 ಲಕ್ಷ ಜನರು ಉಚಿತ ಪ್ರಯಾಣ ಮಾಡಿದ್ದಾರೆ ಜನಪರವಾದ ಕೆಲಸ ಮಾಡಿದ್ದೆವೆ. - ಶ್ರೀ ಬಸವರಾಜರಾಯರೆಡ್ಡಿ**

ಸಮಾನತೆಯಿಂದ ನಡೆಯ ಬೇಕು ಶಾಲಾ ಕಾಲೇಜು ಕೆರೆ ತುಂಬಿಸುವ ಕೆಲಸ ಮಾಡಿರುವೆ ನೀರಾವರಿ ಬಗ್ಗೆ ಮೂರು ಜನ ಮಾತ್ರ ಇದ್ದೇವೆ ಶಾಸಕರಾಗಿ ಬೇಕಾದರೆ ಕಾನೂನು ಹಣಕಾಸು ಆರ್ಥಿಕ ಗೊತ್ತಿರಬೇಕು ಇದು ಯಾವುದು ಗೊತ್ತಿಲ್ಲದ ರನ್ನು ಆಯ್ಕೆ ಮಾಡುತ್ತಿರಿ. ಹಿರೇವೆಂಕಲ ಕುಂಟಾ ಗಾಣಧಾಳ ವರಗೆ ರಸ್ತೆ ಮರು ಡಾಂಬರಿಕರಣ ನಿರ್ಮಾಣ.ಯುಗಾದಿಯೊಳಗೆ ಕಾಮಗಾರಿ ಪ್ರಾರಂಭಿಸಿ ಸದುಪಯೋಗ ಪಡೆದುಕೊಳ್ಳಬೇಕು.

ಯಾರು ಜನಪರವಾಗಿ ಇರುತ್ತಾರೆ ಅಂತವರಿಗೆ ಬೆಂಬಲಿಸಿದರೆ ಅಭಿವೃದ್ಧಿ ಕಾರ್ಯಗಳು ನಡೆಯುತ್ತವೆ.

ಬೈ ಪಾಸ್ ಮಾಡಿ ಭೂ ಸ್ವಾಧೀನ ಮಾಡಿಕೊಳ್ಳಿ ಹಿರೇವೆಂಕಲಕುಂಟಾ ವರೆಗೆ. ಆರ್ಟ್ ಸೈನ್ಸ್ ಕಾಮರ್ಸ್, 12 ಕೆಪಿಎಸ್ ಸ್ಕೂಲ್ ಪ್ರಾರಂಭ ಮಾಡಿರುವೆ.ಗಾಣಧಾಳ ಗುನ್ನಾಳ ಮಂಗಳೂರು ಬಂಡಿ 14 ಕೆಪಿಎಸ್ 4 ಕೋಟಿ ರೂಪಾಯಿ ನೀಡಲಾಗಿದೆ. ನಿಟ್ಟಾಲಿ ಬಳಿ ಸೈನಿಕ ಮಕ್ಕಳ ಶಾಲೆ.ಯಡ್ಡೋಣಿ ವಸತಿ ಶಾಲೆ ನೀರಾವರಿ ಯಾಗಬೇಕು ಉತ್ತರ ಕರ್ನಾಟಕದಲ್ಲಿ ಮಾತನಾಡಿರುವೆ ನೀರಾವರಿ ಬಗ್ಗೆ ಉದ್ರಿ ಹೊಡೆಯುತ್ತಾರೆ.

**ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ**

6 ಠರಾವೂ ಪಾಸ್ ಮಾಡಲಾಗಿದೆ.ಕೆರೆಗಳಿಗೆ ನೀರು ತರಲು ಡಿ.ಕೆ.ನಾನು ತಂದಿರುವೆ 970 ಕೋಟಿ ಕೋಡಿಸಿರುವೆ ಜನರು ಭೂಮಿ ನೀಡುತ್ತಿಲ್ಲ 272 ಕೋಟಿಗೆ ಟೆಂಡರ್ ಕರೆಯಲಾಗುವುದು ಸೌಹಾರ್ದತೆಯಿಂದ ಇರಬೇಕೆಂದು ಸಲಹೆ ನೀಡಿದರು. ಜನ ಸುಧಾರಣೆ ಆಗದಿದ್ದರೆ ಹಳ್ಳಿ ಉದ್ದಾರ ವಾಗುವುದಿಲ್ಲ ರಾಜಕಾರಣ ಭ್ರಷ್ಟ.ವ್ಯವಸ್ಥೆಯಾಗಿ ಬಿಟ್ಟಿದೆ. ಜನಪರ ಇರುವವರಿಗೆ ಬೆಂಬಲ ಕೋಡಬೇಕು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಹುಲೀಗೇಮ್ಮ ತಳವಾರ ಅಧಿಕಾರಿಗಳಾದ ತಹಶೀಲ್ದಾರ ಪ್ರಕಾಶ ಎಂ ನಾಶಿ.ಇಇಓ ನೀಲಗಂಗಾ ಬಬಲಾದ, ಎಇಇ ಮಲ್ಲೀಕಾರ್ಜುನ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬೆಟ್ಟದಪ್ಪ ಮಾಳೆಕೊಪ್ಪ. ಪ್ರಭಾರ ಶಿಕ್ಷಣಾಧಿಕಾರಿ ಅಶೋಕ ಗೌಡ್ರ ತೋಟಗಾರಿಕೆ ಇಲಾಖೆಯ ನಿಂಗನಗೌಡ ಪಾಟೀಲ್ ಮುಖಂಡರಾದ ಕೆರೆ ಬಸಪ್ಪ ನಿಡಗುಂದಿ, ಸುಧೀರ ಕೋರ್ಲಳ್ಳಿ, ಮಹೇಶ ಹಳ್ಳಿ ನಾಗರಾಜ್ ನವಲಹಳ್ಳಿ. ಸುಭಾಷ್ ಜೇರ್ಲಿ ರುದ್ರಪ್ಪ ಮರಕಟ್. ನಜೀರ್ ಮೀಯಾ ಕುಷ್ಟಗಿ. ಇನ್ನೂ ಗ್ರಾ.ಪಂ ಅಧ್ಯಕ್ಷರು, ಸದಸ್ಯರು, ವಿವಿಧ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳು, ಮುಖಂಡರು ಹಾಜರಿದ್ದರು.

## ಕೋರ್ಟ್ ಬೇಲಿಪ್ ಮೇಲೆ ಹಲ್ಲೆ: ದೂರು ದಾಖಲು

• **ಉದಯವಾಹಿನಿ ಭಟ್ಕಳ**

ನ್ಯಾಯಾಲಯದ ವಾರೆಂಟ್ ಜಾರಿ ಮಾಡಲು ಹೋಗಿದ್ದ ಕೋರ್ಟ್ ಬೇಲಿಫ್ (ಕಾನೂನು ಪತ್ರ ಜಾರಿ ಅಧಿಕಾರಿ) ಒಬ್ಬರಿಗೆ ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ದೂಡಿ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ ಕುರಿತು ಮುರ್ಡೇಶ್ವರ ಪೊಲೀಸ್ ಠಾಣೆಯಲ್ಲಿ ಮೊಹಮ್ಮದ್ ಇರ್ಫಾನ್ ಅಬುಬಕರ್ ಹಾಜಿಅಮೀನ್ ಎಂಬಾತನ ಮೇಲೆ ಮಂಗಳವಾರ ದೂರು ದಾಖಲಾಗಿದೆ.

ನ್ಯಾಯಾಲಯದಲ್ಲಿ ಬೇಲಿಫ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಗಣಪತಿ ತಂದೆ ಹನುಮಂತ ನಾಯ್ಕ ಇವರು ಆಪಾದಿತ ಮೊಹಮ್ಮದ್ ಇರ್ಫಾನ್ ಅಬುಬಕರ್ ಹಾಜಿಅಮಿನ್ ಇವರಿಗೆ ಭಟ್ಕಳದ ಪ್ರಧಾನ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯದಿಂದ ಹೊರಡಿಸಲಾಗಿದ್ದ ದಸ್ತಗಿರ್ ವಾರಂಟ್ ಜ್ಯಾರಿ ಮಾಡಲು ಹೋದಾಗ ಈ ಕೃತ್ಯ ಎಸಗಿದ್ದು ಅವರೊಂದಿಗೆ ಅವರ ಸಹೋದರ ಸುಫಿಯಾನ್ ಕೂಡಾ ಭಾಗಿಯಾಗಿದ್ದರು ಎಂದೂ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಈ ಸಂದರ್ಭದಲ್ಲಿ ತನ್ನೊಂದಿಗೆ ಇದ್ದ ಭಟ್ಕಳ ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಸಿಬ್ಬಂದಿ ರೋಹಿತ್ ತಂದೆ ದತ್ತಾತ್ರೇಯ ಶೆಟ್ಟಿ ಹಾಗೂ ಗಣೇಶ ಹನುಮಂತ ನಾಯ್ಕ ಅವರಿಗೂ ಅವಾಚ್ಯ ಶಬ್ದಗಳಿಂದ ಬೈದು, ನಿಂದಿಸಿದ್ದಾರೆ ಎಂದೂ ದೂರಿನಲ್ಲಿ ತಿಳಿಸಿದ್ದಾರೆ. ಮುರ್ಡೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ● ಯುಎಸ್ ಬೆದರಿಕೆ ನಡುವೆ ಗ್ರೀನ್‌ಲ್ಯಾಂಡ್ ರಕ್ಷಣೆಗೆ ಬಲಪ್ರಯೋಗ ಎಚ್ಚರಿಕೆ

# ಶೂಟ್ ಫಸ್ಟ್ ನೀತಿ ಘೋಷಿಸಿದ ಡೆನ್ಮಾರ್ಕ್

**ಕೋಪನ್‌ಹೇಗನ್:** ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವೆನುಜುವೆಲಾದ ಮೇಲೆ ದಾಳಿ ನಡೆಸಿ ನಿಕೋಲಸ್ ಮಡುರೋ ಹಾಗೂ ಅವರ ಪತ್ನಿಯನ್ನು ಸೆರೆಹಿಡಿದ ನಂತರ ವೆನುಜುವೆಲಾದ ಮೇಲೆ ಅಧಿಪತ್ಯ ಸಾಧಿಸಿದ್ದೂ,ಈಗ ಡೆನ್ಮಾರ್ಕ್ ಸ್ವಾಯತ್ತ ಪ್ರದೇಶವಾಗಿರುವ ಗ್ರೀನ್ ಲ್ಯಾಂಡ್ ಮೇಲೆ ಕಣ್ಣು ಹಾಕಿದ್ದು, ಇದರಿಂದಾಗಿ ಮತ್ತೆ ಗ್ರೀನ್ ಲ್ಯಾಂಡ್ ಗೆ ಸಂಬಂಧಿಸಿದಂತೆ ಡೆನ್ಮಾರ್ಕ್ ಹಾಗೂ ಅಮೆರಿಕಾ ನಡುವೆ ಬಿಕ್ಕಟ್ಟು ಪ್ರಾರಂಭವಾಗಿದೆ. ಟ್ರಂಪ್ ಗ್ರೀನ್‌ಲ್ಯಾಂಡ್ ವಶಪಡಿಸಿಕೊಳ್ಳುವ ಬೆದರಿಕೆಗಳಿಗೆ ಡೆನ್ಮಾರ್ಕ್ ಮಿಲಿಟರಿ ಘರ್ಷಣೆಯ ಎಚ್ಚರಿಕೆ ನೀಡಿದೆ.


**ಗ್ರೀನ್ ಲ್ಯಾಂಡ್ ಆಕ್ರಮಿಸಲು ಬಂದರೆ ಮಿಲಿಟರಿ ದಾಳಿ ಖಚಿತ ಎಂದ ಡೆನ್ಮಾರ್ಕ್:** ಟ್ರಂಪ್ ಗ್ರೀನ್ ಲ್ಯಾಂಡ್ ಸ್ವಾಧೀನಕ್ಕಾಗಿ ಶತಪ್ರಯತ್ನ ಮಾಡುತ್ತಿರುವಾಗಲೇ ಡೆನ್ಮಾರ್ಕ್‌ನ ರಕ್ಷಣಾ ಸಚಿವಾಲಯ ತಮ್ಮ ಸೈನಿಕರಿಗೆ ಸರ್ವ ಅಧಿಕಾರವನ್ನು ಕೊಟ್ಟಿದ್ದು, ಡ್ಯಾನಿಶ್ ಭೂಪ್ರದೇಶವನ್ನು ಯಾರಾದರೂ ಆಕ್ರಮಿಸಿದರೆ, ಸೈನಿಕರು ತಕ್ಷಣವೇ ಹೋರಾಟಕ್ಕೆ ಇಳಿದು, ತಮ್ಮ ಕಮಾಂಡರ್‌ಗಳಿಂದ ಆದೇಶ ಬರುವವರೆಗೆ ಕಾಯದೆ ಗುಂಡು ಹಾರಿಸುತ್ತಾರೆ ಎಂದು ಯುಎಸ್‌ಗೆ ಟಾಂಗ್ ನೀಡಿದೆ.

ಡೆನ್ಮಾರ್ಕ್‌ನ ರಕ್ಷಣಾ ಸಚಿವಾಲಯದ ಪ್ರಕಾರ, ಶೀತಲ ಸಮರದ ಕಾಲದ ನಿರ್ದೇಶನ ಯಾವುದೇ ವಿದೇಶಿ ಆಕ್ರಮಣಕ್ಕೆ ತಕ್ಷಣವೇ ಪ್ರತಿಕ್ರಿಯಿಸಲು ಸೈನಿಕರಿಗೆ ಸೂಚಿಸುತ್ತದೆ. ಇದರನ್ವಯ, ಯಾವುದೇ ದಾಳಿ ನಡೆದರೆ ರಕ್ಷಣಾ ಪಡೆಗಳು ತಕ್ಷಣವೇ ಹೋರಾಟಕ್ಕೆ ಇಳಿಯಬೇಕಿದ್ದು, ಯಾವುದೇ ರೀತಿ ರಾಜಕೀಯ ಅನುಮತಿ ಅಥವಾ ಔಪಚಾರಿಕ ಆದೇಶಗಳಿಗಾಗಿ ಕಾಯುವ ಅಗತ್ಯವಿಲ್ಲ ಎಂದು ಸಚಿವಾಲಯ ಹೇಳಿದೆ.

**ನ್ಯಾಟೋ ನಾಯಕರಿಂದ ವಿರೋಧ:** ಇನ್ನು, ಟ್ರಂಪ್ ಈ ಬೆದರಿಕೆಗೆ ಡೆನ್ಮಾರ್ಕ್ ಹಾಗೂ ಯುರೋಪಿಯನ್ ರಾಷ್ಟ್ರಗಳಿಂದಲೇ ವಿರೋಧ ವ್ಯಕ್ತವಾಗುತ್ತಿದೆ. ಟ್ರಂಪ್ ಬೆದರಿಕೆ ಬೆನ್ನಲ್ಲೇ, ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್ಸೆನ್ ಅಮೆರಿಕವು ಮತ್ತೊಂದು ನ್ಯಾಟೋ ದೇಶದ ಮೇಲೆ ಮಿಲಿಟರಿಯಾಗಿ ದಾಳಿ ಮಾಡಲು ನಿರ್ಧರಿಸಿದರೆ, ಎಲ್ಲವೂ ನಿಲ್ಲುತ್ತದೆ. ಗ್ರೀನ್ ಲ್ಯಾಂಡ್ ಅನ್ನು ವಶಪಡಿಸಿಕೊಳ್ಳಲು ಯಾವುದೇ ಮಿಲಿಟರಿ ಪ್ರಯತ್ನ ನಡೆದರೆ, ಅದು ನ್ಯಾಟೋ ಅಂತ್ಯಕ್ಕೆ ಕಾರಣವಾಗುತ್ತದೆ ಎಂದು ತಿಳಿಸಿದ್ದರು. ಇನ್ನು, ಯುರೋಪ್ ಹಾಗೂ ನ್ಯಾಟೋ ದೇಶಗಳು ಸಹ ವಿರೋಧ ವ್ಯಕ್ತಪಡಿಸಿದ್ದು, ಫ್ರಾನ್ಸ್, ಜರ್ಮನಿ, ಇಟಲಿ, ಪೋಲೆಂಡ್, ಸ್ಪೇನ್ ಮತ್ತು ಯುನೈಟೆಡ್ ಕಿಂಗ್‌ಡಂ ದೇಶಗಳ ನಾಯಕರು, ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್ಸೆನ್ ಅವರನ್ನು ಭೇಟಿಯಾಗಿ ಜಂಟಿ ಹೇಳಿಕೆ ನೀಡಿ ಗ್ರೀನ್‌ಲ್ಯಾಂಡ್ ಡೆನ್ಮಾರ್ಕ್ ಸಾಮ್ರಾಜ್ಯದೊಳಗೆ ಸ್ವಾಯತ್ತ ಆಡಳಿತ ಹೊಂದಿರುವ ಪ್ರದೇಶವಾಗಿದ್ದು, ಗ್ರೀನ್ ಲ್ಯಾಂಡ್ ಅದರ ಜನರಿಗೆ ಸೇರಿದ್ದಾಗಿದೆ ಎಂದು ಸ್ಪಷ್ಟಪಡಿಸಿದೆ.

### ಗ್ರೀನ್ ಲ್ಯಾಂಡ್ ಮೇಲೆ ಟ್ರಂಪ್ ಕಣ್ಣು

ಇದಕ್ಕೆ ಕಾರಣವೆಂದರೆ ವೆನುಜುವೆಲಾದ ಮೇಲಿನ ದಾಳಿ ಬಳಿಕ ಟ್ರಂಪ್ ಕಣ್ಣು ಖನಿಜ ನಿಕ್ಷೇಪಗಳ ಸ್ವರ್ಗವೆಂದರೆ ಭಾವಿಸುವ ಗ್ರೀನ್ ಮೇಲೆ ಬಿದ್ದಿರುವುದು.ಟ್ರಂಪ್ ತಾವು ಅಧಿಕಾರಕ್ಕೆ ಬಂದಾಗಿನಿಂದಲೂ ಆಗಾಗ ಗ್ರೀನ್ ಲ್ಯಾಂಡ್ ಪ್ರದೇಶದ ಮೇಲೆ ಅವರಿಗಿರುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ವೆನುಜುವೆಲಾದ ದಾಳಿ ಬಳಿಕ ಅದನ್ನು ದುಪ್ಪಟ್ಟುಗೊಳಿಸಿರುವ ಟ್ರಂಪ್ ಗ್ರೀನ್ ಲ್ಯಾಂಡ್ ಅಮೆರಿಕಾದ ರಾಷ್ಟ್ರೀಯ ಭದ್ರತೆಗೆ ಅವಶ್ಯಕ, ಹಾಗಾಗಿ ಯಾವುದೇ ಪರಿಸ್ಥಿತಿಯಲ್ಲೂ ವಶಕ್ಕೆ ಪಡೆದುಕೊಳ್ಳಲು ಅದನ್ನು ಕೊಂಡುಕೊಳ್ಳುತ್ತೇನೆ ಇಲ್ಲವಾದರೆ ಇದನ್ನು ನಾನು ಮಿಲಿಟರಿ ಮೂಲಕ ವಶಪಡಿಸಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕಿದ್ದಾರೆ.




- ವೆನುಜುವೆಲಾದ ಬಳಿಕ ಡ್ಯಾನಿಶ್ ಭೂಪ್ರದೇಶವಾದ ಗ್ರೀನ್ ಲ್ಯಾಂಡ್ ಮೇಲೆ ಟ್ರಂಪ್ ಕಣ್ಣು
- ಡ್ಯಾನಿಶ್ ಭೂಪ್ರದೇಶ ಅತಿಕ್ರಮಿಸಲು ಬಂದರೆ ಮೊದಲು ದಾಳಿ ನಡೆಸಿ ನಂತರ ನಮಗೆ ಅದರ ಬಗ್ಗೆ ತಿಳಿಸಿ ಎಂದು ಸೈನಿಕರಿಗೆ ಫ್ರೀ ಹ್ಯಾಂಡ್ ನೀಡಿದ ಡೆನ್ಮಾರ್ಕ್
- ಟ್ರಂಪ್ ಗ್ರೀನ್ ಲ್ಯಾಂಡ್ ಆಕ್ರಮಣ ಹೇಳಿಕೆಗೆ ನ್ಯಾಟೋ ನಾಯಕರಿಂದ ವಿರೋಧ

## ಪ್ಯಾಲೆಸ್ಟೈನ್‌ಗೆ ಬೆಂಬಲಿಸಲು ಅಕ್ರಮವಾಗಿ 4 ಕೋಟಿ ಸಂಗ್ರಹ ಮಾಡಿದ್ದ ಇಬ್ಬರ ಬಂಧನ



**ಮುಂಬೈ:** ಇಸ್ರೇಲ್ ಜೊತೆಗಿನ ಯುದ್ಧದ ಮಧ್ಯೆ ಪ್ಯಾಲೆಸ್ಟೈನ್‌ಗೆ ಬೆಂಬಲ ನೀಡುವುದಾಗಿ ಹೇಳಿ 4 ಕೋಟಿ ರೂ.ಗೂ ಹೆಚ್ಚು ಹಣವನ್ನು ಅಕ್ರಮವಾಗಿ ಸಂಗ್ರಹಿಸಿದ ಆರೋಪದ ಮೇಲೆ ಮಹಾರಾಷ್ಟ್ರದ ಬೀಡ್ ಜಿಲ್ಲೆಯಲ್ಲಿ ಇಬ್ಬರನ್ನು ಬಂಧಿಸಿದ್ದಾರೆ. ಇಸ್ರೇಲ್ ಮತ್ತು ಹಮಾಸ್ ನಡುವಿನ ಹೋರಾಟ ಕಳೆದ 2023 ಅ.7 ರಿಂದ ಪ್ರಾರಂಭವಾದಾಗಿದ್ದು 2025 ರ ಅಕ್ಟೋಬರ್‌ನಲ್ಲಿ ಗಾಜಾದಲ್ಲಿ ಹೋರಾಟವನ್ನು ನಿಲ್ಲಿಸಲು ಕದನ ವಿರಾಮ ಜಾರಿಗೆ ಬಂದಿದೆ. ಇತ್ತೀಚೆಗೆ ಸ್ಥಳೀಯ ಪೊಲೀಸರು ಮತ್ತು ಭಯೋತ್ಪಾದನಾ ನಿಗ್ರಹ ಘಟಕವು ಶಂಕಿತ ಭಯೋತ್ಪಾದಕ ನಿಧಿಯ ಬಗ್ಗೆ ನಿರ್ದಿಷ್ಟ ಮಾಹಿತಿಯನ್ನು ಸಂಗ್ರಹಿಸಿತ್ತು. ನಂತರ ಮಜಲ್‌ಗಾಂವ್‌ನ ಪಟ್ರುಡ್ ಗ್ರಾಮದಲ್ಲಿ ಶೋಧ ನಡೆಸಲಾಗಿ ಪ್ಯಾಲೆಸ್ಟೈನ್‌ಗೆ ಬೆಂಬಲ ನೀಡುವ ನೆಪದಲ್ಲಿ ಆರೋಪಿಗಳು 4 ಕೋಟಿ ರೂ.ಗೂ ಹೆಚ್ಚು ಹಣವನ್ನು ಸಂಗ್ರಹಿಸಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ. ದತ್ತಿ ಇಲಾಖೆಯಲ್ಲಿ ನೋಂದಾಯಿಸದ ಟ್ರಸ್ಟ್‌ನ ಬ್ಯಾಂಕ್ ಖಾತೆಯಲ್ಲಿ ಹಣವನ್ನು ಸಂಗ್ರಹಿಸಲಾಗಿದೆ. ಇದು ಹಣ ಸಂಗ್ರಹಣೆಯನ್ನು ಕಾನೂನುಬಾಹಿರಗೊಳಿಸುತ್ತದೆ.

ಮಜಲ್‌ಗಾಂವ್ ಗ್ರಾಮೀಣ ಪೊಲೀಸರು ನಾಲ್ವರ ವಿರುದ್ಧ ವಂಚನೆ ಮತ್ತು ವಂಚನೆಯ ಪ್ರಕರಣವನ್ನು ದಾಖಲಿಸಿದ್ದಾರೆ, ಅವರಲ್ಲಿ ಇಬ್ಬರನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದರು.

ಆರೋಪಿಗಳು ಯಾವುದೇ ನಿಷೇಧಿತ ಸಂಘಟನೆಯೊಂದಿಗೆ ಸಂಪರ್ಕ ಹೊಂದಿದ್ದಾರೆಯೇ ಮತ್ತು ಅವರು ಸಂಗ್ರಹಿಸಿದ ಮೊತ್ತವು ಭಯೋತ್ಪಾದನಾ ನಿಧಿಯ ಭಾಗವಾಗಿದೆಯೇ ಎಂದು ಪೊಲೀಸರು ಪರಿಶೀಲಿಸುತ್ತಿದ್ದಾರೆ ಎಂದು ಅಧಿಕಾರಿ ಹೇಳಿದರು.

## ಮಿನಿ ನ್ಯೂಸ್

### ಲಕ್ನೋದಲ್ಲಿ ಎಲೆಕ್ಟ್ರಿಕ್ ಬಸ್ ಘಟಕ ಲೋಕಾರ್ಪಣೆ ಮಾಡಿದ ಹೆಚ್‌ಡಿಕೆ

**ಲಕ್ನೋ:** ನಗರದಲ್ಲಿ ಅಶೋಕ್ ಲೇ ಲ್ಯಾಂಡ್‌ನ ಎಲೆಕ್ಟ್ರಿಕ್ ಬಸ್ ಉತ್ಪಾದನಾ ಘಟಕವನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಲೋಕಾರ್ಪಣೆ ಮಾಡಿದ್ದಾರೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಉಪಮುಖ್ಯಮಂತ್ರಿ ಕೇಶವ ಪ್ರಸಾದ್ ಶರ್ಮ ಅವರು ಈ ಸಮಾರಂಭದಲ್ಲಿ ಭಾಗಿಯಾಗಿದ್ದರು.

ಈ ಮಹತ್ವದ ಯೋಜನೆಯು ಪ್ರಧಾನಿ ನರೇಂದ್ರ ಮೋದಿ ಅವರ ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತ ಪರಿಕಲ್ಪನೆಯನ್ನು ಬಲಪಡಿಸುತ್ತದೆ. ಸ್ವಚ್ಛ, ಸುಸ್ಥಿರ ಚಲನಶೀಲತೆಯತ್ತ ಭಾರತದ ಪರಿವರ್ತನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದು ಕೇಂದ್ರ ಸಚಿವರು ತಿಳಿಸಿದ್ದಾರೆ.

### ಟ್ರಂಪ್‌ಗೆ ಮೋದಿ ಕರೆ ಮಾಡಿಲ್ಲ: ಭಾರತ

**ನವದೆಹಲಿ:** ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್ ಹೇಳಿಕೆಗಳನ್ನು ತಿರಸ್ಕರಿಸಿದ ಭಾರತ ತಿರಸ್ಕರಿಸಿದೆ. ಲುಟ್ನಿಕ್ ಹೇಳಿಕೆಗಳು ನಿಖರವಾಗಿಲ್ಲ ಎಂದು ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ. ಭಾರತವು ಅಮೆರಿಕದೊಂದಿಗೆ ಪರಸ್ಪರ ಪ್ರಯೋಜನಕಾರಿ ವ್ಯಾಪಾರ ಒಪ್ಪಂದದಲ್ಲಿ ಆಸಕ್ತಿ ಹೊಂದಿದೆ. ಸಮತೋಲಿತ ಮತ್ತು ಪರಸ್ಪರ ಪ್ರಯೋಜನಕಾರಿ ವ್ಯಾಪಾರ ಒಪ್ಪಂದಕ್ಕೆ ತಲುಪಲು ಭಾರತ ಮತ್ತು ಅಮೆರಿಕ ಹಲವು ಸುತ್ತಿನ ಮಾತುಕತೆಗಳನ್ನು ನಡೆಸಿವೆ ಎಂದು ಜೈಸ್ವಾಲ್ ಹೇಳಿದ್ದಾರೆ. ಹಲವು ಹಂತಗಳಲ್ಲಿ ಎರಡು ದೇಶಗಳು ಒಪ್ಪಂದಕ್ಕೆ ಸಹಮತ ವ್ಯಕ್ತಪಡಿಸಿದ್ದವು. ಎರಡು ಪೂರಕ ಆರ್ಥಿಕತೆಗಳ ನಡುವಿನ ಪರಸ್ಪರ ಪ್ರಯೋಜನಕಾರಿ ವ್ಯಾಪಾರ ಒಪ್ಪಂದದಲ್ಲಿ ನಾವು ಆಸಕ್ತಿ ಹೊಂದಿದ್ದೇವೆ. ಒಪ್ಪಂದ ಅಂತಿಮಗೊಳಿಸಲು ಎದುರು ನೋಡುತ್ತಿದ್ದೇವೆ ಎಂದಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ದೂರವಾಣಿ ಕರೆ ಮಾಡದ ಕಾರಣ, ದೀರ್ಘ ಕಾಲದಿಂದ ಚರ್ಚಿಸಲಾಗಿದ್ದ ಭಾರತ-ಅಮೆರಿಕಾ ವ್ಯಾಪಾರ ಒಪ್ಪಂದವು ಕಾರ್ಯರೂಪಕ್ಕೆ ಬರಲು ವಿಫಲವಾಗಿದೆ ಎಂದು ಸೂಚಿಸುವ ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್ ಹೇಳಿಕೆ ನೀಡಿದ್ದರು.

### ಕಂದಕಕ್ಕೆ ಉರುಳಿದ ಬಸ್: ಭೀಕರ ಅಪಘಾತದಲ್ಲಿ 9 ಮಂದಿ ಸಾವು

**ಸಿರ್ಮೌರ್:** ಹಿಮಾಚಲ ಪ್ರದೇಶದ ಸಿರ್ಮೌರ್ ಜಿಲ್ಲೆಯಲ್ಲಿ ಶುಕ್ರವಾರ ಮಧ್ಯಾಹ್ನ ಖಾಸಗಿ ಬಸ್ಸೊಂದು ಸುಮಾರು 500 ಅಡಿ ಆಳದ ಕಂದಕಕ್ಕೆ ಉರುಳಿಬಿದ್ದಿದ್ದು, ಭೀಕರ ಅಪಘಾತದಲ್ಲಿ ಕನಿಷ್ಠ 9 ಜನ ಮೃತಪಟ್ಟಿದ್ದಾರೆ ಮತ್ತು ಸುಮಾರು 40 ಜನ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಶಿಮ್ಲಾದಿಂದ ರಾಜ್‌ಗಢ ಮೂಲಕ ಕುಪ್ವಿಗೆ ಹೋಗುತ್ತಿದ್ದ ಬಸ್ ಹರಿಪುರ್ಧರ್ ಗ್ರಾಮದ ಬಳಿ ಚಾಲಕನ ನಿಯಂತ್ರ ತಪ್ಪಿ ರಸ್ತೆಯಿಂದ ಕಂದಕಕ್ಕೆ ಉರುಳಿ ಬಿದ್ದಿದೆ. ರಕ್ಷಣಾ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸುತ್ತಿರುವ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ (ಎಸ್‌ಡಿಎಂ) ಸಂಗ್ರಾಹ್ ಸುನಿಲ್ ಕಾಯತ್ ಅವರು, ಅಪಘಾತದಲ್ಲಿ 9 ಜನ ಮೃತಪಟ್ಟಿದ್ದಾರೆ. ರಕ್ಷಣಾ ಕಾರ್ಯಾಚರಣೆ ಸಮರೋಪಾದಿಯಲ್ಲಿ ನಡೆಯುತ್ತಿವೆ ಎಂದು ಹೇಳಿದ್ದಾರೆ.

### ಜೀವ ಬೆದರಿಕೆ ಮೂಲಕ ನನ್ನನ್ನು ತಡೆಯಲು ಸಾಧ್ಯವಿಲ್ಲ: ಬೋಸ್

**ಕೋಲ್ಕತ್ತಾ:** ಯಾವುದೇ ಶಕ್ತಿಯು ತಮ್ಮನ್ನು ತಡೆಯಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದ ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರು ರಾಜ್ಯದ ಜನರಿಗಾಗಿ ಕೆಲಸ ಮಾಡುವುದನ್ನು ಮುಂದುವರಿಸುವುದಾಗಿ ಶುಕ್ರವಾರ ಹೇಳಿದ್ದಾರೆ. ರಾತ್ರಿ ಇಮೇಲ್ ಮೂಲಕ ತಮಗೆ ಬಂದ ಜೀವ ಬೆದರಿಕೆಯನ್ನು ಉಲ್ಲೇಖಿಸಿದ ಬೋಸ್, ಇದು ಬಂಗಾಳದ ಸಾಮಾನ್ಯ ಜನರಿಗಾಗಿ ನಾನು ನಡೆಸುತ್ತಿರುವ ಹೋರಾಟವನ್ನು ನಿಲ್ಲಿಸುವ ಪ್ರಯತ್ನ ಎಂದರು. ನನಗೆ ಬೆದರಿಕೆ ಹಾಕಿರುವುದು ಇದೇ ಮೊದಲಲ್ಲ. ಬಂಗಾಳದ ಜನ ನನ್ನನ್ನು ರಕ್ಷಿಸುತ್ತಾರೆ. ಯಾವುದೇ ಭದ್ರತಾ ಸಿಬ್ಬಂದಿ ಇಲ್ಲದೆಯೂ ಕೋಲ್ಕತ್ತಾದ ಬೀದಿಗಿಳಿಯುವುದಾಗಿ ಬೋಸ್ ಹೇಳಿದರು. ಇಂತಹ ಬೆದರಿಕೆಗಳ ಮೂಲಕ ಬಂಗಾಳದ ಜನರಿಗಾಗಿ ಕೆಲಸ ಮಾಡುವುದನ್ನು ತಡೆಯಲು ಸಾಧ್ಯವಿಲ್ಲ. ಬಂಗಾಳ ನನ್ನ ಮನೆ, ನಾನು ಬಂಗಾಳದ ಮಗ. ಈ ಭೂಮಿಗಾಗಿ ನನ್ನ ಪ್ರಾಣವನ್ನು ತ್ಯಜಿಸಲು ನಾನು ಹೆದರುವುದಿಲ್ಲ ಎಂದು ಬೋಸ್ ಪಿಟಿಐಗೆ ತಿಳಿಸಿದ್ದಾರೆ.

ನನಗೆ ಜೀವ ಬೆದರಿಕೆ ಎದುರಾಗಿದ್ದು ಇದೇ ಮೊದಲಲ್ಲ. ಕಳೆದ ವರ್ಷ ಮುರ್ಷಿದಾಬಾದ್ ಪ್ರವಾಸದಲ್ಲಿ ಯಾರೋ ಜೀವಂತ ದೇಶಿ ನಿರ್ಮಿತ ಬಾಂಬ್ ಹಸ್ತಾಂತರಿಸಿದ್ದರು. ನನ್ನ ಎಡಿಸಿ ತಕ್ಷಣ ಅದನ್ನು ತೆಗೆದುಕೊಂಡು ಹೋಗಿ ನೀರಿನ ಟಬ್‌ನಲ್ಲಿ ಇಟ್ಟರು ಎಂದು ಅವರು ಹೇಳಿದರು.

## ಉಕ್ರೇನ್ ಮೇಲೆ ರಷ್ಯಾದ ಕ್ಷಿಪಣಿ ದಾಳಿ ಮೂವರ ದುರ್ಮರಣ



**ಕೈವ್:** ರಷ್ಯಾ ಪಡೆಗಳು ತಡರಾತ್ರಿಯವರೆಗೆ ಉಕ್ರೇನ್ ಮೇಲೆ ಡ್ರೋನ್‌ಗಳು ಮತ್ತು ಕ್ಷಿಪಣಿಗಳ ದಾಳಿಗಳ ಮಳೆ ಸುರಿಸಿದೆ.ಈ ದಾಳಿಯಲ್ಲಿ ಮೂವರು ಸಾವನ್ನಪ್ಪಿದ್ದು, ಕನಿಷ್ಠ 16 ಜನರು ಗಾಯಗೊಂಡಿದ್ದಾರೆ ಎಂದು ಉಕ್ರೇನಿಯನ್ ಅಧಿಕಾರಿಗಳು ತಿಳಿಸಿದ್ದಾರೆ. ಗುರುತಿಸಲಾಗದ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಬಳಸಿಕೊಂಡು ಪಶ್ಚಿಮ ನಗರವಾದ ಎಲ್ವಿವ್‌ನಲ್ಲಿನ ನಿರ್ಣಾಯಕ ಮೂಲಸೌಕರ್ಯವನ್ನು ರಷ್ಯಾ ಸಹ ಹೊಡೆದಿದೆ ಎಂದು ಮೇಯರ್ ಆಂಡ್ರಿ ಸಡೋವಿ ಹೇಳಿದರು. ಕ್ಷಿಪಣಿ ಗಂಟೆಗೆ 13,000 ಕಿಲೋಮೀಟರ್ ವೇಗದಲ್ಲಿ ಪ್ರಯಾಣಿಸಿದೆ ಮತ್ತು ನಿರ್ದಿಷ್ಟ ರೀತಿಯ ರಾಕೆಟ್ ಅನ್ನು ತನಿಖೆ ಮಾಡಲಾಗುತ್ತಿದೆ ಎಂದು ಉಕ್ರೇನ್‌ನ ವಾಯುಪಡೆಯ ಪಶ್ಚಿಮ ಕಮಾಂಡ್ ನಂತರ ಹೇಳಿದೆ.ಕೈವ್‌ನ ಹಲವಾರು ಜಿಲ್ಲೆಗಳು ದಾಳಿಯಲ್ಲಿ ಗಾಯಗೊಂಡಿವೆ ಎಂದು ಕೈವ್ ನಗರ ಮಿಲಿಟರಿ ಆಡಳಿತದ ಮುಖ್ಯಸ್ಥ ಟೈಮರ್ ಟ್ಕಾಚೆಂಕೊ ಹೇಳಿದರು. ಡೆಸ್ನ್ಯಾನ್ಸ್ಕಿ ಜಿಲ್ಲೆಯಲ್ಲಿ, ಡ್ರೋನ್ ಬಹುಮಹಡಿ ಕಟ್ಟಡದ ಛಾವಣಿಯ ಮೇಲೆ ಅಪ್ಪಳಿಸಿತು. ಅದೇ ಜಿಲ್ಲೆಯ ಮತ್ತೊಂದು ವಿಳಾಸದಲ್ಲಿ, ದಾಳಿಯ ಪರಿಣಾಮವಾಗಿ ವಸತಿ ಕಟ್ಟಡದ ಮೊದಲ ಎರಡು ಮಹಡಿಗಳು ಹಾನಿಗೊಳಗಾದವು. ಡ್ನಿಪ್ರೊ ಜಿಲ್ಲೆಯಲ್ಲಿ, ಡ್ರೋನ್‌ನ ಭಾಗಗಳು ಬಹುಮಹಡಿ ಕಟ್ಟಡವನ್ನು ಹಾನಿಗೊಳಿಸಿದವು ಮತ್ತು ಬೆಂಕಿ ಕಾಣಿಸಿಕೊಂಡಿತು.ದಾಳಿಯ ಪರಿಣಾಮವಾಗಿ ರಾಜಧಾನಿಯ ಕೆಲವು ಭಾಗಗಳಲ್ಲಿ ಹರಿಯುವ ನೀರು ಮತ್ತು ವಿದ್ಯುತ್ ಸಂಪರ್ಕ ಕಡಿತಗೊಂಡಿದೆ ಎಂದು ಕೈವ್‌ನ ಮೇಯರ್ ವಿಟಾಲಿ ಕ್ಲಿಟ್ಸ್ಕೊ ಹೇಳಿದರು.

ಉಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ರಷ್ಯಾ ದೊಡ್ಡ ಪ್ರಮಾಣದ ದಾಳಿ ನಡೆಸುವ ಉದ್ದೇಶ ಹೊಂದಿದೆ ಎಂದು ರಾಷ್ಟ್ರಕ್ಕೆ ಎಚ್ಚರಿಕೆ ನೀಡಿದ ಕೆಲವೇ ಗಂಟೆಗಳಲ್ಲಿ ಈ ದಾಳಿ ನಡೆದಿದೆ. ರಾಜಧಾನಿಯಲ್ಲಿನ ಶೀತ ಹವಾಮಾನದ ಲಾಭ ಪಡೆಯಲು ರಷ್ಯಾ ಗುರಿಯನ್ನು ಹೊಂದಿದ್ದು, ರಸ್ತೆಗಳು ಮತ್ತು ಬೀದಿಗಳು ಅಪಾಯಕಾರಿಯಾಗಿ ಹಿಮಾವೃತವಾಗಿವೆ ಎಂದು ಅವರು ಹೇಳಿದರು

## ಸೊಂಟಕ್ಕೆ ಬಾಳೆಎಲೆ ಸುತ್ತಿಕೊಂಡು ರೈತರಿಂದ ವಿನೂತನ ಪ್ರತಿಭಟನೆ

**ಭೂಪಾಲ್:** ಮಧ್ಯಪ್ರದೇಶದ ಬುರ್ಹಾನ್‌ಪುರ ಜಿಲ್ಲೆಯಲ್ಲಿ ಪಾಂಗ್ರಿ ಅಣೆಕಟ್ಟು ಯೋಜನೆಯಲ್ಲಿ ನ್ಯಾಯಯುತ ಪರಿಹಾರಕ್ಕಾಗಿ ಆಗ್ರಹಿಸಿ ರೈತರು, ತಮ್ಮ ಸೊಂಟಕ್ಕೆ ಬಾಳೆ ಮತ್ತು ತಲೆಗೆ ತೇಗದ ಎಲೆಗಳನ್ನು ಕಟ್ಟಿಕೊಂಡು ಅರೆಬೆತ್ತಲೆ ಮೆರವಣಿಗೆ ಮೂಲಕ ವಿನೂತನ ಪ್ರತಿಭಟನೆ ನಡೆಸಿದರು.

ರೈತರು ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ಗಮನ ಸೆಳೆಯುವ ಉದ್ದೇಶದಿಂದ ಅರೆಬೆತ್ತಲೆ ಮೆರವಣಿಗೆ ನಡೆಸಿ, 2013 ರ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಒದಗಿಸಲಾದ ಗ್ರಾಮೀಣ ಪ್ರದೇಶಗಳಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿಗೆ ಮಾರುಕಟ್ಟೆ ಮೌಲ್ಯಕ್ಕಿಂತ ದುಪ್ಪಟ್ಟು ಪರಿಹಾರ ನೀಡಬೇಕೆಂದು ಆಗ್ರಹಿಸಿದರು. ಮೂರು ವರ್ಷಗಳ ಕಾಲ ಧರಣಿ, ಜ್ಞಾಪಕಪತ್ರಗಳು ಮತ್ತು ಶಾಂತಿಯುತ ಆಂದೋಲನಗಳ ನಂತರ ಈ ಪ್ರತಿಭಟನೆ ನಡೆಸಲಾಗುತ್ತಿದೆ. ಆಡಳಿತಕ್ಕೆ ಪದೇ ಪದೇ ಮನವಿ ಮಾಡಿದರೂ, ರೈತರು ತಮ್ಮ ಬೇಡಿಕೆಗಳು ಬಗೆಹರಿಯದೆ ಉಳಿದಿವೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ವಸತಿಯಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ ಕಾಯ್ದೆ, 2013 ಗ್ರಾಮೀಣ ಪ್ರದೇಶಗಳಲ್ಲಿನ ಕೃಷಿ ಭೂಮಿಯನ್ನು ಸಾರ್ವಜನಿಕ ಯೋಜನೆಗಳಿಗಾಗಿ ಸ್ವಾಧೀನಪಡಿಸಿಕೊಂಡಾಗ ವರ್ಧಿತ ಪರಿಹಾರ ಮತ್ತು ಸರಿಯಾದ ಪುನರ್ವಸತಿಗೆ ಸ್ಪಷ್ಟವಾಗಿ ಅವಕಾಶ ನೀಡುತ್ತದೆ. ಈ ನಿಬಂಧನೆಗಳನ್ನು ಅವರ ಪ್ರಕರಣದಲ್ಲಿ ಗೌರವಿಸಲಾಗಿಲ್ಲ ಎಂದು ಅವರು ದೂರಿದ್ದಾರೆ. ಆಂದೋಲನವನ್ನು ಮುನ್ನಡೆಸುತ್ತಿರುವ ಡಾ. ರವಿಕುಮಾರ್ ಪಟೇಲ್, ಸರ್ಕಾರವು ರೈತರ ಬೇಡಿಕೆಗಳನ್ನು ನಿರ್ಲಕ್ಷಿಸುವುದನ್ನು ಮುಂದುವರಿಸಿದರೆ, ಪ್ರತಿಭಟನೆಯನ್ನು ತೀವ್ರಗೊಳಿಸಲಾಗುವುದು ಮುಂದಾಗುವ ಸಮಸ್ಯೆಗಳಿಗೆ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ ಎಂದು ಎಚ್ಚರಿಸಿದ್ದಾರೆ.

**ಆಕ್ರೋಶ**

**ಆರ್ಟಿಕಲ್ 21 ಮತ್ತು ಆಸ್ತಿಯ ಹಕ್ಕನ್ನು ರಕ್ಷಿಸುವ ಆರ್ಟಿಕಲ್ 300ಎ ಅನ್ನು ಉಲ್ಲೇಖಿಸಿ, ಪಾರದರ್ಶಕತೆ, ಒಪ್ಪಿಗೆ ಮತ್ತು ನ್ಯಾಯಯುತ ಪರಿಹಾರವಿಲ್ಲದೆ ಭೂಮಿಯನ್ನು ಪಡೆಯಲು ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.**



## ಮಹಾರಾಷ್ಟ್ರದಲ್ಲಿ 'ಹೊಸ ಟ್ವಿಸ್ಟ್'
### ಬಿಜೆಪಿ ಹೊರಗಿಡಲು ಸೇನಾ- ಎನ್ ಸಿಪಿ ಮೈತ್ರಿ

**ಥಾಣೆ:** ದಿನಕ್ಕೊಂದು ರೀತಿಯ ಬೆಳವಣಿಗೆಗಳಿಂದ ಮಹಾರಾಷ್ಟ್ರ ರಾಜಕೀಯ ಗಮನ ಸೆಳೆಯುತ್ತಿದೆ. ಇದೀಗ ಮತ್ತೊಂದು ಟ್ವಿಸ್ಟ್‌ನಲ್ಲಿ ಅಂಬರ್ ನಾಥ್ ನ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಏಕನಾಥ್ ಶಿಂಧೆ ಅವರ ಶಿವಸೇನೆ ಮತ್ತು ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಮತ್ತೋರ್ವ ಪಕ್ಷೇತರ ಅಭ್ಯರ್ಥಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದು, ಅಧಿಕಾರದ ಚುಕ್ಕಾಣಿ ಹಿಡಿಯಲು ಪ್ರಯತ್ನಿಸುತ್ತಿವೆ.

ಥಾಣೆ ಜಿಲ್ಲೆಯ ಅಂಬರ್‌ನಾಥ್ ಸ್ಥಳೀಯ ಸಂಸ್ಥೆಯಲ್ಲಿ ಅಧಿಕಾರ ಹಿಡಿಯುವ ಪ್ರಯತ್ನದಲ್ಲಿ ತಮ್ಮ ಪಕ್ಷ, ಎನ್‌ಸಿಪಿ ಮತ್ತು ಓರ್ವ ಪಕ್ಷೇತರ ಅಭ್ಯರ್ಥಿಯೊಂದಿಗೆ ಮೈತ್ರಿ ಮಾಡಿಕೊಂಡಿದೆ ಎಂದು ಶಿವಸೇನೆಯ ಹಿರಿಯ ಸ್ಥಳೀಯ ನಾಯಕರೊಬ್ಬರು ಖಚಿತಪಡಿಸಿದ್ದಾರೆ. ಈ ಹೊಸ ಮೈತ್ರಿ ರಚನೆ ಕುರಿತು ಜಿಲ್ಲಾಧಿಕಾರಿಗಳಿಗೆ ಪತ್ರ ಸಲ್ಲಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಅಮಾನತುಗೊಂಡ 12 ಕಾಂಗ್ರೆಸ್ ಕೌನ್ಸಿಲರ್‌ಗಳು ಬಿಜೆಪಿ ಸೇರಿದ ಒಂದು ದಿನದ ನಂತರ ಈ ಬೆಳವಣಿಗೆ ನಡೆದಿದೆ.

ಬಿಜೆಪಿ ನೇತೃತ್ವದ ಮಹಾಯುತಿ ಸರ್ಕಾರದಲ್ಲಿ ಸೇನೆ ಮತ್ತು ಎನ್‌ಸಿಪಿ ಎರಡೂ ಮಿತ್ರಪಕ್ಷಗಳಾಗಿವೆ. ಈ ಬೆಳವಣಿಗೆ ಕಾಂಗ್ರೆಸ್ ಕೌನ್ಸಿಲರ್‌ಗಳನ್ನು ಸೇರಿಸಿಕೊಂಡು ಅಧಿಕಾರ ಹಿಡಿಯಲು ಹವಣಿಸುತ್ತಿದ್ದ



ಬಿಜೆಪಿಯನ್ನು ಅಸಮಾಧಾನಗೊಳಿಸಿದೆ ಎಂದು ಅವರು ಹೇಳಿದ್ದಾರೆ. ಎನ್‌ಸಿಪಿ ನಾಯಕರೊಬ್ಬರು ಕೂಡ ಈ ಬೆಳವಣಿಗೆಯನ್ನು ಖಚಿತಪಡಿಸಿದ್ದಾರೆ.

ಡಿಸೆಂಬರ್ 20 ರ ಸ್ಥಳೀಯ ಚುನಾವಣೆಯ ನಂತರ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಶಿವಸೇನಾ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ ಬಿಜೆಪಿ 'ಅಂಬರ್ ನಾಥ್ ವಿಕಾಸ್ ಆಘಾಡಿ' ಹೆಸರಲ್ಲಿ ಕಾಂಗ್ರೆಸ್ ಕೌನ್ಸಿಲರ್‌ಗಳನ್ನು ಸೇರಿಸಿಕೊಂಡು ಅಧಿಕಾರ ಹಿಡಿಯಲು ಯತ್ನಿಸಿತ್ತು. ಇದರಲ್ಲಿ ಅಜಿತ್ ಪವಾರ್ ಅವರ ಎನ್ ಸಿಪಿ ಕೂಡಾ ಇತ್ತು.

60 ಸದಸ್ಯರ ಸ್ಥಳೀಯ ಸಂಸ್ಥೆಯಲ್ಲಿ ಎವಿಎ 31 ಸ್ಥಾನಗಳಲ್ಲಿ ಬಹುಮತವನ್ನು ಪಡೆದಿದ್ದರೆ, ಶಿವಸೇನೆ 27, ಬಿಜೆಪಿ 14, ಕಾಂಗ್ರೆಸ್ 12, ಎನ್‌ಸಿಪಿ 4, ಇಬ್ಬರು ಸ್ವತಂತ್ರ ಅಭ್ಯರ್ಥಿಗಳೂ ಆಯ್ಕೆಯಾಗಿದ್ದಾರೆ. ಈಗ ಓರ್ವ ಸ್ವತಂತ್ರ ಅಭ್ಯರ್ಥಿ ಬೆಂಬಲದೊಂದಿಗೆ ಶಿವಸೇನಾ-ಎನ್ ಸಿಪಿ ಬಲವೂ 32ಕ್ಕೆ ಏರಿದೆ.

## ಅಮೆರಿಕ ವಶಪಡಿಸಿಕೊಂಡ ರಷ್ಯಾದ ತೈಲ ಟ್ಯಾಂಕರ್ ಹಡಗಿನಲ್ಲಿರುವ 3 ಭಾರತೀಯರ ಬಿಡುಗಡೆಗೆ ಮನವಿ

**ಮಾಸ್ಕೋ:** ಅಮೆರಿಕಾದ ಪಡೆಗಳು ಉತ್ತರ ಅಟ್ಲಾಂಟಿಕ್‌ನಲ್ಲಿ ರಷ್ಯಾದ ಧ್ವಜಹೊಂದಿದ್ದ ಮರಿನರಾ ಎಂಬ ತೈಲ ಟ್ಯಾಂಕರ್ ಅನ್ನು ವಶಪಡಿಸಿಕೊಂಡಿವೆ. ಈ ಟ್ಯಾಂಕರ್‌ನಲ್ಲಿ ಮೂವರು ಭಾರತೀಯರು ಸೇರಿದಂತೆ ಒಟ್ಟು 28 ಮಂದಿ ಸಿಬ್ಬಂದಿ ಇದ್ದರು.


ಅಮೆರಿಕಾದ ಪ್ರಕಾರ, ಈ ಟ್ಯಾಂಕರ್ ಅಮೆರಿಕಾದ ನಿರ್ಬಂಧಗಳನ್ನು ಉಲ್ಲಂಘಿಸಿ, ನಿರ್ಬಂಧಿತ ತೈಲವನ್ನು ಸಾಗಿಸುತ್ತಿತ್ತು. ಆದರೆ, ರಷ್ಯಾ ಈ ಕ್ರಮವನ್ನು ಅಂತರರಾಷ್ಟ್ರೀಯ ಕಾನೂನುಗಳ ಉಲ್ಲಂಘನೆ ಎಂದು ಖಂಡಿಸಿದೆ.

ವೆನೆಜುವೆಲಾದ ಬಳಿ ಮರಿನರಾ ಟ್ಯಾಂಕರ್ ಅಮೆರಿಕಾದ ದಿಗ್ಬಂಧನದಿಂದ ತಪ್ಪಿಸಿಕೊಂಡು ಓಡುತ್ತಿದ್ದಾಗ ಅದನ್ನು ವಶಪಡಿಸಿಕೊಂಡಿವೆ. ಅಮೆರಿಕಾದ ಕೋಸ್ಟ್ ಗಾರ್ಡ್ ಹಡಗು ಹಲವು ವಾರಗಳಿಂದ ಈ ಟ್ಯಾಂಕರ್ ಅನ್ನು ಹಿಂಬಾಲಿಸುತ್ತಿತ್ತು. ಟ್ಯಾಂಕರ್‌ನಲ್ಲಿ ರಷ್ಯಾದ ಸಬ್‌ಮೆರೀನ್ ರಕ್ಷಣೆ ಇದ್ದರೂ, ಅಮೆರಿಕಾದ ಪಡೆಗಳು ಫೆಡರಲ್ ವಾರೆಂಟ್ ಪಡೆದು ಹಡಗನ್ನು ಏರಿ ವಶಪಡಿಸಿಕೊಂಡಿವೆ.

**ಹಡಗಿನಲ್ಲಿ ಮೂವರು ಭಾರತೀಯರು:** ಮರಿನರಾ' ಟ್ಯಾಂಕರ್‌ನಲ್ಲಿ 17 ಉಕ್ರೇನಿಯನ್, 6 ಜಾರ್ಜಿಯನ್, 3 ಭಾರತೀಯ ಮತ್ತು 2 ರಷ್ಯನ್ ನಾಗರಿಕರು ಸಿಬ್ಬಂದಿಗಳಾಗಿದ್ದರು ಎಂದು ರಷ್ಯಾ ಟುಡೇ ವರದಿ ಮಾಡಿದೆ. ಈ ಟ್ಯಾಂಕರ್ ಗಯಾನಾ ಧ್ವಜದ ಅಡಿಯಲ್ಲಿ ಚಾರ್ಟರ್ ಆಗಿತ್ತು. ಆದರೆ, ಡಿಸೆಂಬರ್ 24, 2025 ರಂದು, ಹಡಗು ರಷ್ಯಾದ ಧ್ವಜದ ಅಡಿಯಲ್ಲಿ ಸಂಚರಿಸಲು ತಾತ್ಕಾಲಿಕ ಅನುಮತಿ ಪಡೆದಿತ್ತು. ಇದು ಅಂತರರಾಷ್ಟ್ರೀಯ ಕಾನೂನಿನ ಪ್ರಕಾರವೇ ನಡೆದಿತ್ತು ಎಂದು ರಷ್ಯಾ ಹೇಳಿದೆ.

**ರಷ್ಯಾ ತೀವ್ರ ಆಕ್ಷೇಪ:** ಅಮೆರಿಕಾದ ಈ ಕ್ರಮಕ್ಕೆ ರಷ್ಯಾ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಅಮೆರಿಕಾದ ನಿರ್ಬಂಧ ಕಾನೂನುಗಳನ್ನು ಉಲ್ಲಂಘಿಸಿ ಈ ಟ್ಯಾಂಕರ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಮೆರಿಕಾ ಹೇಳಿದೆ. ಆದರೆ, ರಷ್ಯಾ ವಿದೇಶಾಂಗ ಸಚಿವಾಲಯ, ಅಮೆರಿಕಾ ಅಂತರರಾಷ್ಟ್ರೀಯ ಸಮುದ್ರ ಸಂಚಾರದ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಕಾನೂನುಗಳನ್ನು ಪಾಲಿಸಬೇಕು ಎಂದು ಆಗ್ರಹಿಸಿದೆ. ಮರಿನರಾ ಟ್ಯಾಂಕರ್ ಮತ್ತು ಇತರ ಕಾನೂನುಬದ್ಧವಾಗಿ ಸಂಚರಿಸುತ್ತಿರುವ ಹಡಗುಗಳ ವಿರುದ್ಧದ ಅಕ್ರಮ ಕ್ರಮಗಳನ್ನು ತಕ್ಷಣವೇ ನಿಲ್ಲಿಸುವಂತೆ ರಷ್ಯಾ ಅಮೆರಿಕಾವನ್ನು ಒತ್ತಾಯಿಸಿದೆ. ರಷ್ಯಾ, ಮರಿನರಾ ಟ್ಯಾಂಕರ್ ಅನ್ನು ಅಮೆರಿಕಾ ಅಕ್ರಮವಾಗಿ ವಶಪಡಿಸಿಕೊಂಡಿದೆ ಎಂದು ಆರೋಪಿಸಿದೆ. ಅಮೆರಿಕಾ ತನ್ನದೇ ಆದ ನಿರ್ಬಂಧ ಕಾನೂನುಗಳನ್ನು ತಪ್ಪಾಗಿ ಉಲ್ಲೇಖಿಸುತ್ತಿದೆ ಎಂದು ರಷ್ಯಾ ಹೇಳಿದೆ. ವೆನೆಜುವೆಲಾದ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಅಮೆರಿಕಾ ತನ್ನ ನಿಯಂತ್ರಣವನ್ನು ಸ್ಥಾಪಿಸುವ ವಿಶಾಲವಾದ ತಂತ್ರದ ಭಾಗವಾಗಿ ಮರಿನರಾ ವಶಪಡಿಸಿಕೊಳ್ಳಲಾಗಿದೆ ಎಂಬ ಅಮೆರಿಕಾ ಅಧಿಕಾರಿಗಳ ಹೇಳಿಕೆಗಳು ಅತ್ಯಂತ ಕುತಂತ್ರದಿಂದ ಕೂಡಿದೆ ಎಂದು ರಷ್ಯಾ ಖಂಡಿಸಿದೆ. ಇಂತಹ ನವ-ವಸಾಹತುಶಾಹಿ ಪ್ರವೃತ್ತಿಗಳನ್ನು ನಾವು ಬಲವಾಗಿ ತಿರಸ್ಕರಿಸುತ್ತೇವೆ ಎಂದು ರಷ್ಯಾ ವಿದೇಶಾಂಗ ಸಚಿವಾಲಯ ಹೇಳಿದೆ.

**ತಾಯ್ನಾಡಿಗೆ ಹಿಂದಿರುಗಿಸಿ:** ರಷ್ಯಾ, ವಶಪಡಿಸಿಕೊಂಡ ಟ್ಯಾಂಕರ್‌ನ ಸಿಬ್ಬಂದಿಗಳಿಗೆ ಮಾನವೀಯ ಮತ್ತು ಘನತೆಯುತವಾದ ವರ್ತನೆ ನೀಡಬೇಕು ಎಂದು ಒತ್ತಾಯಿಸಿದೆ.



- ರಷ್ಯಾ ಧ್ವಜವಿದ್ದ ತೈಲ ಟ್ಯಾಂಕರ್ ಹಡಗು 'ಮರಿನೇರಾ'ದಲ್ಲಿ ಮೂವರು ಭಾರತೀಯರು
- ಅಮೆರಿಕಾದ ಈ ಕ್ರಮಕ್ಕೆ ರಷ್ಯಾ ತೀವ್ರ ಆಕ್ಷೇಪ ವ್ಯಕ್ತ
- ಸಿಬ್ಬಂದಿಗಳನ್ನು ತಾಯ್ನಾಡಿಗೆ ತಕ್ಷಣವೇ ಹಿಂದಿರುಗಿಸಲು ಮನವಿ

# ಭಾರತವು ವಿಶ್ವದ ಅತ್ಯಂತ ವೇಗದ ಪ್ರಮುಖ ಆರ್ಥಿಕತೆಯಾಗಿ ಉಳಿಯಲಿದೆ: ವಿಶ್ವಸಂಸ್ಥೆ

## ಸ್ಥಿತಿಸ್ಥಾಪಕ ಖಾಸಗಿ ಬಳಕೆ ಮತ್ತು ಬಲವಾದ ಸಾರ್ವಜನಿಕ ಹೂಡಿಕೆಯು ಅಮೆರಿಕದ ಹೆಚ್ಚಿನ ಸುಂಕಗಳ ಪರಿಣಾಮವನ್ನು ಹೆಚ್ಚಾಗಿ ಸರಿದೂಗಿಸುತ್ತದೆ

**ವಿಶ್ವಸಂಸ್ಥೆ;** ಭಾರತವು 2026ರಲ್ಲಿ ಶೇಕಡಾ 6.6ರಷ್ಟು ಬೆಳವಣಿಗೆ ಹೊಂದುವ ನಿರೀಕ್ಷೆಯಿದೆ, ಇದು ಸವಾಲಿನ ಜಾಗತಿಕ ಪರಿಸರದಲ್ಲಿ ಅಸಾಧಾರಣವಾಗಿ ಹೆಚ್ಚಿನ ಬೆಳವಣಿಗೆ ದಾಖಲಿಸಿದೆ ಎಂದು ವಿಶ್ವಸಂಸ್ಥೆ ಹೇಳಿದೆ.

ಸ್ಥಿತಿಸ್ಥಾಪಕ ಖಾಸಗಿ ಬಳಕೆ ಮತ್ತು ಬಲವಾದ ಸಾರ್ವಜನಿಕ ಹೂಡಿಕೆಯು ಅಮೆರಿಕದ ಹೆಚ್ಚಿನ ಸುಂಕಗಳ ಪರಿಣಾಮವನ್ನು ಹೆಚ್ಚಾಗಿ ಸರಿದೂಗಿಸುತ್ತದೆ ಎಂದು ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಇಲಾಖೆ ಬಿಡುಗಡೆ ಮಾಡಿದ ವಿಶ್ವ ಆರ್ಥಿಕ ಪರಿಸ್ಥಿತಿ ಮತ್ತು ನಿರೀಕ್ಷೆಗಳು 2026 ವರದಿಯು ತಿಳಿಸಿದೆ.

ಭಾರತದ ಆರ್ಥಿಕ ಬೆಳವಣಿಗೆ 2025ರಲ್ಲಿ ಅಂದಾಜು 7.4 ಪ್ರತಿಶತದಿಂದ ಈ ವರ್ಷ ಶೇಕಡಾ 6.6ಕ್ಕೆ ಮಧ್ಯಮ ಎಂದು ಅಂದಾಜಿಸಿದೆ ಎಂದು ಹೇಳಿದೆ. ಇದೇ ವೇಳೆ ಭಾರತವು ವಿಶ್ವದ ಅತ್ಯಂತ ವೇಗದ ಪ್ರಮುಖ ಆರ್ಥಿಕತೆಯಾಗಿ ಉಳಿಯಲಿದೆ ಎಂದು ಸ್ಥಿತಿಸ್ಥಾಪಕ ಖಾಸಗಿ ಬಳಕೆ, ಬಲವಾದ ಸಾರ್ವಜನಿಕ ಹೂಡಿಕೆ, ಇತ್ತೀಚಿನ ತೆರಿಗೆ ಸುಧಾರಣೆಗಳು ಮತ್ತು ಕಡಿಮೆ ಬಡ್ಡಿ ದರಗಳು ಅಲ್ಪಾವಧಿಯ ಬೆಳವಣಿಗೆಯನ್ನು ಬೆಂಬಲಿಸುವ ನಿರೀಕ್ಷೆಯಿದೆ.

ಆದಾಗ್ಯೂ ಪ್ರಸ್ತುತ ದರಗಳು ಮುಂದುವರಿದರೆ 2026ರಲ್ಲಿ ಹೆಚ್ಚಿನ ಅಮೆರಿ ಸುಂಕಗಳು ರಫ್ತು ಕಾರ್ಯಕ್ಷಮತೆಯ ಮೇಲೆ ಪರಿಣಾಮ ಬೀರಬಹುದು.ಏಕೆಂದರೆ ಯುಎಸ್ ಮಾರುಕಟ್ಟೆಯು ಭಾರತದಿಂದ ಒಟ್ಟು ರಫ್ತಿನ ಸುಮಾರು 18 ಪ್ರತಿಶತವನ್ನು ಹೊಂದಿದೆ ಎಂದು ವರದಿ ಹೇಳಿದೆ.

> ಯುರೋಪಿಯನ್ ಒಕ್ಕೂಟ ಮತ್ತು ಮಧ್ಯಪ್ರಾಚ್ಯಕ್ಕೆ ಭಾರತದ ರಫ್ತು ಮಾರುಕಟ್ಟೆಗಳಲ್ಲಿ ವೈವಿಧ್ಯೀಕರಣ ಕಂಡುಬಂದಿದೆ ಎಂದು ಹೇಳಿದ್ದಾರೆ. ಭಾರತದಲ್ಲಿ ಬೆಳವಣಿಗೆಯ ದೇಶೀಯ ಚಾಲಕಗಳು ಅಸಾಧಾರಣವಾಗಿ ಪ್ರಬಲವಾಗಿವೆ ಎಂದು ಪುನರುಚ್ಚರಿಸಿದ ಮುಖರ್ಜಿ, ಈ ಸಮಯದಲ್ಲಿ ಭಾರತದಿಂದ ಪ್ರಬಲವಾದ ರಫ್ತುಗಳಲ್ಲಿ ಸೇವೆಗಳ ರಫ್ತು ಒಂದೂ. -ಶಾಂತನು ಮುಖರ್ಜಿ, ಯುಎನ್ ಡಿಇಎಸ್‌ಎ ಆರ್ಥಿಕ ವಿಶ್ಲೇಷಣೆ ಮತ್ತು ನೀತಿ ವಿಭಾಗದ ನಿರ್ದೇಶಕ

ಸುಂಕಗಳು ಕೆಲವು ಉತ್ಪನ್ನ ವರ್ಗಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದಾದರೂ, ಎಲೆಕ್ಟ್ರಾನಿಕ್ಸ್ ಮತ್ತು ಸ್ಮಾರ್ಟ್‌ಫೋನ್‌ಗಳಂತಹ ಪ್ರಮುಖ ರಫ್ತುಗಳು ವಿನಾಯಿತಿಯಾಗಿ ಉಳಿಯುವ ನಿರೀಕ್ಷೆಯಿದೆ ಎಂದು ಅದು ಹೇಳಿದೆ.

ಇದಲ್ಲದೆ ಯುರೋಪ್ ಮತ್ತು ಮಧ್ಯಪ್ರಾಚ್ಯ ಸೇರಿದಂತೆ ಇತರ ಪ್ರಮುಖ ಮಾರುಕಟ್ಟೆಗಳಿಂದ ಬಲವಾದ ಬೇಡಿಕೆಯು ಪರಿಣಾಮವನ್ನು ಭಾಗಶಃ ಸರಿದೂಗಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.

**ಹೆಚ್ಚಿನ ಬೆಳವಣಿಗೆ ದಾಖಲಿಕೆ**

ಪೂರೈಕೆಯ ಭಾಗದಲ್ಲಿ ಉತ್ಪಾದನೆ ಮತ್ತು ಸೇವಾ ವಲಯಗಳಲ್ಲಿನ ನಿರಂತರ ವಿಸ್ತರಣೆಯು ಮುನ್ಸೂಚನೆಯ ಅವಧಿಯಾದ್ಯಂತ ಬೆಳವಣಿಗೆಯ ಪ್ರಮುಖ ಚಾಲಕವಾಗಿ ಉಳಿಯುತ್ತದೆ. ಭಾರತದ ಬೆಳವಣಿಗೆಯನ್ನು ಸ್ಥಿತಿಸ್ಥಾಪಕ ಬಳಕೆ ಮತ್ತು ಬಲವಾದ ಸಾರ್ವಜನಿಕ ಹೂಡಿಕೆಯಿಂದ ಬೆಂಬಲಿಸಲಾಗುತ್ತದೆ ಎಂದು ಒತ್ತಿ ಹೇಳಿದೆ.

ಇತ್ತೀಚಿನ ತೆರಿಗೆ ಸುಧಾರಣೆಗಳು ಮತ್ತು ವಿತ್ತೀಯ ಸಡಿಲಿಕೆಯು ಹೆಚ್ಚುವರಿ ಅಲ್ಪಾವಧಿಯ ಬೆಂಬಲವನ್ನು ಒದಗಿಸಬೇಕು ಎಂದು ಅಮೆರಿಕ ಡಿಇಎಸ್‌ಎದ ಆರ್ಥಿಕ ವಿಶ್ಲೇಷಣೆ ಮತ್ತು ನೀತಿ ವಿಭಾಗದ ಜಾಗತಿಕ ಆರ್ಥಿಕ ಮೇಲ್ವಿಚಾರಣಾ ಶಾಖೆಯ ಹಿರಿಯ ಅರ್ಥಶಾಸ್ತ್ರಜ್ಞ ಮತ್ತು ಅಧಿಕಾರಿ ಇಂಗೊ ಪಿಟ್ಟರ್ಲೆ ಸುದ್ದಿಗಾರರಿಗೆ ತಿಳಿಸಿದ್ದಾರೆ. ದಕ್ಷಿಣ ಏಷ್ಯಾವು ಶೇಕಡಾ 5.6ರಷ್ಟು ವಿಸ್ತರಿಸುವ ಮೂಲಕ ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರದೇಶವಾಗಿ ಉಳಿಯುತ್ತದೆ ಮತ್ತು ಈ ಬೆಳವಣಿಗೆಯ ಬಹುಪಾಲು ಭಾರತದಿಂದ ಬಂದಿದೆ. ಅಲ್ಲಿ ಬಲವಾದ ದೇಶೀಯ ಬೇಡಿಕೆ, ಬಲವಾದ ಬೆಳೆ ಮತ್ತು ನಿರಂತರ ನೀತಿ ಬೆಂಬಲದಿಂದ ಬೆಂಬಲಿತವಾದ




ಹಣದುಬ್ಬರವನ್ನು ಕಡಿಮೆ ಮಾಡುವುದು ಬೆಳವಣಿಗೆಗೆ ಚಾಲನೆ ನೀಡುತ್ತದೆ. ಭಾರತೀಯ ರಿಸರ್ವ್ ಬ್ಯಾಂಕ್ ಬಡ್ಡಿದರಗಳನ್ನು ಕಡಿಮೆ ಮಾಡಬಹುದು ಮತ್ತು ವಿತ್ತೀಯ ಪ್ರಚೋದನೆಯನ್ನು ಒದಗಿಸಬಹುದು.

> ಭಾರತವು ಭೌತಿಕ ಮತ್ತು ಡಿಜಿಟಲ್ ಮೂಲಸೌಕರ್ಯ, ರಕ್ಷಣೆ ಮತ್ತು ನವೀಕರಿಸಬಹುದಾದ ಇಂಧನದ ಮೇಲಿನ ಹೆಚ್ಚಿನ ಸಾರ್ವಜನಿಕ ವೆಚ್ಚದಿಂದಾಗಿ ಒಟ್ಟು ಸ್ಥಿರ ಬಂಡವಾಳ ರಚನೆಯಲ್ಲಿ ಬಲವಾದ ಬೆಳವಣಿಗೆಯನ್ನು ದಾಖಲಿಸಿದೆ. ಭಾರತದಲ್ಲಿ ಉದ್ಯೋಗ ಸೂಚಕಗಳು 2025ರಲ್ಲಿ ವ್ಯಾಪಕವಾಗಿ ಸ್ಥಿರವಾಗಿವೆ. ಅಕ್ಟೋಬರ್ 2025ರಲ್ಲಿ ನಿರುದ್ಯೋಗ ದರವು ಶೇ. 5.2 ರಷ್ಟಿತ್ತು. ಇದು 2024ರಲ್ಲಿ ಶೇ. 4.9ರಷ್ಟಿತ್ತು, ಆದರೆ ವರ್ಷದ ದ್ವಿತೀಯಾರ್ಧದಲ್ಲಿ ಗ್ರಾಮೀಣ ನಗರ ಪ್ರದೇಶಗಳಲ್ಲಿ ಕಾರ್ಮಿಕ ಬಲದ ಭಾಗವಹಿಸುವಿಕೆಯ ಹೆಚ್ಚಾಗಿದೆ.
>
> **ಕಾರ್ಮಿಕ ಬಲದ ಭಾಗವಹಿಸುವಿಕೆಯ ಹೆಚ್ಚಾಗಿದೆ**

ಆದ್ದರಿಂದ ನಮಗೆ ಹಣಕಾಸಿನ ಪ್ರಚೋದನೆ ಇತ್ತು. ಹೂಡಿಕೆಗೆ ನಮಗೆ ಸಕಾರಾತಕ ಹಣಕಾಸಿನ ಪ್ರಚೋದನೆ ಇತ್ತು ಮತ್ತು ಭಾರತ ಹೊಂದಿದ್ದ ಎಲ್ಲಾ ಬಲವಾದ ಬೆಳವಣಿಗೆಯ ಚಾಲಕಗಳ ಜೊತೆಗೆ ಕೃಷಿ ವಲಯದಿಂದ ಜಿಡಿಪಿಯ ಮೇಲೆ ಸಕಾರಾತಕ ಪರಿಣಾಮ ಬೀರಿದೆ. ಅದಕ್ಕಾಗಿಯೇ ತುಲನಾತ್ಮಕವಾಗಿ ಸವಾಲಿನ ಜಾಗತಿಕ ಪರಿಸರದ ಸಂದರ್ಭದಲ್ಲಿಯೂ ನಾವು ಅಸಾಧಾರಣವಾಗಿ ಹೆಚ್ಚಿನ ಬೆಳವಣಿಗೆಯನ್ನು ನೋಡುತ್ತಿದ್ದೇವೆ ಎಂದು ಅವರು ತಿಳಿಸಿದ್ದಾರೆ.

ಸರಕು ರಫ್ತುಗಳು ಸುಂಕಗಳಿಂದ ಪ್ರಭಾವಿತವಾಗಿದ್ದರೂ ಸ್ಥಿತಿಸ್ಥಾಪಕತ್ವವನ್ನು ಉಳಿಸಿಕೊಂಡಿದೆ. ಭಾರತ ಲಾಭ ಪಡೆದುಕೊಳ್ಳುವುದನ್ನು ಮುಂದುವರಿಸಲು ಬಹುಶಃ ಒಂದು ಮಾರ್ಗವೆಂದರೆ ತನ್ನ ಸೇವಾ ರಫ್ತುಗಳನ್ನು ಮತ್ತಷ್ಟು ಬಲಪಡಿಸುವುದು, ಪ್ರಸ್ತುತ ಇರುವ ಸ್ಥಳದಿಂದ ಹೊರಗೆ ಉತ್ಪಾದಕತೆಯನ್ನು ಹೆಚ್ಚಿಸುವ ಅಂಶಕ್ಕೆ ಕೊಂಡೊಯ್ಯುವ ಕೆಲವು ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಲು ಅದರ ಕೌಶಲ್ಯಪೂರ್ಣ ಮಾನವಶಕ್ತಿಯನ್ನು ಅವಲಂಬಿಸುವುದು.

ಭಾರತದಲ್ಲಿ ಗ್ರಾಹಕ ಬೆಲೆ ಹಣದುಬ್ಬರವು ನಿರೀಕ್ಷೆಗಿಂತ ಹೆಚ್ಚು ಕುಸಿದಿದ್ದು, ವರ್ಷದ ಮೊದಲ ಒಂಬತ್ತು ತಿಂಗಳಲ್ಲಿ ಸರಾಸರಿ ಮೂರು ಪ್ರತಿಶತದಷ್ಟು ಕಡಿಮೆಯಾಗಿದೆ. ಹಣದುಬ್ಬರವು ಶೇ.4.1ರಷ್ಟು ಏರಿಕೆಯಾಗುವ ನಿರೀಕ್ಷೆಯಿದೆ. ಇದು ಕೇಂದ್ರ ಬ್ಯಾಂಕಿನ ಮಧ್ಯಮ ಗುರಿಯ ಹತ್ತಿರದಲ್ಲಿದೆ.

